ಬೀದರ ▪ ಕಲಬುರಗಿ ▪ ಯಾದಗಿರಿ ▪ ರಾಯಚೂರ ▪ ಕೊಪ್ಪಳ ▪ ಬಳ್ಳಾರಿ ▪ ಬಾಗಲಕೋಟೆ ▪ ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ

Postal Registration No :BDR/ 054/2024-2026 ▪ Email:mallammanudi@gmail.com

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

MALLAMMA NUDI REGIONAL NEWSPAPER

ಸಂಪಾದಕರು:ರಮೇಶರೆಡ್ಡಿ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 331 | PAGE- ಪುಟ 8 | ಮಂಗಳವಾರ – 31-12-2024, ಬೀದರ | RNI NO:KARKAN/2011/48371 | RS.ಬೆಲೆ 2/–

ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ..

ಪ್ರೀಯ ಓದುಗರೇ.......

ಜಾಹಿರಾತುದಾರರೇ...

ತಮ್ಮೆಲ್ಲರ ಒತ್ತಾಸೆಯಂತೆ ನಿಮ್ಮ "ಮಲ್ಲಮ್ಮ ನುಡಿ" ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ ಎಂಬ ವಿಷಯ ತಿಳಿಸಲು ಹರ್ಷಿಸುತ್ತೇನೆ. ಹನ್ನೆರಡು ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ, ಹದಿಮೂರನೇ ವಸಂತಕ್ಕೆ ಕಾಲಿಡುತ್ತಿರುವ ಈ ಸುಸಂದರ್ಬದಲ್ಲಿ, ರಾಜ್ಯವೇ ಅಲ್ಲದೇ ದೇಶದ ವಿವಿಧಡೆಗಳಿಂದ ಸಹಕಾರ ದೊರೆತ ಹಿನ್ನಲೆಯಲ್ಲಿ ಪತ್ರಿಕೆಯನ್ನು ಡಿಜಿಟಲೀಕರಣಗೊಳಿಸಿ ನೂತನ ವೆಬ್‌ಸೈಟ್ ಲಾಂಚ್ ಮಾಡುವ ಮೂಲಕ onlineನಲ್ಲಿ ಪತ್ರಿಕೆ ವೀಕ್ಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈಗ ಪತ್ರಿಕೆಯನ್ನು ನೈಜ ಸುದ್ದಿಯೊಂದಿಗೆ ಹೊಸ ರೂಪದಲ್ಲಿ ನಿಮ್ಮ ಮುಂದಿಡುವ ಪ್ರಯತ್ನ ಮಾಡಲಾಗಿದೆ. ನಮ್ಮ ಈ ಪ್ರಯತ್ನಕ್ಕೆ. ಓದುಗರು, ಚಂದಾದಾರರು, ಹಾಗೂ ಜಾಹೀರಾತುದಾರರಾದ ತಾವುಗಳು ನಿಮ್ಮ ಮನೆಯ ಮಗನಂತೆ ತಮ್ಮ ಪ್ರೋತ್ಸಾಹ ವನ್ನು ಎಂದಿನಂತೆ ನೀಡುವಿರೆಂದು ನಿರೀಕ್ಷಿಸುತ್ತೆವೆ.



ಇಂತಿ
ರಮೇಶರಡ್ಡಿ
ಸಂಪಾದಕ

www.mallammanudi.in

# ನಕ್ಸಲರು ಶರಣಾದರೆ ಕಾನೂನಿನ ಚೌಕಟ್ಟಿನಲ್ಲಿ ಸ್ವಾಗತ

## ಸಿಎಂ ಸಿದ್ದರಾಮಯ್ಯ ಸ್ಪಷ್ಟ ಸಂದೇಶ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ನಕ್ಸಲೀಯ ಚಟುವಟಿಕೆಗಳಲ್ಲಿ ತೊಡಗಿರುವವರು ಶರಣಾಗಿ ಮುಖ್ಯವಾಹಿನಿಗೆ ಬರಬೇಕೆಂದು ಸರ್ಕಾರವು ಬಯಸುತ್ತದೆ. ನಕ್ಸಲೀಯರು ಮುಖ್ಯವಾಹಿನಿಗೆ ಬರಲು ಮುಂದಾದರೆ ಶರಣಾಗತಿ ಕುರಿತು ಈಗಾಗಲೇ ರೂಪಿಸಿರುವ ನೀತಿಯನ್ನು ಸರಳೀಕರಣಗೊಳಿಸಿ, ಸಮರ್ಪಕವಾಗಿ ಜಾರಿ ಮಾಡಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ನಕ್ಸಲೀಯರು ಪ್ರಜಾತಾಂತ್ರಿಕತೆಯ ಮುಖ್ಯವಾಹಿನಿಗೆ ಬರಬೇಕೆಂದು ಪ್ರತಿಪಾದಿಸುವ ಹಾಗೂ ಜೀವಹಾನಿಯು ಯಾವ ಕಡೆ–ಯು ನಡೆಯಬಾರದು ಎಂದು ಬಯಸುವ ವಿವಿಧ ಪ್ರಗತಿಪರ ಹಾಗೂ ಜನಪರ ವೇದಿಕೆಗಳ ಹಲವಾರು ಮುಖಂಡರು ಭೇಟಿ ಮಾಡಿದ್ದಾರೆ ಹಲವು ವಿಷಯಗಳ ಬಗ್ಗೆ ಚರ್ಚಿಸಿರುವುದಾಗಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಬಳಿಕ ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿ, 'ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹಾಗೂ ಶಾಂತಿ ನೆಲೆಸುವಂತೆ ಮಾಡಲು ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಹಿಂಜರಿಯುವುದಿಲ್ಲ' ಎಂದು ಸ್ಪಷ್ಟ ಸಂದೇಶ ರವಾನಿಸಿದ್ದಾರೆ.

'ನಕ್ಸಲೀಯರು ಮುಖ್ಯವಾಹಿನಿಗೆ ಬರಲು ಮಾತುಕತೆ ನಡೆಸಲು ಮುಂದಾಗಿದ್ದರೆ, ಈ ಪ್ರಕ್ರಿಯೆಯನ್ನು ಸರ್ಕಾರ ಕಾನೂನಿನ ಚೌಕಟ್ಟಿನಲ್ಲಿ ಸ್ವಾಗತಿಸಿ, ಸಹಾನುಭೂತಿಯಿಂದ ನಡೆದುಕೊಳ್ಳುತ್ತದೆ. ನಕ್ಸಲೀಯ ಚಟುವಟಿಕೆಗಳು ಕರ್ನಾಟಕದಲ್ಲಿ ನೆರೆಯ ರಾಜ್ಯಗಳಂತೆ ಎಂದೂ ವಿಪರೀತ ಪ್ರಮಾಣದಲ್ಲಿ ನಡೆದಿಲ್ಲ. ಆದರೆ, ಮಲೆನಾಡಿನಲ್ಲಿ ಎರಡು ದಶಕಗಳಿಂದ ಆಗಾಗ್ಗೆ ನಕ್ಸಲೀಯ ಚಟುವಟಿಕೆಗಳು ಕಾಣುತ್ತಲಿವೆ. ಆ ಕಾರಣದಿಂದ ಹಿಂಸೆ ಹಾಗೂ ಸಾವು, ಸೋವುಗಳು ಸಂಭವಿಸಿವೆ.'

'ಹಲವಾರು ಅಮಾಯಕರ, ಪೊಲೀಸರ ಮತ್ತು ನಕ್ಸಲೀಯ ಚಟುವಟಿಕೆಗಳಲ್ಲಿ ಇದ್ದವರ ಜೀವಹಾನಿಯೂ ಆಗಿದೆ. ಆದರೆ, ಪ್ರಜಾತಾಂತ್ರಿಕ ಸಮಾಜದಲ್ಲಿ ಬಂದೂಕಿನ ಮೂಲಕ ಬದಲಾವಣೆ ತರಲು ಹೊರಟಿರುವ ಆದರ್ಶವಾದಿಗಳು ತಮ್ಮ ಜೀವವನ್ನೂ ತೆತ್ತುಕೊಳ್ಳುತ್ತಾರೆ, ಇತರರ ಜೀವಹಾನಿಗೂ ಕಾರಣವಾಗುತ್ತಾರೆ. ಇದು ನೋವಿನ ವಿಚಾರವಾದರೂ, ಸಂವಿಧಾನಬದ್ಧವಾಗಿ ಆಡಳಿತ ನಡೆಸುವ ಸರ್ಕಾರ ಸುಮ್ಮನೇ ಕೂರುವುದು ಸಾಧ್ಯವಿಲ್ಲ. ಕರ್ನಾಟಕದ ಎಲ್ಲ ನಕ್ಸಲೀಯರು ಸಂಪೂರ್ಣವಾಗಿ ಶರಣಾಗತರಾಗಿ ಮುಖ್ಯವಾಹಿನಿಗೆ ಬರಲು ನಮ್ಮ ಸರ್ಕಾರವು ಬಯಸುತ್ತದೆ' ಎಂದಿದ್ದಾರೆ.

ಹಂತ ಹಂತವಾಗಿ ಆರ್ಥಿಕ ನೆರವು!

ನಕ್ಸಲೀಯರ ಶರಣಾಗತಿ ನೀತಿಯ ಅನ್ವಯ ಹಂತ ಹಂತವಾಗಿ ಆರ್ಥಿಕ ನೆರವು ನೀಡಲಾಗುವುದು. ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರದ ಸುಪರ್ಧಿಗೆ ಒಪ್ಪಿಸುವ ನಕ್ಸಲೀಯರಿಗೆ ಪ್ರೋತ್ಸಾಹ ಧನ, ಕೌಶಲ್ಯ ತರಬೇತಿಗಳು ನೀಡಲಾಗುವುದು. ಜತೆಗೆ ಅವರುಗಳ ಪುನರ್ವಸತಿಗೂ ಸಹ ಎಲ್ಲ ಕ್ರಮಗಳನ್ನು ಸಹಾನುಭೂತಿಯಿಂದ ಹಾಗೂ ಆದ್ಯತೆ ಮೇರೆಗೆ ಪರಿಗಣಿಸಲು ಕ್ರಮವಹಿಸಲಾಗುವುದು ಎಂದು

(2ನೇ ಪುಟ ನೋಡಿ...)

# ಬಸ್ ಪ್ರಯಾಣ ದರ ಹೆಚ್ಚಳವಿಲ್ಲ:ಸಚಿವ ರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಡಿ.30– ರಾಜ್ಯ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರವನ್ನು ತಕ್ಷಣ ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಇಲ್ಲ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ

ಬಸ್ ಪ್ರಯಾಣ ದರ ಹೆಚ್ಚಳವಾಗಲಿದೆ ಎನ್ನುವ ಆತಂಕ–ಕ್ಕೆ ಒಳಗಾಗಿದ್ದ ಪ್ರಯಾಣಿಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕೆಎಸ್‌ಆರ್‌ಟಿಸಿ ಮತ್ತು ಇತರ ಸಾರಿಗೆ ನಿಗಮಗಳ ಪ್ರಯಾಣ ದರ ಸದ್ಯಕ್ಕೆ ಹೆಚ್ಚಳ ಮಾಡುವುದಿಲ್ಲ ಈ ಬಗ್ಗೆ ಆತಂಕ ಬೇಡ ಎಂದಿದ್ದಾರೆ.

ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಳ ಮಾಡುವ ಯಾವುದೇ ಯೋಜನೆಗಳು ಸದ್ಯಕ್ಕೆ ಪರಿಗಣನೆಯಲ್ಲಿಲ್ಲ. ಈ ಹಿಂದೆ ಸಾರಿಗೆ ನಿಗಮಗಳು ಪ್ರಯಾಣ

(2ನೇ ಪುಟ ನೋಡಿ...)

# ವಿಜಯೇಂದ್ರಗೆ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಡಿ.30– ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರರ ಮಾತಿಗೆ ಅವರದೇ ಪಕ್ಷದಲ್ಲಿ ಕವಡೆ ಕಾಸಿನ ಕಿಮತ್ತಿಲ್ಲ. ಹೀಗಾಗಿ ಕಾಂಗ್ರೆಸ್ನ ನಾಯಕರನ್ನು ಟೀಕೆ ಮಾಡಿ ವಿಜಯೇಂದ್ರ ತಮ ಹುದ್ದೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೀದರ್ನ ಸಚಿನ್ ಅವರ ಆತಹತ್ಯೆ ಪ್ರಕರಣದಲ್ಲಿ ಆರೋಪಿ ಎಂದು ಹೇಳಲಾಗುತ್ತಿರುವ ವ್ಯಕ್ತಿ ನಮ ಪಕ್ಷದವರು ಎಂದು ನಾನು ಮೊದಲಿನಿಂದಲೇ ಹೇಳುತ್ತಿದ್ದೇನೆ. ನಾನು ಯಾವುದನ್ನೂ ಅಲ್ಲಗಳೆಯುತ್ತಿಲ್ಲ. ಯಾವುದೋ ಟೆಂಡರ್ ಕಾರಣಕ್ಕಾಗಿ ಹಣದ ವರ್ಗಾವಣೆಯಾಗಿದೆ ಎಂದು ಆರೋಪಿ ಸ್ಥಾನದಲ್ಲಿರುವವರು ಹೇಳುತ್ತಿದ್ದಾರೆ. ಇಲ್ಲಿ ಆರೋಪ–ಪ್ರತ್ಯಾರೋಪಗಳಿವೆ. ಸತ್ಯಾಂಶ ಹೊರಬರಬೇಕಾದರೆ ತನಿಖೆಯಾಗಬೇಕು ಎಂದು ನಾನೇ ಹೇಳುತ್ತಿದ್ದೇನೆ. ಇದರಲ್ಲಿ ಮುಚ್ಚಿಡುವಂತದ್ದು ಏನಿದೆ ಎಂದರು.

ಆರೋಪಿ ರಾಜು ಕಪನೂರು ಕಾಂಗ್ರೆಸ್ಗೆ ಬರುವ ಮುನ್ನ ಬಿಜೆಪಿಯಲ್ಲಿ ಪರಿಶಿಷ್ಟ ಜಾತಿಯ ಮೋರ್ಚದ ಅಧ್ಯಕ್ಷರಾಗಿದ್ದರು. ಕಲಬುರಗಿ ಉತ್ತರಕ್ಷೇತ್ರದಲ್ಲಿ ಎರಡು ಬಾರಿ ಬಿಜೆಪಿ ಅಭ್ಯರ್ಥಿಯಾಗಿದ್ದ ಚಂದು ಪಾಟೀಲ್ ಅವರ ಜೊತೆ ಇರುವ ಫೋಟೊಗಳು ವೈರಲ್ ಆಗುತ್ತಿವೆ. ಹಾಗೆಂದ ಮಾತ್ರಕ್ಕೆ ಈ ಪ್ರಕರಣದಲ್ಲಿ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ, ಆರ್. ಅಶೋಕ್, ವಿಜಯೇಂದ್ರ ಅವರ ಕೈವಾಡವಿದೆ ಎಂದು ನಾವು ಹೇಳಬಹುದೇ? ಎಂದು ಪ್ರಶ್ನಿಸಿದರು.

ಪ್ರತಿನಿತ್ಯ ಸಾಕ್ಷಿ ,ಆಧಾರ, ಪುರಾವೆಗಳಿಲ್ಲದೆ ಒಂದೊಂದು ರೀತಿಯ ಹೇಳಿಕೆಗಳನ್ನು ನೀಡುತ್ತಾ ಹೋದರೆ ಅದಕ್ಕೆಲ್ಲಾ ಉತ್ತರ ಕೊಡುತ್ತಾ ಕುಳಿತುಕೊಳ್ಳಲಾಗುವುದಿಲ್ಲ. ಆತಹತ್ಯೆ ಪ್ರಕರಣದಲ್ಲಿ ವಾಸ್ತವಾಂಶಗಳು ಮುನ್ನೆಲೆಗೆ ಬರಬೇಕು ಮತ್ತು ಕುಟುಂಬದ ಸದಸ್ಯರಿಗೆ ನ್ಯಾಯ ಸಿಗಬೇಕು. ಅದನ್ನು ಬಿಟ್ಟು ಬರೀ ರಾಜಕೀಯವೇ

(2ನೇ ಪುಟ ನೋಡಿ...)

# ಸಚಿನ್ ಸಾವಿನ ತನಿಖೆ ಸಿಬಿಐಗೆ ವಹಿಸಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 30 :– ಕಟ್ಟಿತೂಗಾಂವ್ (ಬೀದರ್ ಜಿಲ್ಲೆ): ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದ ಪಕ್ಷದ ಮುಖಂಡರನ್ನು ಒಳಗೊಂಡ ನಿಯೋಗ ಭಾನುವಾರ ಸಂಜೆ ಇಲ್ಲಿನ ಮೃತ ಯುವ ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ ಅವರ ಮನೆಗೆ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿತು.

ವಿಜಯೇಂದ್ರ ಅವರು ಸಚಿನ್ ಅವರ ಮನೆಯೊಳಗೆ ಬರುತ್ತಿದ್ದಂತೆ ಕುಟುಂಬ ಸದಸ್ಯರ ಆಕ್ರಂದನ ಮುಗಿಲು ಮುಟ್ಟಿತ್ತು. ಸಚಿನ್ ಅವರ ಭಾವಚಿತ್ರಕ್ಕೆ ಮಾಲೆ ಹಾಕಿ, ಸಾಂತ್ವನ ಹೇಳಿ, ಧೈರ್ಯ ತುಂಬಿದರು. 'ನಿಮ್ಮ ಜೊತೆಗೆ ನಾವಿದ್ದೇವೆ' ಎಂದರು. ಮುಚ್ಚಿದ ಲಕೋಟೆಯಲ್ಲಿ ನಗದು ಪರಿಹಾರ ಕೊಡಲು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮುಂದಾದಾಗ ಸಚಿನ್ ಸಹೋದರಿಯರು ಅದನ್ನು ನಿರಾಕರಿಸಿದರು. ವಿಜಯೇಂದ್ರ ಅವರು ಕೈಮುಗಿದು ಕೇಳಿಕೊಂಡರು ಸ್ವೀಕರಿಸಲಿಲ್ಲ. 'ನಮಗೆ ಪರಿಹಾರ ಬೇಕಿಲ್ಲ. ಸಚಿನ್ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಂಡರೆ ಸಾಕು' ಎಂದು ಹೇಳಿದರು.

ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿಜಯೇಂದ್ರ, ಸಚಿನ್ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು. ಸಚಿನ್ ಕುಟುಂಬಕ್ಕೆ ರಾಜ್ಯ ಸರ್ಕಾರ ರೂ.1 ಕೋಟಿ ಪರಿಹಾರ ಒದಗಿಸಬೇಕು. ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ ಕೊಡಬೇಕು. ಸಚಿನ್ ಕುಟುಂಬಕ್ಕೆ ನ್ಯಾಯ ಸಿಗಬೇಕಾದರೆ ಸಚಿವ ಪ್ರಿಯಾಂಕ್ ಖರ್ಗೆ ಅವರು

(2ನೇ ಪುಟ ನೋಡಿ...)

# ಗುತ್ತಿಗೆದಾರನ ಸಾವಿಗೂ ಪ್ರಿಯಾಂಕ್ ಖರ್ಗೆಗೂ ಸಂಬಂಧವಿಲ್ಲ : ಡಿಸಿಎಂ ಡಿ.ಕೆ.ಶಿವಕುಮಾರ್



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು : ನಮ್ಮದು ಸ್ವಚ್ಛ ಆಡಳಿತದ ಸರಕಾರ. ಗುತ್ತಿಗೆದಾರನ ಸಾವಿಗೂ ಸಚಿವ ಪ್ರಿಯಾಂಕ್ ಖರ್ಗೆಗೂ ಯಾವುದೇ ಸಂಬಂಧವಿಲ್ಲ. ಪ್ರಿಯಾಂಕ್ ಖರ್ಗೆ ಅವರ ಪ್ರಾಮಾಣಿಕತೆ ಬಗ್ಗೆ ನಮಗೆ ಗೊತ್ತಿದೆ. ಗುತ್ತಿಗೆದಾರನ ಸಾವಿನ ಬಗ್ಗೆ ಕಾನೂನು ಪ್ರಕಾರ ತನಿಖೆ ನಡೆಯುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಸೋಮವಾರ ಸದಾಶಿವನಗರದಲ್ಲಿರುವ ತಮ್ಮ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಈ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಪಾತ್ರವಿಲ್ಲ. ಆತ್ಮಹತ್ಯೆ ಪತ್ರದಲ್ಲಿ ಅವರ ವಿರುದ್ಧ ನೇರ ಆರೋಪವಿಲ್ಲ. ಬೇರೆಯವರ ಮೇಲೆ ಆರೋಪ ಮಾಡಿದಾಕ್ಷಣ ಇವರು ರಾಜೀನಾಮೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದರು.

ಗುತ್ತಿಗೆದಾರ ಸಾವಿಗೆ ಕಾರಣವಾಗಿರುವ ಆರೋಪ ಹೊತ್ತಿರುವ ರಾಜು ಕಾಂಗ್ರೆಸ್ ನಾಯಕರ ಜೊತೆ ಇರುವ ಫೋಟೋಗಳನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬಿಡುಗಡೆ ಮಾಡಿರುವ ಕುರಿತು ಹೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನನ್ನ ಜೊತೆ ವಿಜಯೇಂದ್ರ, ಯಡಿಯೂರಪ್ಪ ಇರುವ ಫೋಟೋಗಳಿವೆ. ನಮ್ಮ ಮನೆಗೆ ಬಂದವರು, ಮದುವೆ ಕಾರ್ಯಕ್ರಮಕ್ಕೆ ಹೋದಾಗ ಅನೇಕರು ನಮ್ಮ ಜೊತೆ ಫೋಟೋ ತೆಗೆಸಿಕೊಳ್ಳುತ್ತಾರೆ ಎಂದು ಹೇಳಿದರು. ವಿಜಯೇಂದ್ರ, ಯಡಿಯೂರಪ್ಪ ಕ್ರಿಮಿನಲ್, ರೌಡಿಗಳು ಸೇರಿದಂತೆ ಯಾರೆಲ್ಲರ ಜತೆ ಫೋಟೋ ತೆಗೆಸಿಕೊಂಡಿದ್ದಾರೆ ಎಂದು ನಾನು ಬಿಡುಗಡೆ ಮಾಡಲೇ? ಅವರಿಗೆ ಬೇಕು ಎಂದರೆ ಬಿಡುಗಡೆ ಮಾಡುತ್ತೇನೆ. ಆರೋಪಿಗಳು ಹಾಗೂ ನಮ್ಮ ಜತೆ ಮಾತುಕತೆ, ವ್ಯವಹಾರ ನಡೆದಿರುವುದಕ್ಕೆ ದಾಖಲೆ ಇದ್ದರೆ ಆರೋಪ ಮಾಡಲಿ. ನಾವು ಉತ್ತಮವಾಗಿ ಸರಕಾರ ನಡೆಸುತ್ತಿದ್ದು, ವಿರೋಧ ಪಕ್ಷದವರು ಸುಮ್ಮನೆ ಮಾತಾಡಬೇಕು ಎಂಬ ಕಾರಣಕ್ಕೆ ಮಾತನಾಡುತ್ತಾರೆ. ಮಾತಾಡಲಿ ಬಿಡಿ ಎಂದು ಅವರು ತಿರುಗೇಟು ನೀಡಿದರು.ಬಿಜೆಪಿ

(2ನೇ ಪುಟ ನೋಡಿ...)

# ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಿ ಎಸಿ ಆದೇಶ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಡಿಸೆಂಬರ್.28 – 2023–24ನೇ ಸಾಲಿನ ಗೆಜೆಟೆಡ್ ಪ್ರೋಬೇಷನರ್ಸ್ ಗ್ರೂಪ್ 'ಎ' ಮತ್ತು 'ಬಿ' ವೃಂದದ ಒಟ್ಟು 384 ಹುದ್ದೆಗಳ ಪೂರ್ವಭಾವಿ ಮರುಪರೀಕ್ಷೆಗಳು ಬೀದರ ಜಿಲ್ಲೆಯ ಒಟ್ಟು 19 ಪರೀಕ್ಷಾ ಕೇಮದ್ರಗಳಲ್ಲಿ ನಡೆಯುತ್ತಿದ್ದು, ಸದರಿ ಮರುಪರೀಕ್ಷೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ದೋಷರಹಿತವಾಗಿ ನಡೆಸಲು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ–2023ರ ಕಲಂ 163 (1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಿಲ್ಲೆಯ 19 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ನಿಷೇದಾಜ್ಞೆಯನ್ನು ಜಾರಿಗೊಳಿಸಿ ಬೀದರ ಸಹಾಯಕ ಆಯುಕ್ತರು ಹಾಗೂ ಉಪವಿಭಾಗಾಧಿಕಾರಿಗಳಾದ ಮೊಹಮ್ಮದ್ ಶಕೀಲ್ ಅವರು ಆದೇಶಿಸಿರುತ್ತಾರೆ.

## ಅನುದಾನವನ್ನು ಕಾಲಮಿತಿಯಲ್ಲಿ ವೆಚ್ಚ ಮಾಡಿ

# ಜಿಪಂ ಸಿಇಓ ರಾಹುಲ್ ಪಾಂಡ್ವೆ ಅಧಿಕಾರಿಗಳಿಗೆ ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು,ಡಿ.30– ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ರೂಪಿಸುವ ಯೋಜನೆಗಳಿಗೆ ಬಿಡುಗಡೆಯಾಗುವ ಅನುದಾನವನ್ನು ಕಾಲಮಿತಿಯಲ್ಲಿ ವೆಚ್ಚ ಮಾಡಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಡಿ.30ರ ಸೋಮವಾರ ದಂದು ನಗರದ ಜಿಲ್ಲಾ ಪಂಚಾಯತಿಯ ಜಲ ನಿರ್ಮಲ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ ಡಿಸೆಂಬರ್ ತಿಂಗಳಿನ ಅಂತ್ಯದವರೆಗಿನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸೌಲಭ್ಯಗಳನ್ನು ಒದಗಿಸಲು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಶೀಘ್ರವೇ ಪೂರ್ಣಗೊಳಿಸಿ ಪಟ್ಟಿ ಮಾಡಬೇಕು. ಅರ್ಜಿಗಳನ್ನು ಆಹ್ವಾನಿಸಿದ್ದಲ್ಲಿ ನಿಗದಿತ ಅವಧಿಯೊಳಗೆ ಪ್ರಕ್ರಿಯೆ ಕೈಗೊಂಡು ಪಟ್ಟಿ ಸಿದ್ಧಪಡಿಸಬೇಕು. ಫಲಾನುಭವಿಗಳಿಗೆ

(2ನೇ ಪುಟ ನೋಡಿ...)

# ಸತ್ಯಾನಂದ ಪಾತ್ರೋಟ ತಾಯಿ ಹೃದಯದ ಕವಿ–ಡಿಸಿ ಜಾನಕಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.30–ದೇಶ ನಡೆಸುವ ರಾಜಕಾರಣಿಗಳು ಸೇರಿದಂತೆ ಪ್ರತಿಯೊಂದು ಸಂಘ ಸಂಸ್ಥೆಗಳನ್ನು ನಡೆಸುವವರಲ್ಲಿ ತಾಯ್ತನ ಇದ್ದಾಗ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯವಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ಹೇಳಿದರು.

ನವನಗರದ ಬಾಪೂಜಿ ಬ್ಯಾಂಕಿನ ಕೇಂದ್ರ ಕಚೇರಿಯ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಜಾಜಿ ಮಲ್ಲಿಗೆ ಕವಿ ಡಾ. ಸತ್ಯಾನಂದ ಪಾತ್ರೋಟ ಅವರ 'ತಾನು ಕವಿತೆಯಾಗಿ ನನ್ನನ್ನು ಕವಿತೆಯಾಗಿಸಿದಳು' ಹಾಗೂ 'ಬಟಾ ಬಯಲು' ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೃತಕ ಸಾಹಿತಿಗಳು ಮತ್ತು ಒಣ ಪ್ರತಿಷ್ಠೆಗೆ ಸಾಹಿತ್ಯವನ್ನು ಬಳಸಿಕೊಳ್ಳುವವರಲ್ಲಿ ಏನನ್ನು ಕಾಣಲು ಸಾಧ್ಯವಿಲ್ಲ. ಆದರೆ, ಸಹಜತೆಯಿಂದ ಕವಿಯಾದವರಲ್ಲಿ ತಾಯಿತನದ ಹೃದಯ ಇರುತ್ತದೆ. ಒಳ್ಳೆಯ ಗುಣಗಳು ಹಾಗೂ ಸಾರ್ಥಕ ಬದುಕು ಅವರಲ್ಲಿ ಇರುತ್ತದೆ ಅಂತಹ ಕವಿಗಳ ಕೃತಿಗಳನ್ನು ಪ್ರತಿಯೊಬ್ಬರು ಓದಬೇಕು ಎಂದರು.

ಸತ್ಯಾನಂದ ಪಾತ್ರೋಟಿಯವರು ಒಬ್ಬ ತಾಯಿಯ ಹೃದಯದ ಕವಿಯಾಗಿದ್ದಾರೆ. ಅವರ ಕೃತಿಗಳು ಓದುವಂತವುಗಳು. ತಾನು ಕವಿತೆಯಾಗಿ ನನ್ನನ್ನು ಕವಿಯಾಗಿಸಿದಳು ಮತ್ತು ಬಟಾ ಬಯಲು ಎರಡೂ ಕೃತಿಗಳನ್ನು ಪ್ರತಿಯೊಬ್ಬರು ಓದಬೇಕು. ಇದರಿಂದ ಇವರಿಗೆ ಕವಿ ಚಕ್ರವರ್ತಿ ಸ್ಥಾನ ದೊರೆಯುವಂತಾಗಲಿ ಎಂದು ಜಾನಕಿ ಶುಭ ಹಾರೈಸಿದರು.

ಜಾಜಿ ಮಲ್ಲಿಗೆ ಕವಿ ಸತ್ಯಾನಂದ ಪಾತ್ರೋಟ ಮಾತನಾಡಿ, ಸಂಕಷ್ಟ, ಅವಮಾನ, ಬಡತನ ಹಾಗೂ ಹಸಿವೆಯಿಂದಲೇ ಕವನಗಳು ಹುಟ್ಟಲು ಸಾಧ್ಯ. ಹಸಿವೆಗೆ ಜಾತಿ–ಮತ, ವರ್ಣ ಬೇಧವಿಲ್ಲ. ಅಂತಹ ಹಸಿವೆಯಿಂದಲೇ ನನ್ನ ಈ ಕವನ ಹುಟ್ಟಿಕೊಂಡಿದೆ. ಇಂದಿನ ದಿನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಜಾತಿ ಹಾಗೂ ಧರ್ಮ ಸೇರಿಕೊಂಡು, ಮೊದಲಿನ ಸಾಮರಸ್ಯದ ಬದುಕು ಹಾಳಾಗುತ್ತಿದೆ. ಜಾತಿ ಹಾಗೂ ಧರ್ಮವನ್ನು ಬಿಟ್ಟು

(2ನೇ ಪುಟ ನೋಡಿ...)

# ಒಂದನೆ ಪುಟದಿಂದ...

## ನಕ್ಸಲರು ಶರಣಾದರೆ ಕಾನೂನಿನ ಚೌಕಟ್ಟಿನಲ್ಲಿ ಸ್ವಾಗತ

ಭರವಸೆ ನೀಡಿದ್ದಾರೆ. 'ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರು ಶರಣಾಗತರಾದರೆ, ಅವರ ಮೇಲಿರುವ ಮೊಕದ್ದಮೆ, ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ಅವರಿಗೆ ಕಾನೂನಿನ ನೆರವು ಸಹ ನೀಡಲಾಗುವುದು. ಈಗಾಗಲೇ ಶರಣಾಗತರಾದ ನಕ್ಸಲೀಯರ ಅಗತ್ಯಗಳನ್ನು ಸಹ ಗುರುತಿಸಿ ಅವರಿಗೂ ಸಹ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆಯನ್ನು ಮಾಡಲಾಗುತ್ತಿದೆ' ಎಂದು ತಿಳಿಸಿದ್ದಾರೆ.

**ಕಠಿಣ ಕಾನೂನು ಕ್ರಮ ನಿಶ್ಚಿತ**

ಹೋರಾಟದ ಹೆಸರಿನಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವ ಮತ್ತು ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗುವ ಯಾರೇ ಆದರೂ, ಅವರ ವಿರುದ್ಧ ಕಠಿಣವಾದ ಕಾನೂನು ಕ್ರಮವನ್ನು ನಮ್ಮ ಸರ್ಕಾರವು ತೆಗೆದುಕೊಳ್ಳಲಿದೆ ಎಂದೂ ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

## ತಾಯಿ ಹೃದಯದ ಕವಿ–ಡಿಸಿ ಜಾನಕಿ

ಮನುಷ್ಯನನ್ನು ಪ್ರೀತಿಸಬೇಕು ಎಂದರು. ಎಲ್ಲ ಮಕ್ಕಳಿಗೂ ಅವರ ತಾಯಂದಿರೇ ಕವಯಿತ್ರಿಗಳು. ನಾನು ಈ ಕೃತಿ ಪ್ರಾರಂಭಿಸಿದಾಗ ರಾಜ್ಯದ 55 ಜನ ಖ್ಯಾತ ಸಾಹಿತಿಗಾರರು, ಕವಿಗಳು ಹಾಗೂ ಸಂಗೀತ ನಿರ್ದೇಶಕರು ತಮ್ಮ ತಾಯಿಗಳ ಕುರಿತು ಕವಿತೆಗಳನ್ನು ಕಳುಹಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಇದೊಂದು ಹೊಸ ಪ್ರಯೋಗ ಎಂದ ಪಾತ್ರೋಟ, ನನಗೆ ಜೀವ ಕೊಟ್ಟವಳು ಒಬ್ಬ ತಾಯಿಯಾಗಿರಬಹುದು. ಆದರೆ ತುತ್ತು ಕೊಟ್ಟು ನಾನು ಇಲ್ಲಿಯವರೆಗೆ ಸಾಧನೆ ಮಾಡಲು ಒಟ್ಟು 6 ಜನ ಮಹಿಳೆಯರು ಕಾರಣೀಕೃತರಾಗಿದ್ದರು. ಈ ಎಲ್ಲರೂ ನನಗೆ ತಾಯಂದಿರ ಸಮಾನರಾದ ಕಾರಣ ನನಗೆ ಒಟ್ಟು 6 ತಾಯಂದಿರು ಎಂದರು. ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷೆ ಡಾ. ಲಲಿತಾ ಹೊಸಪ್ಯಾಟಿ ಮಾತನಾಡಿ, ಸತ್ಯಾನಂದ ಪಾತ್ರೋಟ ಅವರು ನಮ್ಮ ಉತ್ತರ ಕರ್ನಾಟಕದ ಹೆಮ್ಮೆಯ ಕವಿ. ಸತ್ಯಾನಂದ ಪಾತ್ರೋಟ ಅವರ ಹೆಸರೇ ಸತ್ಯದ ಪ್ರತೀಕ. ಅವರ ಹಾಗೆಯೇ ಅವರ ಕವಿತೆಗಳಲ್ಲಿ ಪದಗಳನ್ನು ಹೆಣೆಯಲಾಗಿದೆ. ಕವಿ ಹಾಗೂ ಕವಿತೆಗೆ ಎಂದಿಗೂ ಸಾವಿಲ್ಲ ಎಂದರು.

ಉಮಾ ಎಸ್.ಆರ್.ಪಾಟೀಲ ಹಾಗೂ ಶಕುಂತಲಾ ಬಿ.ಕೆ.ಹಿರೇಮಠ ಅವರು ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು. ಇಳಕಲ್ಲನ ಚಿತ್ತರಗಿ ಸಂಸ್ಥಾನಮಠದ ಡಾ.ಗುರುಮಹಾಂತ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಮಾಜಿ ಸಚಿವ ಎಸ್.ಆರ್.ಪಾಟೀಲ, ಬೀಳಗಿಯ ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಎನ್.ಪಾಟೀಲ, ಸುರೇಶಗೌಡ ಪಾಟೀಲ, ಪ್ರವೇಶ ಪಾತ್ರೋಟ, ಮಲ್ಲಮ್ಮ ಪಾಟೀಲ, ಅಶ್ವಿನಿ ಪಾತ್ರೋಟ, ಶೋಭಾ ಕಲಬುರ್ಗಿ, ಭಾಗೀರಥಿ ಪಾಟೀಲ, ಶಕುಂತಲಾ ಕಂಕಣಮೇಲಿ, ಜ್ಯೋತಿ ಕವಳ್ಳಿ ಹಾಗೂ ಸಮತಾ ಪಾತ್ರೋಟ ಸೇರಿದಂತೆ ಇತರರಿದ್ದರು.

## ಸಚಿನ್ ಸಾವಿನ ತನಿಖೆ ಸಿಬಿಐಗೆ ವಹಿಸಿ;ಜನವರಿ 2ರಿಂದ.

ರಾಜೀನಾಮೆ ಕೊಡಬೇಕು. ಇದು ಸಚಿನ್ ಅವರ ಆತ್ಮಹತ್ಯೆಯಲ್ಲ, ಸರ್ಕಾರವೇ ವ್ಯವಸ್ಥಿತವಾಗಿ ಮಾಡಿದ ಕೊಲೆ. ಮುಖ್ಯಮಂತ್ರಿಯವರು ಖರ್ಗೆ ಅವರನ್ನು ಕೂಡಲೇ ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿದರು.

ಸಿಬಿಐ ಹೊರತುಪಡಿಸಿ ಇನ್ಯಾವುದೇ ಸಂಸ್ಥೆಯಿಂದ ತನಿಖೆ ನಡೆಸಿದರೆ ಬಿಜೆಪಿ ಒಪ್ಪುವುದಿಲ್ಲ. ರಾಜ್ಯದ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಪ್ರಿಯಾಂಕ್ ಖರ್ಗೆ ಅವರು ಸಚಿನ್ ಅವರ ಕುಟುಂಬದವರನ್ನು ಹೆದರಿಸಬಹುದು ಎಂದರು.

ಸಚಿನ್ ಕುಟುಂಬಸ್ಥರು ನಮಗೆ ರಕ್ಷಣೆ ಬೇಕು ಎಂದು ಕೇಳುತ್ತಿದ್ದಾರೆ. ರಾಜ್ಯ ಸರ್ಕಾರ ರಕ್ಷಣೆ ಒದಗಿಸಬೇಕು. ಪ್ರಿಯಾಂಕ್ ಖರ್ಗೆ ಅವರಿಗೆ ಕಲಬುರಗಿಯಲ್ಲಿ ಯಾರೂ ಬೆಳೆಯಬಾರದು. ಅವರು ಬೆಳೆದರೆ ಅವರನ್ನು ಕೊಲೆ ಮಾಡಿಸಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ಆರೋಪಿಸಿದರು.

ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ, ಎಂ.ಜಿ. ಮುಳೆ, ಶಾಸಕರಾದ ಡಾ. ಶೈಲೇಂದ್ರ ಕೆ. ಬೆಲ್ದಾಳೆ, ಡಾ. ಸಿದ್ದಲಿಂಗಪ್ಪ ಪಾಟೀಲ, ಶರಣು ಸಲಗರ, ಬಸವರಾಜ ಮತ್ತಿಮಡು, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಪಾಟೀಲ, ಮುಖಂಡರಾದ ಪ್ರಕಾಶ ಖಂಡ್ರೆ, ಶಶಿಲ್ ಜಿ. ನಮೋಶಿ, ಬಿಜೆಪಿ ಜಿಲ್ಲಾ ಮಾಧ್ಯಮ ಸಂಚಾಲಕ ಶ್ರೀನಿವಾಸ ಚೌಧರಿ ಮತ್ತಿತರರು ಹಾಜರಿದ್ದರು.

'ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆದರೆ ಸಿಎಂ ಸ್ಥಾನಕ್ಕೆ ಕುತ್ತು'

'ಪ್ರಿಯಾಂಕ್ ಖರ್ಗೆ ಅವರು ಯಾರ ಮಗ ಎನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಗೊತ್ತಿದೆ. ಒಂದುವೇಳೆ ಪ್ರಿಯಾಂಕ್ ಅವರ ರಾಜೀನಾಮೆ ಪಡೆದರೆ ಸಿಎಂ ಸ್ಥಾನಕ್ಕೆ ಕುತ್ತು ಬರಬಹುದು ಎಂದು ಸಿದ್ದರಾಮಯ್ಯ ಸುಮ್ಮನಾಗಿದ್ದಾರೆ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಪ್ರಿಯಾಂಕ್ ಖರ್ಗೆ ಅವರು ಸುಪಾರಿ ಖರ್ಗೆ ಆಗಿದ್ದಾರೆ. ಸಚಿನ್ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ಡೆತ್‌ನೋಟ್ ಬರೆದಿಟ್ಟು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಸಹೋದರರನ್ನು ರಕ್ಷಿಸುವಂತೆ ಸಹೋದರಿಯರು ಪೊಲೀಸ್ ಠಾಣೆಗೆ ಹೋಗಿ ಕೇಳಿಕೊಂಡರೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಪ್ರಿಯಾಂಕ್ ಖರ್ಗೆ ಅವರು ಈ ಕೇಸ್‌ನಲ್ಲಿ ಇದ್ದಾರೆಂದು ಪೊಲೀಸರು ದೂರು ಸ್ವೀಕರಿಸಲಿಲ್ಲ. ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಬೆನ್ನೆಲುಬಾಗಿದ್ದಾರೆ ಎಂದು ಆರೋಪಿಸಿದರು.

'ಸಚಿನ್ ಆತ್ಮಹತ್ಯೆ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ನಮ್ಮ ಹೋರಾಟದ ಬಗ್ಗೆ ಒಂದೆರೆಡು ದಿನಗಳಲ್ಲಿ ತೀರ್ಮಾನಿಸುತ್ತೇವೆ. ಸಿಬಿಐ ತನಿಖೆಗೆ ವಹಿಸುವವರೆಗೆ ಸುಮ್ಮನಿರುವುದಿಲ್ಲ' ಎಂದರು.

**'ಪೊಲೀಸರ ನಿರ್ಲಕ್ಷ್ಯದಿಂದ ಸಚಿನ್ ಸಾವು'**

'ಪೊಲೀಸರ ನಿರ್ಲಕ್ಷ್ಯದಿಂದ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಸಾವಾಗಿದೆ. ಸಚಿನ್ ಕಾಣೆಯಾಗಿದ್ದಾನೆ ಎಂದು ಅವರ ಸಹೋದರಿಯರು ಪೊಲೀಸ್ ಠಾಣೆಗೆ ಹೋಗಿ ತಿಳಿಸಿದರೂ ಪೊಲೀಸರು ಏನೂ ಮಾಡದೆ ನಿರ್ಲಕ್ಷ್ಯ ತೋರಿದ್ದಾರೆ. ಸಹೋದರನ ಉಳಿಸಿಕೊಂಡು ಎಂದು ಗೋಗರೆದರೂ ಪೊಲೀಸರು ಕಿವಿಗೊಟ್ಟಿಲ್ಲ. ಮನುಷ್ಯತ್ವ ಇದ್ದವರು ಈ ರೀತಿ ಮಾಡುವುದಿಲ್ಲ. ಸಚಿನ್ ಅವರ ಸಹೋದರಿಯರ ಮನೆಗೆ ಬಂದು ಧಮ್ಕಿ ಹಾಕಿದ್ದಾರೆ. ಸಹೋದರಿಯರ ಮಾನಕ್ಕೆ ಹೆದರಿ ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

'ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಮಾನ– ಮರ್ಯಾದೆ ಇದ್ದರೆ ಸಚಿನ್ ಕುಟುಂಬದವರ ಮನವಿಯಂತೆ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಇಂತಹ ಅನೇಕ ಘಟನೆಗಳು ನಡೆದಿವೆ. ಎಲ್ಲ ಪ್ರಕರಣಗಳನ್ನು ಸರ್ಕಾರ ಮುಚ್ಚಿ ಹಾಕಿದೆ. ರಾಜ್ಯದಲ್ಲಿ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿವೆ' ಎಂದು ಗಂಭೀರ ಆರೋಪ ಮಾಡಿದರು.

## ಬಸ್ ಪ್ರಯಾಣ ದರ ಹೆಚ್ಚಳವಿಲ್ಲ:ಸಚಿವ ರೆಡ್ಡಿ

ಪರಿಷ್ಕರಣೆಗೆ ಪ್ರಸ್ತಾವನೆ ಸಲ್ಲಿಸಿದ್ದವು. ಆದರೆ, ಇತ್ತೀಚೆಗೆ ಪ್ರಯಾಣ ದರ ಹೆಚ್ಚಳಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ ಎಂದು ಸಚಿವರು ಖಚಿತಪಡಿಸಿದ್ದಾರೆ.

ಪ್ರಯಾಣ ದರ ಏರಿಕೆ ಕುರಿತು ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ, ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಯಾಣ ದರ ಏರಿಕೆಗೆ ಶಿಫಾರಸು ಮಾಡಿದ್ದರೂ ಅಂತಿಮ ನಿರ್ಧಾರ ಸರ್ಕಾರದ್ದು.

ಸಾರಿಗೆ ನಿಗಮ ಮಂಡಳಿ ಸಭೆಯಲ್ಲಿ ಈ ವಿಷಯಹೇಳಿದರು ಚರ್ಚೆಗಳು ನಡೆಯಲಿದ್ದು, ಯಾವುದೇ ಬದಲಾವಣೆಗಳಿಗೆ ಸರ್ಕಾರದ ಅನುಮೋದನೆ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ

## ನಾಪತ್ತೆಯಾದ ಬಾಲಕನ ಮೂರುಗಂಟೆಯೊಳಗೆ ಪತ್ತೆ ಹಚ್ಚಿದ ಪೊಲೀಸರು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.30– ನಾಪತ್ತೆಯಾದ ಬಾಲಕನೊಬ್ಬನನ್ನು ಮೂರುಗಂಟೆಯೊಳಗೆ ಪತ್ತೆ ಹಚ್ಚಿ ಪಾಲಕರಿಗೆ ಒಪ್ಪಿಸುವಲ್ಲಿ ಇಲ್ಲಿನ ಅಶೋಕನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ನಗರದ ಎನ್‌ಜಿಓ ಕಾಲೋನಿಯ ದತ್ತ ನಗರದ ವೇದಾಂತ ತಂದೆ ಶಶಿಧರ್ ಜಾಧವ್ ಎಂಬ 4 ವರ್ಷದ ಬಾಲಕ ಮನೆ ಮುಂದೆ ಮಧ್ಯಾಹ್ನ ಆಟವಾಡುತ್ತಿದ್ದ ವೇಳೆ ನಾಪತ್ತೆಯಾಗಿದ್ದ. ಬಾಲಕನ ಪಾಲಕರು ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

# ಒಂದನೆ ಪುಟದಿಂದ...

## ಜಿಪಂ ಸಿಇಓ ರಾಹುಲ್ ಪಾಂಡ್ವೆ ಅಧಿಕಾರಿಗಳಿಗೆ ಸೂಚನೆ

ಆದಷ್ಟು ಶೀಘ್ರವೇ ಸೌಲಭ್ಯಗಳು ತಲುಪುವಂತೆ ನೋಡಿಕೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪ್ರತಿ ಇಲಾಖೆಗೆ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳಿಗಾಗಿ ಪ್ರತ್ಯೇಕವಾಗಿ ಹಣ ನಿಗದಿಯಾಗುತ್ತದೆ. ಫಲಾನುಭವಿಗಳ ಗುರಿಯೂ ನಿರ್ಧಾರವಾಗಿರುತ್ತದೆ. ವಿಳಂಬವಾಗಿದೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಸಬೇಕು. ಗುರಿಗೆ ಅನುಸಾರ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ಈ ಕಾರ್ಯದಲ್ಲಿ ಯಾವುದೇ ಇಲಾಖೆಗಳು ವಿಳಂಬ ಮಾಡಬಾರದು ಎಂದರು. ಕೆಲವು ಇಲಾಖೆಗಳು ನಿರೀಕ್ಷೆಗೆ ಹಾಗೂ ಗುರಿಗೆ ಅನುಗುಣವಾಗಿ ಪ್ರಗತಿ ಸಾಧಿಸುತ್ತಿವೆ. ಬಾಕಿ ಇರಿಸಿಕೊಂಡಿರುವ ಇಲಾಖೆಗಳು ನಿಯಮಾನುಸಾರ ಪ್ರಕ್ರಿಯೆ ಕೈಗೊಳ್ಳಬೇಕು.

ಈ ಅನುದಾನವು ಪರಿಶಿಷ್ಟರ ಕಲ್ಯಾಣಕ್ಕೆ ಸದುಪಯೋಗವಾಗುವ ನಿಟ್ಟಿನಲ್ಲಿ ಕ್ರಮವಹಿಸಬೇಕು. ಮುಂದಿನ ಸಭೆಯ ವೇಳೆಗೆ ಹೆಚ್ಚಿನ ಪ್ರಗತಿ ಸಾಧಿಸಿ ಗುರಿಮುಟ್ಟಲು ಪ್ರಯತ್ನಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.ಸೂಚಿತ ಅವಧಿಯೊಳಗೆ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ತಾಲ್ಲೂಕು ಹಂತದ ಅಧಿಕಾರಿಗಳು ಕಾರ್ಯ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಸೂಚಿಸಬೇಕು. ವಿಶೇಷ ಸಭೆಗಳನ್ನು ನಡೆಸಿ ನಿರ್ದಿಷ್ಟ ಪಡಿಸಿರುವ ಗುರಿಗೆ ಅನುಗುಣವಾಗಿ ಆದಷ್ಟು ಮೊದಲೇ ಸಾಧನೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ದೇಶನ ನೀಡಿದರು.

ಇದೇ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಚಿದಾನಂದ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಪ್ರಕಾಶ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕಾಳಪ್ಪ ಬಡಿಗೇರ, ಆಯುಷ್ ಇಲಾಖೆಯ ಅಧಿಕಾರಿ ಡಾ.ಶಂಕರಗೌಡ ಎಸ್. ಪಾಟೀಲ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಿರೇಶ್ ನಾಯಕ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜೇಂದ್ರ ಜಲ್ದಾರ್, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಧಿಕಾರಿ ಶ್ರೀದೇವಿ, ಪಶು ಸಂಗೋಪನಾ ಇಲಾಖೆಯ ನಿರ್ದೇಶಕರಾದ ಅಶೋಕ ಕೋಲಕಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

## ಗುತ್ತಿಗೆದಾರನ ಸಾವಿಗೂ ಪ್ರಿಯಾಂಕ್ ಖರ್ಗೆಗೂ ಸಂಬಂಧವಿಲ್ಲ : ಡಿಸಿಎಂ ಡಿ.ಕೆ.ಶಿವಕುಮಾರ್

ಉತ್ತಮವಾಗಿ ಸರಕಾರ ನಡೆಸುತ್ತಿದ್ದು, ವಿರೋಧ ಪಕ್ಷದವರು ಸುಮ್ಮನೆ ಮಾತಾಡಬೇಕು ಎಂಬ ಕಾರಣಕ್ಕೆ ಮಾತನಾಡುತ್ತಾರೆ. ಮಾತಾಡಲಿ ಬಿಡಿ ಎಂದು ಅವರು ತಿರುಗೇಟು ನೀಡಿದರು.ಬಿಜೆಪಿ ಅವಧಿಯಲ್ಲಿ ಯಾಕೆ ಸಿಬಿಐ ತನಿಖೆಗೆ ನೀಡಲಿಲ್ಲ?: ಪ್ರಕರಣವನ್ನು ಸಿಬಿಐ ತನಿಖೆಗೆ ನೀಡುವಂತೆ ಒತ್ತಾಯಿಸಿ ಮುತ್ತಿಗೆ ಹಾಕುತ್ತೇವೆ ಎಂಬ ಬಿಜೆಪಿ ನಾಯಕರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, ಮುತ್ತಿಗೆ ಹಾಕಲಿ. ನನ್ನ ಸಹೋದರ ಸುರೇಶ್, ರಾಜರಾಜೇಶ್ವರಿ ನಗರದ ಕೆಲವು ಪ್ರಕರಣಗಳನ್ನು ಪ್ರಸ್ತಾಪಿಸಿದ್ದಾರೆ. ಅವೆಲ್ಲವನ್ನು ಸೇರಿಸಿ ಸಿಬಿಐಗೆ ವಹಿಸೋಣ ಎಂದರು. ಬಿಜೆಪಿ ಸರಕಾರ ಇದ್ದಾಗ ನನ್ನ ಪ್ರಕರಣವನ್ನು ಮಾತ್ರ ಸಿಬಿಐಗೆ ನೀಡಿದ್ದರು. ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಡಿ.ಕೆ.ರವಿ ಸಾವು, ಸೌಜನ್ಯಾ ಸಾವು, ಪರೇಶ್ ಮೆಸ್ತಾ ಪ್ರಕರಣ ಸೇರಿದಂತೆ ಸುಮಾರು 12 ಪ್ರಕರಣಗಳನ್ನು ಸಿಬಿಐ ತನಿಖೆಗೆ ನೀಡಿದ್ದೆವು. ಬಿಜೆಪಿಯವರು ನನ್ನ ಪ್ರಕರಣದ ಜತೆ ಬಿಜೆಪಿ ಸಚಿವರ ಪ್ರಕರಣಗಳನ್ನು ಸಿಬಿಐಗೆ ನೀಡಬೇಕಿತ್ತು. ಯಾಕೆ ನೀಡಲಿಲ್ಲ ಎಂದು ಉಪ ಮುಖ್ಯಮಂತ್ರಿ ಪ್ರಶ್ನಿಸಿದರು.ಪ್ರಿಯಾಂಕ್ ಖರ್ಗೆ ಬಗ್ಗೆ ಬಿಜೆಪಿಗೆ ಅಸೂಯೆ: ಬಿಜೆಪಿಯವರು ಪ್ರಿಯಾಂಕ್ ಖರ್ಗೆ ರಾಜೀನಾಮೆ ಕೇಳುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಅವರು ಯಾವ ತಪ್ಪು ಮಾಡಿದ್ದಾರೆ ಎಂದು ರಾಜೀನಾಮೆ ನೀಡಬೇಕು? ಪ್ರಿಯಾಂಕ್ ಖರ್ಗೆ ನಮ್ಮ ಪಕ್ಷದ ಧ್ವನಿ. ಅವರ ಮೇಲಿನ ಅಸೂಯೆಗೆ ವಿಪಕ್ಷಗಳು ಈ ರೀತಿ ನಡೆದುಕೊಳ್ಳುತ್ತಿವೆ ಎಂದು ಟೀಕಿಸಿದರು. ದಲಿತ ಸಮುದಾಯದ ನಾಯಕ ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆಯುತ್ತಿರುವುದನ್ನು ಸಹಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ಐಟಿ–ಬಿಟಿ ಇಲಾಖೆಯನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಎಸ್.ಎಂ.ಕೃಷ್ಣ ಅವರ ಸರಕಾರದ ನಂತರ ಐಟಿ–ಬಿಟಿ ಕ್ಷೇತ್ರದಲ್ಲಿ ರಾಜ್ಯವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವುದು ಪ್ರಿಯಾಂಕ್ ಖರ್ಗೆ. ಹೀಗಾಗಿ ಅವರನ್ನು ಕೆಳಗಿಳಿಸುವ ಸಂಚು ಮಾಡುತ್ತಿದ್ದಾರೆ ಎಂದು ಶಿವಕುಮಾರ್ ಹೇಳಿದರು. ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಆಗಿರುವ ಗೊಂದಲದ ಬಗ್ಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ, ಈ ವಿಚಾರವಾಗಿ ಗಮನ ಹರಿಸುತ್ತೇವೆ. ಅನ್ಯಾಯ ಆಗಿರುವವರಿಗೆ ನ್ಯಾಯ ಒದಗಿಸಲಾಗುವುದು ಎಂದು ತಿಳಿಸಿದರು.

## ವಿಜಯೇಂದ್ರಗೆ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು

ಹೆಚ್ಚಾಗುತ್ತಿದೆ. ಕಾನೂನು ರೀತಿ ತನಿಖೆ ನಡೆದರೆ ಕುಟುಂಬಕ್ಕೆ ನ್ಯಾಯ ಸಿಗುತ್ತದೆ ಎಂದರು. ಕುಟುಂಬದ ಸದಸ್ಯರು ಈಗ ದುಃಖದಲ್ಲಿ ಮತ್ತು ಸಿಟ್ಟಿನಲ್ಲಿದ್ದಾರೆ. ಪೊಲೀಸರು ಸಮಯಕ್ಕೆ ಸರಿಯಾಗಿ ಸ್ಪಂದಿಸಿಲ್ಲ ಎಂಬ ಆರೋಪ ಮಾಡಿದ್ದಾರೆ. ಅದಕ್ಕಾಗಿ ಹೆಡ್ ಕಾನ್ಸ್‌ಟೆಬಲ್ ಬಲ್ ಒಬ್ಬರನ್ನು ಅಮಾನತುಗೊಳಿಸಲಾಗಿದೆ. ಅವರು ಸಮಾಧಾನಗೊಂಡ ಬಳಿಕ ಕುಟುಂಬದ ಸದಸ್ಯರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದು. ನಿನ್ನೆ ಬಿಜೆಪಿ ಆಯೋಗ ಸಚಿನ್ ಅವರ ಮನೆಗೆ ಭೇಟಿ ನೀಡಿ 5 ಲಕ್ಷ ರೂ. ನೀಡಲು ಹೋದಾಗ ಸ್ವಾಭಿಮಾನ ಪ್ರದರ್ಶಿಸಿದ್ದಾರೆ. ನ್ಯಾಯ ಕೊಡಿಸಿ ಎಂದಿದ್ದಾರೆ. ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ಕೊಡಿಸಿ ಎಂದು ಬಿಜೆಪಿಯವರು ಒತ್ತಾಯ ಮಾಡುವುದು ಬೇಕಿಲ್ಲ. ಒಂದು ವೇಳೆ ಆ ರೀತಿ ಹೇಳುವುದಾದರೆ ಕೇಂದ್ರ ಸರ್ಕಾರದಿಂದಲೇ ಬಿಜೆಪಿಯವರು ನೌಕರಿ ಕೊಡಿಸಲಿ ಎಂದು ಸವಾಲು ಹಾಕಿದರು. ರಾಜ್ಯಸರ್ಕಾರ ಕುಟುಂಬದ ಸದಸ್ಯರ ಬೇಡಿಕೆಗಳನ್ನು ಪರಿಶೀಲಿಸಲು ಸಿದ್ಧವಿದೆ. ರಾಜಕೀಯಕ್ಕಾಗಿ ಬಿಜೆಪಿಯವರು ಹೇಳಿದ್ದನ್ನೆಲ್ಲಾ ಕೇಳಲಾಗುವುದಿಲ್ಲ ಎಂದರು. ಬಿಜೆಪಿಯಲ್ಲಿ ಬಣ ರಾಜಕೀಯ ತೀವ್ರವಾಗಿದೆ. ಒಬ್ಬರು ಧರಣಿ ಎಂದರೆ, ಮತ್ತೊಬ್ಬರು ಸಭಾತ್ಯಾಗ ಎನ್ನುತ್ತಾರೆ. ವಕ್ಫ್ ಹಾಗೂ ಬಾಣಂತಿಯರ ವಿಚಾರದಲ್ಲಿ ಭಿನ್ನಭಿನ್ನ ನಿಲುವುಗಳು ಬಿಜೆಪಿ ನಾಯಕರಲ್ಲಿದೆ. ಬಸನಗೌಡ ಪಾಟೀಲ್ ಯತ್ನಾಳ್, ರೇಣುಕಾಚಾರ್ಯ, ಕುಮಾರ ಬಂಗಾರಪ್ಪ ನಿರಂತರವಾಗಿ ಪಕ್ಷ ವಿರೋಧಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ವಿರೋಧಪಕ್ಷದ ನಾಯಕರಿಗೆ ಹನಿಟ್ರ್ಯಾಪ್ ಮಾಡಿ ಎಚ್‌ಐವಿ ಚುಚ್ಚುಮದ್ದು ನೀಡಲು ಯತ್ನಿಸಿದ್ದ ಶಾಸಕ ಮುನಿರತ್ನ ಅವರಿಗೆ ಒಂದು ನೋಟಿಸ್ ನೀಡಲು ರಾಜ್ಯಾಧ್ಯಕ್ಷರಿಗೆ ಸಾಧ್ಯವಾಗುತ್ತಿಲ್ಲ. ವಿಜಯೇಂದ್ರರ ಮಾತುಗಳಿಗೆ ಪಕ್ಷದಲ್ಲಿ ಕಿಮತ್ತಿಲ್ಲ. ಹೀಗಾಗಿ ಕಾಂಗ್ರೆಸ್ ನಾಯಕರನ್ನು ಟೀಕಿಸಿ ಅಸ್ತಿತ್ವ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಹೊಸ ವರ್ಷಕ್ಕೆ ಬಿಜೆಪಿ ನಾಯಕತ್ವ ಬದಲಾಗುತ್ತದೆ ಎಂದು ಅವರದೇ ಪಕ್ಷದ ಕುಮಾರ್ ಬಂಗಾರಪ್ಪ ಹೇಳಿದ್ದಾರೆ. ಹೀಗಾಗಿ ತಾನು ಸಕ್ರಿಯನಾಗಿದ್ದೇನೆ ಎಂದು ತೋರಿಸಿಕೊಂಡು ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ.

**ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಪೂರ್ವಭಾವಿ ಸಭೆ**

## "ರಾಜ್ಯಮಟ್ಟದ ಪ್ರಪ್ರಥಮ ಸಮ್ಮೇಳನ" ದ ಅದ್ದೂರಿ ಆಚರಣೆಗೆ ಕರೆ : ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ



ಮಲ್ಲಮ್ಮ ನುಡಿ ವಾರ್ತೆ

ಗದಗ: ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ವತಿಯಿಂದ 2025ರ ಜನವರಿ ಅಥವಾ ಫೆಬ್ರವರಿ ತಿಂಗಳಿನಲ್ಲಿ ಏರ್ಪಡಿಸಲಾಗುವ "ರಾಜ್ಯಮಟ್ಟದ ಪ್ರಪ್ರಥಮ ಸಮ್ಮೇಳನ "ವನ್ನು ಅದ್ದೂರಿಯಾಗಿ ಆಚರಣೆ ಮಾಡಬೇಕೆಂದು ಕರೆ ನೀಡಿದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ಅವರು ಸಮ್ಮೇಳನದ ಯಶಸ್ವಿಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಸಂಘದ ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳಿಗೆ ಮನವಿ ಮಾಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ಡಿಸೆಂಬರ್ 28ರ ಶನಿವಾರ ಕರೆಯಲಾಗಿದ್ದ ಸಂಘದ ರಾಜ್ಯ ವಿಶೇಷ ಕಾರ್ಯಕಾರಿಣಿ ಸಭೆ ಮತ್ತು ಸಮ್ಮೇಳನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗದಗ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನ ನಡೆಯಲಿದೆ. ಸಮ್ಮೇಳನದ ಉದ್ಘಾಟನೆಯನ್ನು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡಲಿರುವರು. ಈಗಾಗಲೇ ಸಂಘದ ನಿಯೋಗ ಕಾನೂನು ಸಚಿವರಾದ ಹೆಚ್.ಕೆ.ಪಾಟೀಲ್ ಅವರ ನೇತೃತ್ವದಲ್ಲಿ ಡಿಸೆಂಬರ್ 12ರಂದು ಬೆಳಗಾವಿಯ ಸುವರ್ಣಸೌಧದಲ್ಲಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಸಮ್ಮೇಳನದ ಉದ್ಘಾಟಕರಾಗಿ ಆಗಮಿಸುವಂತೆ ಮನವಿ ಮಾಡಲಾಗಿದೆ. ಸಮ್ಮೇಳನಕ್ಕೆ ಬರುವುದಾಗಿ ಮತ್ತು ಸಮ್ಮೇಳನದ ದಿನಾಂಕ ನೀಡುವುದಾಗಿ ನಿಯೋಗಕ್ಕೆ ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆಂದು ತಿಳಿಸಿದರು.

ಸಮ್ಮೇಳನದ ಅಂಗವಾಗಿ 100–150 ಪುಟಗಳ ಬಹುವರ್ಣದ ಸ್ಮರಣ ಸಂಚಿಕೆಯನ್ನು ಹೊರತರಲಾಗುವುದು. ಜನವರಿ 15ರೊಳಗೆ ಲೇಖನಗಳನ್ನು ಮತ್ತು ಜಾಹೀರಾತುಗಳನ್ನು ಕಳುಹಿಸಿಕೊಡುವಂತೆ ಸಂಘದ ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ತಿಳಿಸಿದ ರಾಜ್ಯಾಧ್ಯಕ್ಷರು, ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಪ್ರಪ್ರಥಮ ಸಮ್ಮೇಳನ ಅದ್ದೂರಿಯಾಗಿ ಜರುಗುವುದಕ್ಕೆ ಪ್ರತಿಯೊಬ್ಬರೂ ಕಾಯಕ ನಿಷ್ಠೆಯಿಂದ ಕಾರ್ಯ ನಿರ್ವಹಿಸಬೇಕೆಂದು ವಿನಂತಿಸಿದರು.

ಗದಗ ಸಮ್ಮೇಳನದ ಸಂಪೂರ್ಣ ಉಸ್ತುವಾರಿ ವಹಿಸಿಕೊಂಡಿರುವ ಗದಗದ ಕಿತ್ತೂರು ಕರ್ನಾಟಕ ಪ್ರಾದೇಶಿಕ ಪತ್ರಿಕೆಯ ಸಂಪಾದಕರು ಮತ್ತು ರಾಜ್ಯ ಉಪಾಧ್ಯಕ್ಷರಾದ ಮಂಜುನಾಥ ಬಸಪ್ಪ ಹಬ್ಬಿಗೇರಿ ಅವರು ಮಾತನಾಡಿ, ಸಮ್ಮೇಳನದ ಯಶಸ್ವಿಗೆ ಪೂರ್ವಸಿದ್ದತೆಗಳು ನಡೆಯುತ್ತಿವೆ. ರಾಜ್ಯದ ಮೂಲೆ ಮೂಲೆಯಿಂದ ಬರುವಂತಹ ಪತ್ರಿಕೆಗಳ ಸಂಪಾದಕರು ಮತ್ತವರ ಕುಟುಂಬದವರಿಗೆ, ವರದಿಗಾರರಿಗೆ, ಊಟ ವಸತಿ, ಸ್ಥಳೀಯ ಸಾರಿಗೆ ಸೌಕರ್ಯ ಒದಗಿಸಲಾಗುವುದು. ಈ ಸಮ್ಮೇಳನ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಕೆ. ಪಾಟೀಲ್ ಅವರ ಘನ ಅಧ್ಯಕ್ಷತೆಯಲ್ಲಿ ಜರುಗಲಿರುವುದರಿಂದ ಯಾವುದೇ ಕೊರತೆಗಳಾಗದಂತೆ ಗದಗ ಜಿಲ್ಲಾ ಘಟಕ ನೋಡಿಕೊಳ್ಳಲಿದೆ ಎಂದು ಸಭೆಯಲ್ಲಿ ಭರವಸೆ ನೀಡಿದರು. ಸ್ಮರಣ ಸಂಚಿಕೆಯನ್ನು ಸ್ಥಳೀಯವಾಗಿ ಮುದ್ರಣ ಮಾಡಲಾಗುವುದು. ಸ್ಮರಣ ಸಂಚಿಕೆಯು ಅದ್ಭುತವಾಗಿ ಮೂಡಿಬರಲಿದೆ ಎಂದು ತಿಳಿಸಿದರು. ಸಮ್ಮೇಳನವನ್ನು ಎರಡು ದಿನಗಳ ಬದಲಿಗೆ ಒಂದು ದಿನ ಮಾತ್ರ ಏರ್ಪಡಿಸಲು ನಿರ್ಣಯಿಸಿದ್ದು ಅದಕ್ಕೆ ಸಭೆ ಒಪ್ಪಿಗೆ ನೀಡುವಂತೆ ಕೋರಿದರು. ಸಭೆಯು ಅದಕ್ಕೆ ಸಮ್ಮತಿ ನೀಡಿತು.

ಸಮ್ಮೇಳನದ ರೂಪುರೇಷೆಗಳ ಕುರಿತು ಕೇಂದ್ರ ಸಂಘದ ಪದಾಧಿಕಾರಿಗಳು ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಸಲಹೆ ಸೂಚನೆಗಳನ್ನು, ಅಭಿಪ್ರಾಯಗಳನ್ನು ಸಭೆಯಲ್ಲಿ ಮಂಡಿಸಿದರು.

ಸಭೆಯಲ್ಲಿ ರಾಜ್ಯ ಉಪಾಧ್ಯಕ್ಷರಾದ ಭೀಮರಾಯ ಹದ್ದಿನಾಳ, ಹರೀಶ್, ಪ್ರಧಾನ ಕಾರ್ಯದರ್ಶಿ ಟಿ.ಎಸ್. ಕೃಷ್ಣಮೂರ್ತಿ, ಖಜಾಂಚಿ ಎಸ್.ಟಿ.ವೇದಮೂರ್ತಿ, ಕಾರ್ಯದರ್ಶಿ ನರಸಿಂಹರಾಜು ಹೆಚ್., ಜಂಟಿ ಕಾರ್ಯದರ್ಶಿಗಳಾದ ದಿನೇಶ್ ಗೌಡಗೆರೆ, ರಘುವೀರ ನಾಯಕ, ಸಿ. ರಂಗನಾಥ, ಸಂಘಟನಾ ಕಾರ್ಯದರ್ಶಿಗಳಾದ ರಾಜು ತಳವಾರ, ರಮೇಶ್ ರೆಡ್ಡಿ, ನಾಮನಿರ್ದೇಶನ ಸದಸ್ಯರಾದ ಡಾ. ಬಿ.ವಾಸುದೇವ್, ಅಶೋಕ ಕುಮಾರ ಕರಂಜೆ, ಡಾ.ಮಲ್ಲಿಕಾರ್ಜುನ ಅಶನಾಳ, ಕಾರ್ಯದರ್ಶಿ ನವೀನ್, ಸದಸ್ಯರಾದ ಭಾಗ್ಯಲಕ್ಷ್ಮೀ ಆರ್. ಜಿಲ್ಲಾ ಘಟಕಗಳ ಅಧ್ಯಕ್ಷರಾದ ಸುರೇಶ್ ಆರ್. ಕುಣೆಬೆಳಕೆರೆ, ಜಗದೀಶ ಪೂಜಾರ, ಎಂ.ಜೆ.ಶ್ರೀನಿವಾಸ್, ಶಿವಶಂಕರ್ ಎಲ್, ವಿಜಯ ಕುಮಾರ ಪಾಟೀಲ ಗದಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವಪ್ಪ ಲಿಂಗದಾಳ, ಪದಾಧಿಕಾರಿಗಳಾದ ಹೆಚ್.ಎಂ. ಷರೀಫ, ಅಜಿತ್ ಹೊಂಬಾಳೆ, ಎನ್ ಆರ್ ಭಾಂಡಗೆ, ರಾಜು ಹೆಬ್ಬಳ್ಳಿ ಸೇರಿದಂತೆ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ದಾವಣಗೆರೆ ಪಬ್ಲಿಕ್ ವಾಯ್ಸ್ ಪತ್ರಿಕೆಯ ವರದಿಗಾರರು ಮತ್ತು ಕವಿಗಳಾದ ಎಸ್.ಆರೋಕ್ಯಸ್ವಾಮಿ ಹಾಸ್ಯ ಕವನ ವಾಚನ ಮಾಡಿ ಎಲ್ಲರ ಮನ ಸಂತೋಷ ಪಡಿಸಿದರು. ಇದೇ ಸಂದರ್ಭದಲ್ಲಿ ಕಿತ್ತೂರು ಕರ್ನಾಟಕ ಪ್ರಾದೇಶಿಕ ಪತ್ರಿಕೆ ಮತ್ತು ಪ್ರಜಾಪರ್ವ ಪತ್ರಿಕೆ–ಯ 2025ರ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಗದಗ ಜಿಲ್ಲಾ ಘಟಕದ ಖಜಾಂಚಿ ರವಿಕಾಂತ ಅಂಗಡಿ ಸ್ವಾಗತಿಸಿ, ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

### CITATION

### IN THE COURT OF THE PRL. CIVIL JUDGE AND JMFC., AT HUMNABAD

CRL. MISC. NO. 2139/2024

Petitioners:-

1). Baburao S/o Gurulingappa Waggi Age; 62 years Occu: Agriculture R/o Dhumansoor Tq:Humnabad Dist:Bidar

2). Shushilabai D/o Gurulingappa W/o Erappa Age; 51 years Occu: House Hold R/o Hipparga Tq:Humnabad Dist:Bidar

Respondent:-

The Registrar of Birth and Death through the Tahasildar Humnabad

Sub: Petition U/Sec 13(3) of Birth and Death Registration Act 1969


Whereas the above named petitioners have filed the petition under section 13 (3) of Birth and Death Registration Act 1969 praying this Honourable court to issue Death certificate son of Petitioner No. 1 and Daughter of Petitioner No. 2 namely : late Gurulingappa S/o Murageppa who died on 24-06-1995 at village Dhumansoor Tq:Humnabad Dist:Bidar. The petitioners claiming the death certificate of said Gurulingappa for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this court on 16-01-2024 of 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 16-12-2024

//By order of the court//
Chief Ministerial Officer
Prl. Civil Judge and JMFC Court,
Humnabad

# ಭಾರತದ ಮೊಟ್ಟ ಮೊದಲ ವಿಜ್ಞಾನಿ ಶ್ರೀಯಾಜ್ಞವಲ್ಕ್ಯರು: ಶ್ರೀನಿವಾಸ್ ಸಿರನೂರಕರ್




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.30:ಹುಣಸೆಹೊಳೆ ಶುಕ್ಲೆಯಜುರ್ವೇದಿಗಳಿಗಿರುವ ಏಕೈಕ ಸನ್ಯಾಸಪೀಠ, ಭಕ್ತಾದಿಗಳೆಲ್ಲರೂ ಹುಣಸೆಹೊಳೆಯಲ್ಲಿರುವ ಉಪಾಸ್ಯ ದೇವರಾದ ಶ್ರೀ ವಿಠಲಕೃಷ್ಣನನ್ನು ಭಕ್ತಿಯಿಂದ ಆರಾಧಿಸುತ್ತಾರೆ ಎಂದರು.

ಹುಬ್ಬಳ್ಳಿಯ ಗೋಕುಲ್ ರಸ್ತೆಯ, ಗೋಕುಲ್‌ಗಾರ್ಡನನಲ್ಲಿ ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ, ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಬ್ರಹ್ಮರ್ಷಿ ಅನುಯಾಯಿಗಳ ರಾಜ್ಯಸಮ್ಮೇಳನದ ಸಮಾರೋಪ ಸಮಾರಂಭದ ಸಾನಿಧ್ಯ ವಹಿಸಿದ್ದ

ಶ್ರೀಮತ್ಕಣ್ವಮಠ ಹುಣಸಿಹೊಳೆಯ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ವಿದ್ಯಾಕಣ್ವವಿರಾಜ ತೀರ್ಥ ಶ್ರೀಪಾದಂಗಳವರು ಮಾತನಾಡಿದ ಪ್ರಸ್ತುತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಶ್ರೀ ಯಾಜ್ಞವಲ್ಕ್ಯ ದೇವಸ್ತಾನಕ್ಕೆ 1 ಲಕ್ಷ ನೀಡುವುದಾಗಿ ತಿಳಿಸಿದರು

ಶ್ರೀ ಶ್ರೀನಿವಾಸ್ ಸಿರನೂರಕರ್ ಮಾತನಾಡಿ

ಆಧುನಿಕವಿಜ್ಞಾನಕ್ಕೆಅಪರಿಚಿತವಾಗಿದ್ದ ಅನೇಕ ವಿಷಯಗಳನ್ನು ಸಾವಿರಾರು ವರ್ಷಗಳ ಹಿಂದೆ ಶ್ರೀಯಾಜ್ಞವಲ್ಕ್ಯರು ಕರಾರುವಕ್ಕಾಗಿ ಹೇಳಿರುವುದು ಚಕಿತಗೊಳಿಸುವಂತಿದೆ, ಮನುಷ್ಯನ ಜನ್ಮ ಹೇಗಾಗುತ್ತದೆ ಗರ್ಭದಲ್ಲಿ ಭ್ರೂಣದ ಬೆಳವಣಿಗೆ ಕುರಿತು ಕರಾರುವಕ್ಕಾಗಿ ಪ್ರಯೋಗಾಲಯಗಳಿಲ್ಲದ ಸಾವಿರಾರು ವರ್ಷಗಳ ಹಿಂದೆ ವಿವರಿಸಿದ್ದಾರೆ.

ವೈಜ್ಞಾನಿಕ ವಿಷಯಗಳಾದ ಜೀವ ಶಾಸ್ತ್ರ, ಶರೀರ ರಚನಾ ಶಾಸ್ತ್ರ, ಶರೀರರಚನಾ ಶಾಸ್ತ್ರ, ಪ್ರಸವ ಶಾಸ್ತ್ರ ಹಾಗೂ ಶರೀರದಲ್ಲಿರುವ ಅಸ್ಥಿಗಳ ಸಂಖ್ಯೆ, ಯಾಕೃತ್ತು, "ಯಾಜ್ಞವಲ್ಕ್ಯಸ್ಮೃತಿ"ದಾಖಲಿಸಿದ್ದಾರೆ, ಮಾನವನ ದೇಹದಲ್ಲಿ 360 ಕೀಲುಗಳು ಇರುತ್ತವೆ ಎಂದು ಕರಾರುವಕ್ಕಾಗಿ ಹೇಳಿದ್ದಾರೆ.

ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಮೊದಲ ಬಾರಿಗೆ ಮಹಿಳೆಗೆ ಆಸ್ತಿ ಹಕ್ಕು ಕರುಣಿಸಿದ್ದು ಶ್ರೀಯಾಜ್ಞವಲ್ಕ್ಯರು, ಸ್ತ್ರೀಧನಕ್ಕೆ ಸ್ತ್ರೀಯರೇ ವಾರಸುದಾರರು, ಸ್ತ್ರೀಧನ ಒಂದು ಉದಾತ್ತ ಮತ್ತು ಕ್ರಾಂತಿಕಾರಿ ಹೆಜ್ಜೆ ಎಂದು ಹೇಳಿದರು,

ಸಮ್ಮೇಳನ ಕಾರ್ಯಾಧ್ಯಕ್ಷರಾದ ಶ್ರೀ ಸತ್ಯನಾರಾಯಣ ಮರಟಗೇರಿ ಮಾತನಾಡಿ ಹೊರಟಗಿರಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿಯೋಗವನ್ನುಮೊದಲು ಭೂಮಿಗೆ ಪರಿಚಯಿಸಿದವರು ಶ್ರೀಯಾಜ್ಞವಲ್ಕ್ಯರು, ಯಾಜ್ಞವಲ್ಕ್ಯ ಸ್ಮೃತಿ" 140 ದೇಶಗಳಲ್ಲಿ ಬೇಸಿಕ್ ಲಾ ಆಗಿಪರಿಗಣಿಸಲಾಗಿದೆ ಎಂದರು.

ಸಮ್ಮೇಳನದ ನಿರ್ಣಯಗಳನ್ನು ಮಂಡಿಸಿಮೆರೆದಿದ್ದಅನುಯಾಯಿಗಳಿಂದ ಜಯ ಘೋಷದ ಮೂಲಕ ಅನುಮೋದನೆಯನ್ನುಪಡೆದು-ಕೊಂಡರು.

1-ರಾಜ್ಯದಎಲ್ಲಾಶುಕ್ಲಯಜುರ್ವೇದ ಸಂಘ ಸಂಸ್ಥೆಗಳಲ್ಲಿ

ಹಾಗೂದೇವಸ್ತಾನ, ಮಠಗಳಲ್ಲಿ ಶ್ರೀಯಾಜ್ಞವಲ್ಕ್ಯರ ಜಯಂತಿ ಖಡ್ಡಾಯವಾಗಿ ಆಚರಿಸುವುದು.

2-ಪ್ರತಿಜಿಲ್ಲೆತಾಲೂಕುಕೇಂದ್ರಗಳಲ್ಲಿ ಶ್ರೀಯಾಜ್ಞವಲ್ಕ್ಯರ ದೇವಸ್ಥಾನ ನಿರ್ಮಾಣ ಮಾಡುವುದು

3-ರಾಜ್ಯದ ಯಾವುದೇ ಜಿಲ್ಲೆಯ ತಾಲೂಕಿನಲ್ಲಿ ಶ್ರೀಯಾಜ್ಞವಲ್ಕ್ಯರ ದೇವಸ್ಥಾನ ನಿರ್ಮಿಸಿದರೆ ಮೂರ್ತಿ ಉಚಿತವಾಗಿ ನೀಡುವುದು ಹಾಗೂ ವಿಗ್ರಹ ಪ್ರತಿಷ್ಠಾಪನೆಯಲ್ಲಿ ಟ್ರಸ್ಟ್ ನಿಂದ ಅಗತ್ಯ ಸಹಕಾರ ನೀಡಲಾಗುತ್ತದೆ.

4-ಶ್ರೀಯಾಜ್ಞವಲ್ಕ್ಯರಕಾರ್ಯಕಾರಿ ಮಂಡಳಿ ಪ್ರತಿ ಜಿಲ್ಲೆ ಮತ್ತು ತಾಲೂಕಿನಲ್ಲಿ ಸ್ಥಾಪನೆಗೆ ಸಹಕರಿಸುವುದು.

5-ಶ್ರೀಯೋಗೀಶ್ವರಯಾಜ್ಞವಲ್ಕ್ಯ ಟ್ರಸ್ಟ್ ವತಿಯಿಂದ ಪ್ರತಿ ವರ್ಷ ವಧು ವರರ ಸಮಾವೇಶ ನಡೆಸಲಾಗುತ್ತದೆ

ಮಹಿಳಾ ಗೋಷ್ಠಿಯಲ್ಲಿ ಮಾತನಾಡಿದ ಅನುರಾಧ ಕುಲಕರ್ಣಿ ವಿಶ್ವವಿದ್ಯಾಲಯದಗಳಲ್ಲಿ ಶ್ರೀ ಯೋಗೇಶ್ವರ ಅಧ್ಯಯನ ಪೀಠ ಸ್ಥಾಪನೆ ಮಾಡಬೇಕು ಪಿಎಚ್‌ಡಿ ಮಾಡಲು ಪ್ರೇರಣೆ-ಯಾಗುತ್ತದೆ ಹಾಗೂ ನಮ್ಮ ಮುಂದಿನ ಪೀಳಿಗೆಗೆ ಜ್ಞಾನ ಪಸರಿಸಿದಂತಾಗುತ್ತದೆ ಎಂದರು.

ಪಂಡಿತ್ ಶ್ರೀ ಪ್ರದ್ಯುಮ್ನಾಚಾರ್ ಈಶಾವಾಷ್ಯ ಉಪನಿಷತ್ ಕುರಿತು ಉಪನ್ಯಾಸ ನೀಡಿದರು ಹಾಗೂ ವೇದ ಬ್ರಹ್ಮ ಡಾಕ್ಟರ್ ಗಿರೀಶ್ ಶರ್ಮಾ ಶ್ರೀ ಯಾಜ್ಞವಲ್ಕ್ಯ ಸ್ಮೃತಿ ಕುರಿತು ಉಪನ್ಯಾಸ ನೀಡಿದರು

ಕಣ್ವಪರಿಷತ್ತಿನ ರಾಜ್ಯಾಧ್ಯಕ್ಷರಾದ ಶ್ರೀ ಕಿಸಾನರಾವ್ ಕುಲಕರ್ಣಿ ಹಾಗೂ ಶ್ರೀ ಶುಕ್ಲ ಯಾಜು ಶಾಖ ಟ್ರಸ್ಟ್ ಅಧ್ಯಕ್ಷರಾದ ವೈ.ವಿ ವೇಣುಗೋಪಾಲ್ ಮಾತನಾಡಿದರು.

ಗಂಗಾವತಿ ಪ್ರಾಣೇಶ್ ಅವರಿಗೆ ಜ್ಞಾನಶ್ರೀ ಪ್ರಶಸ್ತಿ ಪ್ರಧಾನ ಮಾಡಲಾಯಿತು.

# ಗುತ್ತಿಗೆದಾರ ಆತ್ಮಹತ್ಯೆ: ಸಿಐಡಿ ತನಿಖೆ; ಪ್ರಿಯಾಂಕ್ ಖರ್ಗೆ ರಾಜೀನಾಮೆ ಅಗತ್ಯ ಇಲ್ಲ- ಜಿ. ಪರಮೇಶ್ವರ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಗುತ್ತಿಗೆದಾರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಮೇಲೆ ಬಿಜೆಪಿಯವರು ಮಾಡಿರುವ ಆರೋಪ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಹೇಳಿದರು.

ಸದಾಶಿವನಗರದಲ್ಲಿಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರ ಮೇಲೆ ಅನವಶ್ಯಕವಾಗಿ ಆಪಾದನೆ ಮಾಡುವುದು ಯಾವುದೇ ಸರ್ಕಾರಕ್ಕು ಸರಿ ಇರುವುದಿಲ್ಲ. ಡೆತ್‌ನೋಟ್‌ನಲ್ಲಿ ಅವರ ಹೆಸರು ಕೂಡ ಇಲ್ಲ ಎಂದು ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಸಚಿವರ ಹೆಸರನ್ನು ತಂದು, ಸರ್ಕಾರ-ಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಸತ್ಯಾಸತ್ಯತೆ ಹೊರಬರಲಿ ಎಂಬ ದೃಷ್ಟಿಯಿಂದ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಸಿಐಡಿಗೆ ವಹಿಸಲಾಗಿದೆ ಎಂದು ಹೇಳಿದರು.

ತನಿಖೆಯ ವರದಿ ಬಂದ ನಂತರ ಏನು ಎಂಬುದನ್ನು ಹೇಳೋಣ. ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜೀನಾಮೆ ಕೊಡುವ ಅಗತ್ಯ ಇಲ್ಲ. ಅನವಶ್ಯಕವಾಗಿ ಅವರ ಹೆಸರನ್ನು ತೆಗೆದುಕೊಂಡು ರಾಜೀನಾಮೆ ಕೊಡುವಂತೆ ಒತ್ತಾಯ ಮಾಡುತ್ತಿದ್ದಾರೆ ಎಂದರು

ಸಿಬಿಐಗೆ ವಹಿಸುವಂತೆ ಬಿಜೆಪಿಯವರು ಒತ್ತಾಯಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಎಲ್ಲ ಪ್ರಕರಣಗಳನ್ನು ಸಿಬಿಐಗೆ ವಹಿಸಲು ಆಗುವುದಿಲ್ಲ. ಸಿಐಡಿ ಸಮರ್ಥವಾಗಿದೆ. ಅನೇಕ ಪ್ರಕರಣಗಳಲ್ಲಿ ಸಿಐಡಿ ತನಿಖೆಯ ವರದಿ ಬಂದಿದೆಯಲ್ಲವೇ? ಬಿಜೆಪಿಯವರು ಹೇಳಿದ್ದೆಲ್ಲ ಕೇಳುವುದಿಲ್ಲ. ಸಕರಾತ್ಮಕವಾಗಿ ಸಲಹೆ, ಸೂಚನೆ ನೀಡಿದರೆ ಕೇಳುತ್ತೇವೆ. ಅನವಶ್ಯಕವಾಗಿ ಎಲ್ಲದರಲ್ಲು ರಾಜಕೀಯ ಮಾಡಲು ಹೋದರೆ ಕೇಳುವುದಿಲ್ಲ ಎಂದರು.

ಬೀದರ್ ಗುತ್ತಿಗೆದಾರ ಸಚಿನ್ ಪಂಚಾಲ್ ಆತ್ಮಹತ್ಯೆ ಕೇಸು: ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಬಿಜೆಪಿ ಒತ್ತಾಯ

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಮೇಲೆ ಶಾಸಕ ಸಿ.ಟಿ.ರವಿ ಅವಾಚ್ಯ ಪದ ಬಳಕೆ ಮಾಡಿರುವ ಪ್ರಕರಣದ ಸತ್ಯಾಸತ್ಯತೆ ಹೊರಬರಬೇಕಲ್ಲವೇ. ಈ ನಿಟ್ಟಿನಲ್ಲಿ ಸಿಐಡಿ ಅವರು ತಮ್ಮ ಕೆಲಸವನ್ನು ಪ್ರಾರಂಭಿಸಿದ್ದಾರೆ ಎಂದು ತಿಳಿಸಿದರು.

ಸಾರ್ವಜನಿಕರು ಬಹಳ ಎಚ್ಚರಿಕೆಯಿಂದ ಹೊಸ ವರ್ಷದ ಸಂತೋಷವನ್ನುಹಂಚಿಕೊಳ್ಳಬೇಕು. ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ, ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ. ಅಗತ್ಯ ಬಂದೋಬಸ್ತ್ ಕೈಗೊಳ್ಳಲಾಗಿದೆ. ಯಾರಿಗೂ ತೊಂದರೆಯಾಗದಂತೆ ಹೊಸ ವರ್ಷ ಆಚರಿಸುವಂತೆ ಸಾರ್ವಜನಿಕರಲ್ಲಿ ವಿನಂತಿಸಿಕೊಳ್ಳುತ್ತೇನೆ ಎಂದರು.

# ಬೆನಕನಹಳ್ಳಿ ಶುದ್ಧ ಕುಡಿಯುವ ನೀರು ಘಟಕ ಉದ್ಘಾಟನೆ ಭಾಗ್ಯ ಯಾವಾಗ ಭೀಮರಾಯ ಪೂಜಾರಿ ಆಗ್ರಹ





ಮಲ್ಲಮ್ಮ ನುಡಿ ವಾರ್ತೆ

(ಮಲ್ಲಿಕಾರ್ಜುನ್ ಮಳಿಕೇರಿ)

ಶಹಪುರತಾಲೂಕಿನಕನ್ಯಕೋಳೂರು ಗ್ರಾಮಪಂಚಾಯತಿಯವ್ಯಾಪ್ತಿಯಲ್ಲಿ ಬರುವ ಬೆನಕನಹಳ್ಳಿ ಗ್ರಾಮದಲ್ಲಿ ಸರಕಾರದಿಂದ ಜನರಿಗೆ ಶುದ್ಧ ನೀರು ಕುಡಿಯುವ ಯೋಜನೆ ಜಾರಿಗೆ ತಂದದ್ದು ಅದನ್ನು ಸಬ್ಬಳಿಕೆಯಾಗಿ ಜನರಿಗೆ ಒಳ್ಳೆ ಶುದ್ಧ ಕುಡಿಯುವ ನೀರು ಘಟಕ ಸ್ಥಾಪನೆ ಆಗಲಿ ಎಂದು ಸರ್ಕಾರದ ವಿಚಾರ .

ಆದರೆ ಇಲ್ಲಿನ ಸ್ಥಳೀಯ ಪಂಚಾಯಿತಿ ಅಧಿಕಾರಿಗಳು ಹಾಗೂ ಅಲ್ಲಿನ ಸದಸ್ಯರು ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಶುದ್ಧ ನೀರಿನ ಘಟಕ ಸ್ಥಾಪನೆಯಾಗಿದ್ದು ಒಂದು ದಿನ ಕೂಡ ನೀರು ಬರದೇ ಇರುವುದು ವಿಪರ್ಯಾಸ. ಸುಮಾರು ವರ್ಷಗಳಿಂದ ಯಾ-ರೋ ಪ್ಲಾಂಟ್ ಆಗಿದ್ದು ಅಲ್ಲಿ ಉದ್ಘಾಟನೆಯಾಗದೆ ವಸ್ತುಗಳ ತುಕ್ಕುಹಿಡಿದಿರುವುದು ವಿಪರ್ಯಾಸ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತಗಮನಹರಿಸಿ ಇಲ್ಲವಾದರೆ ಉಗ್ರವಾದ ಹೋರಾಟ ಮಾಡುವುದಾಗಿ ಭೀಮರಾಯ ಪೂಜಾರಿ ಆಗ್ರಹಿಸಿದ್ದಾರೆ.

# ಸರಳವಾಗಿ ಕುವೆಂಪು ಜನ್ಮದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.30: ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ ಇವರುಗಳ ಸಂಯುಕ್ತ ಆಶ್ರಯದಲ್ಲಿ ರವಿವಾರ ಇಲ್ಲಿನ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನವನ್ನು ವಿಶ್ವ ಮಾನವ ದಿನಾಚರಣೆಯನ್ನಾಗಿ ಸರಳವಾಗಿ ಅಚರಿಸಲಾಯಿತು.

ಮಾಜಿ ಪ್ರಧಾನಮಂತ್ರಿ ಡಾ.ಮನಮೋಹನ್ ಸಿಂಗ್ ಅವರ ನಿಧನದಿಂದ ರಾಷ್ಟ್ರದಾದ್ಯಂತ ಶೋಕಾಚರಣೆ ಹಿನ್ನೆಲೆಯಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ಸಲ್ಲಿಸುವ ಮೂಲಕ ಸರಳವಾಗಿ ಜಯಂತಿ ಅಚರಣೆ ಮಾಡಲಾಯಿತು.

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕ ಅಶೋಕ್ ಶಾಸ್ತ್ರಿ, ಡಿ.ಡಿ.ಪಿ.ಐ ಕಚೇರಿಯ ಡಿ.ಪಿ.ಇ.ಓ ರಾಜಶೇಖರ್ ಜಿ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ದತ್ತಪ್ಪ ಸಾಗನೂರ ಸೇರಿದಂತೆ ಶಾಲಾ ಮಕ್ಕಳು, ಶಿಕ್ಷಕರು ಭಾಗವಹಿಸಿದ್ದರು.

# ಸಂಗೀತ ಕ್ಷೇತ್ರಕ್ಕೆ ಅಶ್ವಥರ ಕೊಡುಗೆ ಅನನ್ಯ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.29: ಸುಮಧುರ ಕಂಠದಿಂದ ಎಲ್ಲರಿಗೂ ಮನಮುಟ್ಟುವಂತೆ ಗೀತೆಗಳನ್ನು ಹಾಡಿ ದೇಶಪ್ರೇಮ ಮೂಡಿಸಿದ ಡಾ.ಸಿ.ಅಶ್ವಥ ಅವರು ಸಂಗೀತ ಕ್ಷೇತ್ರಕ್ಕೆ ತುಂಬಾ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಖ್ಯಾತ ಗಾಯಕ ಶರಣು ಕಾಂಬಳೆ ಹೇಳಿದರು.

ನಗರದ ಆಳಂದ ಚೆಕಪೋಸ್ಟ್ ಸಮೀಪವಿರುವ 'ಗಾನಗಂಧರ್ವ ಸಂಗೀತ ಪಾಠಶಾಲೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಭಾನುವರ ಜರುಗಿದ ಖ್ಯಾತ ಗಾಯಕ ಡಾ.ಸಿ.ಅಶ್ವಥರ ಜನ್ಮ ದಿನಾಚರಣೆ'ಯ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಉಪನ್ಯಾಸಕ ಎಚ್.ಬಿ.ಪಾಟೀಲ ಮಾತನಾಡಿ, ಜನಪದ ಗೀತೆಗಳನ್ನು ಶುಶ್ರಾವ್ಯವಾಗಿ ಪ್ರಸ್ತುತಪಡಿಸಿದ ಅಶ್ವಥ ಇಂದಿಗೂ ಕೂಡಾ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸಮಜ ಸೇವಕ ಶಿವಯೋಗೆಪ್ಪ ಎಸ್.ಬಿರಾದಾರ, ಅಂಬಾರಾಯ ದುದಗಿ, ಶಿವಶರಣಪ್ಪ ಉಳಾಗಡ್ಡಿ, ಸೋಮಶೇಖರ ಭೂಸನೂರ, ಸಿದ್ದು ಕಾಂಬಳೆ ಸೇರಿದಂತೆ ಮತ್ತಿತರರು ಇದ್ದರು.

# ಪಂಚಾಳ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು : ಕಮ್ಮಾರ್ ಅಗ್ರಹ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.30: ಸಚಿನ್ ಪಾಂಚಾಳ ಅವರು ಸುಸೈಡ್ ಮಾಡಿಕೊಂಡಿದು ಮನುಕುಲವೇ ನಾಚಿಕೆಪಡುವಂತಹ ವಿಷಯವಾಗಿದೆ. ಇಂತಹ ಹೇಸಿಗೆ ಕೆಲಸಕ್ಕೆ ಬೆನ್ನೆಲುಬಾಗಿ ನಿಂತಿರು ಸರ್ಕಾರವು ನಾಚಿಕೆ ಪಡುವ ಸಂಗತಿಯಾಗಿದೆ. ಪಂಚಾಳ ಸಮುದಾಯದ ಒಬ್ಬ ಪ್ರತಿಭಾವಂತ ವಿದ್ಯಾವಂತ ಸಚಿನ್ ಪಾಂಚಾಳ ಸೂಸೈಡ್ ಮಾಡಿಕೊಳ್ಳುಲು ಮತ್ತು ಅವನು ಬರೆದಿರುವ ಡೆತ್ ನೋಟ್ ನಲ್ಲಿ ಉಲ್ಲೇಖಗೊಂಡಿರುವ ಹೆಸರುಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ವಿಶ್ವಕರ್ಮ ಸಮಾಜದ ಮಾರುತಿ ಎಂ ಕಮ್ಮಾರ್ ಸರಕಾರಕ್ಕೆ ಆಗ್ರಹಿಸಿದ್ದಾರೆ .

ಕೂಡಲೆ ಸುಯಿಸೈಡ್ ಮಾಡಿಕೊಂಡಿರುವ ಸಚಿನ್ ಪಾಂಚಾಳ್ ಅವರ ಕುಟುಂಬಕ್ಕೆ ಸರ್ಕಾರದಿಂದ ಒಂದು ಕೋಟಿ ರೂಪಾಯಿ ಹಾಗೂ ಅವರ ಕುಟುಂಬದ ಸದಸ್ಯರಿಗೆ ಒಂದು ಸರ್ಕಾರಿ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳುವ್ ಮೂಲಕ

ಸಮುದಾಯಕ್ಕೆನ್ಯಾಯ ದೊರಕಿಸಿ ಕೊಡಬೇಕು. ಒಂದು ವೇಳೆ ಸರಕಾರವು ಈ ಬೇಡಿಕೆಗಳಿಗೆ ಸ್ಪಂದಿಸದೆ ಇದರೆ ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ಉಗ್ರವಾದ ಹೋರಾಟವನ್ನು ಮಾಡಬೇಕಾದ ಅನಿವಾರ್ಯತೆ ಇರುತ್ತದೆ.ಎಂದು ಈ ಮೂಲಕ ಮಾರುತಿ ಎಂ ಕಮ್ಮಾರ್ ಎಚ್ಚರಿಕೆ ನೀಡಿರುತ್ತಾರೆ.

# ಓಂಕಾರೇಶ್ವರ ದೇವಸ್ಥಾನ ಸಮಿತಿ ನೂತನ ಪದಾಧಿಕಾರಿಗಳ ಆಯ್ಕೆ


ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.30-ಇಲ್ಲಿನ ಸ್ವಾಮಿ ವಿವೇಕಾನಂದ ನಗರದ ಓಂಕಾರೇಶ್ವರ ದೇವಸ್ಥಾನ ಸಮಿತಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಮಲ್ಲಿನಾಥ ಧಂಗಾಪೂರ, ಉಪಾಧ್ಯಕ್ಷರಾಗಿ ಶಿವರಾಜ ಪಾಟೀಲ, ಕಾರ್ಯದರ್ಶಿಯಾಗಿ ಬಸವರಾಜ ಅತನೂರ, ಖಜಾಂಚಿಯಾಗಿ ರಾಜಶೇಖರ ಸಜ್ಜೆ, ಕಾನೂನು ಸಲಹೆಗಾರರಾಗಿ ವೀರಭದ್ರಪ್ಪ ಬಿ.ಪಾಟೀಲ ಅವರು ಆಯ್ಕೆಯಾದರು ಎಂದು ಸಮಿತಿ ಮಾಧ್ಯಮ ಕಾರ್ಯದರ್ಶಿ ದೇವಿಂದ್ರಪ್ಪ ಗಣಮುಖಿ ತಿಳಿಸಿದ್ದಾರೆ.

ಸಮಿತಿ ಮಾಜಿ ಅಧ್ಯಕ್ಷರಾದ ಎಸ್.ಎಸ್.ಹಿರೇಮಠ, ಶ್ರೀಕಾಂತ ಪಾಟೀಲ ನೀಲೂರ, ಗೌಡಪ್ಪಗೌಡ ಪಾಟೀಲ ಭೋಸಗಾ, ಸೂರ್ಯಕಾಂತ ಪಾಟೀಲ ಕೆರ್, ಮಲ್ಲಿಕಾರ್ಜುನ ಮೇಳಕುಂದಾ, ಶಿವರಾಚಪ್ಪ ವಾಲಿ, ಹಣಮಂತರಾಯ ಪಾಟೀಲ ಅವರು ಉಪಸ್ಥಿತರಿದ್ದರು.

# ಸಾರಿಗೆ ನೌಕರರ ಮುಷ್ಕರ ರಾ.ರೆಡ್ಡಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಡಿ.30: ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿ. 31 ರಿಂದ ಮುಷ್ಕರ ನಡೆಸಲು ಮುಂದಾಗಿರುವಾಗ 'ಲೇಮುಷ್ಕರವನ್ನು ತಡೆಯಲು ಎಲ್ಲ ರೀತಿಯ ಪ್ರಯತ್ನಗಳನ್ನು ಸಾರಿಗೆ ಇಲಾಖೆ ನಡೆಸಿದ್ದು, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಸಭೆ ನಡೆಸಲಿದ್ದು, ಈ ಸಭೆಯ ನಂತರ ಸಾರಿಗೆ ನೌಕರರು ಮುಷ್ಕರಕ್ಕಿಳಿಯುತ್ತಾರೆಯೇ ಇಲ್ಲವೇ ಎಂಬುದು ನಿರ್ಧಾರವಾಗಲಿದೆ.

ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗೆ ಆಗ್ರಹಿಸಿ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ 4 ನಿಗಮಗಳ ನೌಕರರ ಸಂಘಟನೆಗಳು ಡಿ. 31 ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ.

ಈ ಮುಷ್ಕರದ ಹಿನ್ನೆಲೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ನಿನ್ನೆ 4 ನಿಗಮಗಳ ಹಿರಿಯ ಅಧಿಕಾರಿಗಳ ಸಭೆ ನಡೆಸಿ ನೌಕರರ ಬೇಡಿಕೆಗಳ ಈಡೇರಿಕೆ ಹಾಗೂ ನಿಗಮದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಿದರು.

ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿಯನ್ನುಗಣನೆಗೆತೆಗೆದುಕೊಂಡು ಮುಷ್ಕರವನ್ನು ಹಿಂಪಡೆಯುವಂತೆ ನೌಕರರ ಸಂಘಟನೆಗಳಿಗೆ ಸಚಿವ ರಾಮಲಿಂಗಾರೆಡ್ಡಿ ಈಗಾಗಲೇ ಮನವಿ ಮಾಡಿದ್ದಾರೆ.

ನೌಕರರ ಬೇಡಿಕೆ ಈಡೇರಿಕೆಗೆ ಸರ್ಕಾರದಿಂದ ನೆರವು ಪಡೆಯುವ ಬಗ್ಗೆಯೂ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಇಂದು ಸಭೆ ನಡೆಸಲಿದ್ದು, ಸಭೆಯ ನಂತರ ಸಾರಿಗೆ ನೌಕರರ ಮುಷ್ಕರ ನಡೆಯುತ್ತದೆಯೇ ಇಲ್ಲವೇ ಎಂಬುದು ನಿರ್ಧಾರವಾಗಲಿದೆ.

ಸಾರಿಗೆ ನೌಕರರು ಬೇಡಿಕೆ ಈಡೇರಿಕೆಗೆ ಪಟ್ಟು ಹಿಡಿದಿದ್ದು, ಬೇಡಿಕೆ ಈಡೇರದಿದ್ದರೆ ಮುಷ್ಕರ ನಡೆಸಿಯೇ ತೀರುತ್ತೇವೆ ಎಂದು ಹೇಳಿದ್ದಾರೆ. ಹಾಗಾಗಿ ಸಾರಿಗೆ ನೌಕರರ ಮುಷ್ಕರ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ನಾಳೆ ಕಾರ್ಮಿಕ ಆಯುಕ್ತರ ಸಭೆ

ಡಿಸೆಂಬರ್ 31ರಿಂದ ನಡೆಯಲಿರುವ ರಾಜ್ಯ ಸಾರಿಗೆ ಇಲಾಖೆಯ ನೌಕರರ ಅನಿರ್ದಿಷ್ಟಾವಧಿಯ ಮುಷ್ಕರದ ಹಿನ್ನೆಲೆಯಲ್ಲಿ ಕಾರ್ಮಿಕ ಇಲಾಖೆ ಆಯುಕ್ತರ ನೇತೃತ್ವದಲ್ಲಿ ನಾಳೆ ಸಭೆ ನಡೆಯಲಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ ಸದಸ್ಯರನ್ನೊಳಗೊಂಡ ಜಂಟಿ ಕ್ರಿಯಾ ಸಮಿತಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘದ ಮುಖಂಡ ಹೆಚ್.ವಿ. ಅನಂತ ಸುಬ್ಬರಾವ್ ನೇತೃತ್ವದಲ್ಲಿ ಕಾರ್ಮಿಕ ಇಲಾಖೆಯೊಂದಿಗೆ ನಾಳೆ ಸಭೆ ನಡೆದು ಬೇಡಿಕೆಗಳ ಬಗ್ಗೆ ಚರ್ಚೆ ನಡೆಯಲಿದೆ.

ಸರ್ಕಾರ ನಮ್ಮನ್ನು ಕರೆದು ಚರ್ಚಿಸಲಿ ಎನ್ನುವ ಕಾರಣಕ್ಕೆ ನೋಟೀಸ್ ನೀಡಿದ್ದೇವೆ. ಆದರೆ ಸರ್ಕಾರ ಈವರೆಗೆ ಯಾವುದೇ ರೀತಿಯಲ್ಲಿ ಸ್ಪಂದಿಸಿಲ್ಲ. ಬದಲಿಗೆ ಮುಷ್ಕರ ಮಾಡಿದರೆ ಎಸ್ಮಾ ಜಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ ಎಂದು ಹೆಚ್.ವಿ.ಅನಂತ ಸುಬ್ಬರಾವ್ ದೂರಿದ್ದಾರೆ.

ಸಿದ್ದರಾಮಯ್ಯ ಅವರು ಎಸ್ಮಾ ಜಾರಿಯ ಸಾಹಸಕ್ಕೆ ಕೈಹಾಕುವುದಿಲ್ಲ ಎಂದು ತಿಳಿದುಕೊಳ್ಳುತ್ತೇನೆ. ನಮ್ಮ ಬೇಡಿಕೆಗಳು ಈಡೇರಿಲ್ಲ. ಹಾಗಾಗಿ ಮುಷ್ಕರ ಶತಸಿದ್ಧ. ಮುಷ್ಕರ ಮಾಡಿಸುವುದು ತಪ್ಪಿಸುವುದು ಮುಖ್ಯಮಂತ್ರಿಗಳ ಕೈಯಲ್ಲಿದೆ.

ನಗದು ರಹಿತ ಆರೋಗ್ಯ ಚಿಕಿತ್ಸೆ ಯೋಜನೆಯನ್ನು ಏಕಕಾಲದಲ್ಲಿ 4 ನಿಗಮಗಳಲ್ಲಿ ಜಾರಿಗೆ ತರಬೇಕು. ಸಂಸ್ಥೆಯಲ್ಲಿ ವಿದ್ಯುತ್ ಚಾಲಿತ ಬಸ್ಸುಗಳ ನಿರ್ವಹಣೆಯನ್ನು ಖಾಸಗಿ ಗುತ್ತಿಗೆದಾರರಿಗೆ ನೀಡುವ ಪದ್ಧತಿಯನ್ನು ಕೈಬಿಟ್ಟು, ಸಂಸ್ಥೆಯ ನೌಕರರು ಮತ್ತು ಸಿಬ್ಬಂದಿ ನಿರ್ವಹಣೆ ಮಾಡಬೇಕು. ಹೊರ ಗುತ್ತಿಗೆ ಆಧಾರದ ಮೇಲೆ ಚಾಲಕ, ತಾಂತ್ರಿಕ ಮತ್ತು ಭದ್ರತಾ ಸಿಬ್ಬಂದಿ ನೇಮಕಾತಿಯನ್ನು ಕೈಬಿಡಬೇಕು ಎಂಬುದು ಸಾರಿಗೆ ನೌಕರರ ಆಗ್ರಹವಾಗಿದೆ ಎಂದು ಅನಂತ ಸುಬ್ಬರಾವ್ ಹೇಳಿದ್ದಾರೆ.

01-01-2020ರಿಂದ ಆಗಿರುವ ಶೇ.15ರಷ್ಟು ವೇತನ ಹೆಚ್ಚಳದ ನಂತರದ 38 ತಿಂಗಳ ಬಾಕಿ ಹಣವನ್ನು ವಿಳಂಬವಿಲ್ಲದೆ ಪಾವತಿಸುವುದು, ಸದ್ಯ ನೌಕರರು ಪಡೆಯುತ್ತಿರುವ ವಿವಿಧ ಭತ್ಯೆಗಳನ್ನು ಐದು ಪಟ್ಟು ಹೆಚ್ಚಳ ಮಾಡುವುದು, ಎಲ್ಲಾ ನೌಕರರಿಗೂ ಪ್ರತೀ ತಿಂಗಳೂ ಹೊರ ರೋಗಿ ಚಿಕಿತ್ಸೆ ವೆಚ್ಚಕ್ಕಾಗಿ ಎರಡು ಸಾವಿರ ರೂ ಜೊತೆಗೆ ಉಚಿತ ಔಷಧಿ ನೀಡುವುದು, ಇಎಸ್‌ಐ ಮಾದರಿಯಲ್ಲಿ ನೌಕರರ ಮೂಲ ವೇತನದ ಶೇ.4.5 ಹಾಗೂ ನೌಕರರಿಂದ ಶೇ.0.5 ವಂತಿಗೆ ಸಂಗ್ರಹಿಸಿ ಟ್ರಸ್ಟ್ ರಚಿಸಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಕೊಡುವ ಯೋಜನೆ ರೂಪಿಸಬೇಕು.

ನಿವೃತ್ತ ನೌಕರರು ಮತ್ತು ಅವರ ಪತಿ/ಪತ್ನಿ ಹಾಗೂ ಮಕ್ಕಳಿಗೂ ಆರೋಗ್ಯ ಯೋಜನೆ ನೀಡಬೇಕು ಎಂಬುದು ಸಾರಿಗೆ ನೌಕರರ ಬೇಡಿಕೆಯಾಗಿದೆ.

# ರಾಜೀನಾಮೆ ಕೊಡುವ ಅಗತ್ಯವಿಲ್ಲ:ಮಹಿಮುದ ಮದನಾ



ಮಲ್ಲಮ್ಮ ನುಡಿ ವಾರ್ತೆ

ಸೇಡಂ, ಡಿ,30: ಕೋವಿಡ್ ಸಮಯದಲ್ಲಿ ಆಗಿನ ಬಿಜೆಪಿ ಸಿಎಂ ಲೂಟಿ ಮಾಡಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದಾಗ ಅದನ್ನೂ ಃಎಕ ಏಚಿಡಿಟಚಿ-ಣಚಿಇಚಿ ಅವರು ರಾಜೀನಾಮೆ ಕೊಡಿಸಿದ್ರಾ? ಸಿಎಂಯಡಿಯೂರಪ್ಪ ಅವರು ಆಗಿದ್ದಾಗ ಅವರ ಸುಪುತ್ರ ಹಾಗು ಹಾಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೆಂದ್ರ ಅವರು ಚೆಕ್ ,ಖಖಿಉಖ ಮೂಲಕ ಲಂಚ ಪಡೆದಾಗ ಅದು ಸುದ್ದಿಯಾದಾಗ ಬಿಜೆಪಿ ಅವರು ರಾಜಿನಾಮೆ ಕೊಡಿ ಅಂತ ಯಡಿಯೂರಪ್ಪಾ ಅವರಿಗೆ ಹೇಳಿದ್ರಾ? ಚುನಾವಣಾ ಬಾಂಡ್ ಅಲ್ಲಿ ಲೂಟಿ ಆಗಿದೆ ಅಂತ ಬೆಂಗಳೂರು ಅಲ್ಲಿ ನೇರವಾಗಿ ಕೇಂದ್ರ ಸರ್ಕಾರ ದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಇತರರ ಮೇಲೆ ಎ???ಆರ್ ಆದಾಗ ನೈತಿಕತೆ ಕಾರಣಕ್ಕೆ ಅವರನ್ನು ರಾಜಿನಾಮೆ ಕೊಡಿ ಅಂದ್ರಾ ಬಿಜೆಪಿ ನಾಯಕರು? ಪ್ರಲ್ಹಾದ ಜೋಶಿ ಅವರ ಸ್ವಂತ ಸಹೋದರ ಎಂಪಿ ಟಿಕೇಟ್ ಕೊಡಿಸ್ತೀನಿ ಅಂತಾ ಕೋಟ್ಯಂತರ ರುಪಾಯಿ ಹಣ ಪಡೆದು ವಂಚಿಸಿದ್ದು ಅದು ಎಆರ್ ಆದಾಗ ರಾಜಿನಾಮೆ ಕೊಡಬೇಕಿತ್ತು ಜೋಷಿ ಅವರು. ಅಗ ಬಿಜೆಪಿ ಅವರಿಗೆ ಜೋಷಿ ಅವರು ರಾಜಿನಾಮೆ ಕೊಡಿ ಅಂದರಾ? ಈಗ ಗುತ್ತಿಗೆದಾರ ವ್ಯಕ್ತಿ ರಾಜು ಅನ್ನುವವರ ಜೊತೆ ಪ್ರಿಯಾಂಕ್ ಖರ್ಗೆ ಅವರ ಹತ್ತಿರ ಕರೆದುಕೊಂಡು ಹೋಗಿದರು. ಅವರು ಅಇ ಅವರಿಗೆ ಕೆಲಸ ಇದೆ ಅಂದಿದ್ದಕ್ಕೆ ಫೋನ್ ಮಾಡಿದ್ರು ಅಂತ ಹೇಳಿರೋದಕ್ಕೆ ರಾಜಿನಾಮೆ ಕೊಡಿ ಅನ್ನುವ ಬಿಜೆಪಿ ನಾಯಕರೆ, ಮೊದಲು ಒಂದು ಕೆಲಸ ಮಾಡಿ, ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ವಿಧಾನಸಭಾ ಮತಕ್ಷೇತ್ರದ ಬಿಜೆಪಿಯ ನಾಲವಾರ ಮಂಡಲದ ನಿಮ್ಮದೇ ಪಕ್ಷವಾದ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಆದ ನಂದಾರೆಡ್ಡಿ ಅವರಲ್ಲಿರುವ ಪ್ರಬುದ್ಧತೆ ಬೆಳೆಸಿಕೊಳ್ಳಿ. ಅವರ ಹೇಳಿಕೆಯ ಅಂಶಗಳನ್ನು ಮತ್ತೆ ಮತ್ತೆ ಓದಿ. ಅಂತವರಿಂದ ಕಲಿಯಿರಿ. ಕೊನೆಯದಾಗಿ, ನಿಮ್ಮ ತಟ್ಟೆಯಲ್ಲಿ ಬಿದ್ದಿರುವ ಬೃಹತ್ ಗಾತ್ರದ ಹೆಗ್ಗಣ ನೋಡಿ ಆಮೇಲೆ ಬೇರೆಯವರ ತಟ್ಟೆಯಲ್ಲಿ ಬಿದ್ದಿರುವ ನೊಣದ ರೆಕ್ಕೆ ನೋಡಿ. ಗುತ್ತಿಗೆದಾರ ಆತ್ಮಹತ್ಯಾ ಮಾಡಿಕೊಂಡಿರೋದು ವಿಷಾದನೀಯ ಸಂಗತಿ. ಅದರ ಬಗ್ಗೆ ಸಮಗ್ರ ತನಿಖೆ ಆಗಲಿ ಮತ್ತು ತಪ್ಪಿಸ್ತರು ಯಾರೇ ಇದ್ದರೂ ಶಿಕ್ಷೆ ಆಗಲಿ ಅಂತಾ ಖುದ್ದು ಸಚಿವರೇ ಹೇಳಿದ್ದಾರೆ. ಇನ್ನೇನು ಬೇಕು? ಬಿಜೆಪಿ ನಾಯಕರು ಬೀದಿ ಡೊಂಬರಾಟ ಮಾಡುವುದು ನಿಲ್ಲಿಸಿ. ಜನರಿಗೆ ಸತ್ಯ ಗೊತ್ತಿದೆ. ಇಂಥ ಕಾರಣಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಪ್ರಿಯಾಂಕ ಖರ್ಗೆ ಅವರು ರಾಜೀನಾಮೆ ಕೊಡುವ ಅಗತ್ಯವೂ ಇಲ್ಲ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಸೋನಿಯಾ ಗಾಂಧಿ ಬ್ರಿಗೇಡ್ ಆಲ್ ಇಂಡಿಂ-ಯಾ ರಾಜ್ಯ ಕಾರ್ಯಧ್ಯಕ್ಷರು, ಹಾಗೂ 5 ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಸದಸ್ಯರು ಸೇಡಂ ಮಹಿಮುದ ಮದನಾ ತಿಳಿಸಿದ್ದಾರೆ.

# ಮದ್ಯದ ಅಮಲಿನಲ್ಲಿ ಕ್ರಿಮಿನಾಶಕ ಸೇವಿಸಿ ವ್ಯಕ್ತಿ ಸಾವು




ಮಲ್ಲಮ್ಮ ನುಡಿ ವಾರ್ತೆ


ಕಲಬುರಗಿ,ಡಿ.29- ಮದ್ಯದ ಅಮಲಿನಲ್ಲಿ ಕ್ರಿಮಿನಾಶಕ ಸೇವಿಸಿ ವ್ಯಕ್ತಿಯೊಬ್ಬ ಮೃತಪಟ್ಟಿರುವ ಘಟನೆ ಹಡಗಿಲ್ ಹಾರುತಿ ಗ್ರಾಮದಲ್ಲಿ ನಡೆದಿದೆ.

ಬಸವರಾಜ ಬಿಳಾಲ (35) ಮೃತಪಟ್ಟವರು.

ಮದ್ಯ ಸೇವನೆ ಚಟಕ್ಕೆ ಅಂಟಿಕೊಂಡಿದ್ದ ಬಸವರಾಜ ಪತ್ನಿ ಎರಡನೇ ಮಗುವಿನ ಹೆರಿಗೆಗೆಂದು ತವರು ಮನೆಗೆ ಹೋಗಿದ್ದ ವೇಳೆ ಮನೆಯಲ್ಲಿ ಮದ್ಯ ಸೇವನೆ ಮಾಡಿ ತೊಗರಿ ಬೆಳೆಗೆ ಸಿಂಪಡಣೆ ಮಾಡುವ ಕ್ರಿಮಿನಾಶಕ ಸೇವಿಸಿದ್ದರು. ಅವರನ್ನು ಚಿಕಿತ್ಸೆಗಾಗಿ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಈ ಸಂಬಂಧ ಮೃತ ಬಸವರಾಜ ಅವರ ಪತ್ನಿ ಮಿನಾಕ್ಷಿ ಬಿಳಾಲ ಅವರು ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

## ಸರ್ಕಾರಿ ನೌಕರರ ಸಂಘದ ಚುನಾವಣೆಯಲ್ಲಿ ಎರಡನೇ ಅವಧಿಗೆ ಅಧ್ಯಕ್ಷರಾಗಿ ಸಿ.ಎಸ್. ಷಡಾಕ್ಷರಿ ಪುನರ್ ಆಯ್ಕೆ:ಹರ್ಷ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಸರ್ಕಾರಿ ನೌಕರರ ಸಂಘದ ಚುನಾವಣೆಯಲ್ಲಿ ಎರಡನೇ ಅವಧಿಗೆ ಅಧ್ಯಕ್ಷರಾಗಿ ಸಿ.ಎಸ್. ಷಡಾಕ್ಷರಿ ಆಯ್ಕೆ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ 64 ಮತಗಳಿಂದ ಜಯಗಳಿಸಿ, ಮತ್ತೆ ನೂತನ ಅಧ್ಯಕ್ಷರಾಗಿ ಚುಕ್ಕಾಣಿ ಹಿಡಿದಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು 64 ಮತಗಳ ಅಂತರದಿಂದ ಎರಡನೇ ಬಾರಿಗೆ ಆಯ್ಕೆಯಾಗಿದ್ದಾರೆ. ರಾಜ್ಯಾಧ್ಯಕ್ಷರಾಗಿ ಸಮಸ್ತ ನೌಕರರ ಬಗ್ಗೆ ಕಾಳಜಿ ವಹಿಸಿ ಶರವೇಗದಲ್ಲಿ ಸಂಘವನ್ನು ಮುನ್ನಡೆಸಿಕೊಂಡು






ಬಂದ ಹೆಮ್ಮೆಯ ಸ್ನೇಹಜೀವಿ ಶ್ರೀ ಸಿ.ಎಸ್. ಷಡಾಕ್ಷರಿ ರವರಿಗೆ ಹುಮ್ನಾಬಾದ್ ತಾಲೂಕಿನ ಸಮಸ್ತ ಸರ್ಕಾರಿ ನೌಕರರ ಪರವಾಗಿ ಮಾಜಿ ಪ್ರಧಾನ ಕಾರ್ಯದರ್ಶಿ ಯಾದರೇವಣಸಿದ್ಧಯ್ಯಾಮಠಪತಿ, ಅವರು ಅಭಿನಂದಿಸಿದ್ದಾರೆ. ಇದೆ ಸಂಧರ್ಭದಲ್ಲಿ ಸಂಗಮೇಶ ಜಂಬಗಿ, ಶಿವರಾಜ್ ಗೋರ್ಟಾ, ಮಾಣಿಕ್ ನಾಗನಾಯಕ್, ಮಲ್ಲಿಕಾರ್ಜುನ ಸಂಗಮಕರ, ಮಾಜಿ ರಾಜ್ಯ ಪರಿಷತ್ ಸದಸ್ಯರು, ಶಿವಕುಮಾರ್ ಕಂಪ್ಲಿ ಮಾಜಿ ಸಂಘಟನ ಕಾರ್ಯದರ್ಶಿ, ಈಶ್ವರ ತಾಡೋಳ ಮಾಜಿ ಸಂಸ್ಕೃತಿಕ ಕಾರ್ಯದರ್ಶಿ ರವರು ಅಭಿನಂದಿಸಿದ್ದಾರೆ.



ಬಸವಕಲ್ಯಾಣ :- ತಾಲೂಕಿನ ಮಂಠಾಳ ಗ್ರಾಮದ ಸಾಹಿತಿಗಳು ಹಾಗೂ ಶಿಕ್ಷಕರಾದ ನಾಗೇಂದ್ರಪ್ಪಾ ಬಿರಾದಾರ ಅವರ ಹೊಲದಲ್ಲಿ ಎಳ್ಳ ಅಮಾವಾಸ್ಯೆ ಪ್ರಯುಕ್ತ ಸಾಮೂಹಿಕ ಭೋಜನದಲ್ಲಿ ಪಾಲ್ಗೊಂಡಿರುವುದು ಕಾಣಬಹುದು. ಈ ಸಂದರ್ಭದಲ್ಲಿ ರೇಣುಕಾ ಶ್ರೀಕಾಂತ ಪಾಟೀಲ, ಶಿಕ್ಷಕಿ ಮಹಾದೇವಿ, ನಾಗಪ್ಪ ನಿಣ್ಣೆ, ರಾಮಲಿಂಗ ಇಲ್ಲಾಳ, ಶರತ ಬಿರಾದಾರ,ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

## ಶ್ರೀ ಮಹಾದೇವನ ಮಹೇಶ್ವರನ ಮಹಾರಥೋತ್ಸವ ಸಂಪನ್ನ

( ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ದೇವಾಲಯಗಳ ಚಕ್ರವರ್ತಿ ಎಂದು ಬಿರುದು ಅಂಕಿತನಾಗಿರುವ ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಇಟಗಿ ಗ್ರಾಮದ ಮಹಾದೇವ ದೇವ ( ಮಹೇಶ್ವರನ) ಮಹಾ ರಥೋತ್ಸವ ಎಳ್ಳು ಅಮಾವಾಸ್ಯೆಯ ದಿನವಾದ ಸೋಮವಾರದಂದು ಸಾಯಂಕಾಲ 6.45 ಬ್ರಾಹ್ಮಿ ಮೂರ್ತದಲ್ಲಿ

ಯಲಬುರ್ಗಾ ದರಮುರುಡಿ ಹಿರೇಮಠದ ಶ್ರೀ ಬಸವಲಿಂಗೇಶ್ವರ ಸ್ವಾಮೀಜಿ ಹಾಗೂ ಕುಕನೂರಿನ ಅನ್ನದಾನೇಶ್ವರ ಶಾಖ ಮಠದ ಶ್ರೀಗಳಾದ ಡಾ. ಮಹದೇವ ಮಹಾಸ್ವಾಮಿಗಳು ರಥೋತ್ಸವಕ್ಕೆ ಚಾಲನೆ ನೀಡಿದರು.

ಮಹಾದೇವ ಮಹೇಶ್ವರನ ಮಹಾ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಸಹಸ್ರರು ಭಕ್ತರು ಈ ಮಹಾ ರಥೋತ್ಸವದಲ್ಲಿ ಪಾಲ್ಗೊಂಡು ಪುನೀತರಾದರು.

ಈ ಸುಂದರ ಐತಿಹಾಸಿಕ ದೇವಾಲಯಗಳ ನಡುವೆ ಕುಳತಿರುವ ಇಟಗಿ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದ ಆರಾಧ್ಯ ದೈವ



ಮಹಾದೇವ ಮಹೇಶ್ವರನ ಜಾತ್ರೆ ನಿಮಿತ್ಯ ಮಹಾ ರಥೋತ್ಸವದಲ್ಲಿ ಪಾಲ್ಗೊಂಡು ದರ್ಶನ ಪಡೆದು ಪುನೀತರಾದರು.

ಜಾತ್ರೆಯ ಪ್ರಯುಕ್ತ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೇರಿದವು

ಸಹಸ್ರಾರು ಭಕ್ತರು ತಮ್ಮ ಇಷ್ಟಾರ್ಥ ಹಾಗೂ ಹರಕೆಗಳನ್ನು ತೀರಿಸಿ ಮಹಾದೇವನ ಕೃಪೆಗೆ ಪಾತ್ರರಾದರು.

ಶ್ರೀ ಮಹಾದೇವನ ಜಾತ್ರಾ ಪ್ರಯುಕ್ತ ಇಟಗಿ ಗ್ರಾಮದಲ್ಲಿ ವಿವಿಧ ಪಂದ್ಯಗಳ ಸ್ಪರ್ಧಾಳಿಗಳು ಹಾಗೂ ಅನೇಕ ಮನೋರಂಜನ ಕಾರ್ಯಕ್ರಮಗಳು ಆಯೋಜನೆ



ಮಾಡಲಾಗಿತ್ತು.

ಪ್ರತಿವರ್ಷದಂತೆ ಈ ವರ್ಷವೂ ಸಹ ಮಹಾದೇವನ ಮಹಾರಥೋತ್ಸವದಲ್ಲಿ ದೇವಸ್ಥಾನದ ಅರ್ಚಕರ (ಪೂಜಾರರ) ಕುಟುಂಬಸ್ಥರಿಂದ ಅನ್ನಸಂತರ್ಪಣೆಯ ಮಹಾಪ್ರಸಾದ ಕಾರ್ಯಕ್ರಮ ಆಯೋಜಿಸಲಾಗಿತ್ತು

ಶ್ರೀ ಮಹಾದೇವನ ದರ್ಶನ ಪಡೆದ ಎಲ್ಲಾ ಭಕ್ತರು ಪ್ರಸಾದ ಸ್ವೀಕರಿಸಿ ಶ್ರೀ ಮಹಾದೇವನ ಕೃಪೆಗೆ ಪಾತ್ರರಾದರು.

## ಸಾರಿಗೆ ನೌಕರರ ಬೇಡಿಕೆ ಈಡೇರಿಕೆಗೆ ಆಶ್ವಾಸನೆ,ಡಿ. ಇಂದು ಅನಿರ್ಧಿಷ್ಟಾವಧಿ ಮುಷ್ಕರ ಮುಂದಕ್ಕೆ.

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಕೆ,ಎಸ್,ಆರ್,ಟಿ,ಸಿ, ನೌಕರರ ವಿವಿಧ ಬೇಡಿಕೆಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಂಕ್ರಾಂತಿ ಹಬ್ಬದ ಬಳಿಕ ಈಡೇರಿಕೆಗೆ ಆಶ್ವಾಸನೆ ನೀಡಿದರಿಂದ ಕ.ರಾ.ರ.ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯಿಂದ ಡಿ. 31ರ ಅನಿರ್ಧಿಷ್ಟಾವಧಿ ಮುಷ್ಕರ ಮುಂದೊಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊಪ್ಪಳ ವಿಭಾಗದ ಎಲ್ಲಾ ಹಂತದ ಕಾರ್ಮಿಕರಿಗೆ ಹಾಗೂ ಸಿಬ್ಬಂದಿಗಳಿಗೆ ಜಂಟಿ ಕ್ರಿಯಾ ಸಮಿತಿಯಿಂದ ದಿನಾಂಕ: 31-12-2024ರಿಂದ ಪ್ರಾರಂಭವಾಗಬೇಕಿದ್ದ ಅನಿರ್ಧಿಷ್ಟಾವಧಿ ಮುಷ್ಕರದ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ




ಸಚಿವ ರಾಮಲಿಂಗಾರೆಡ್ಡಿ ಹಾಗೂ ಸಂಸ್ಥೆಯ ಎಲ್ಲಾ ಹಿರಿಯ ಅಧಿಕಾರಿಗಳು ಕಾರ್ಮಿಕರ ಸಮಸ್ಯೆಯನ್ನು ಜನವರಿ 2025ರ ಸಂಕ್ರಾಂತಿಯ ನಂತರ ಬಗೆಹರಿಸಿ ಕೊಡುವುದಾಗಿ ನಮ್ಮೊಂದಿಗೆ ಚರ್ಚಿಸಿದ್ದರಿಂದ ಜಂಟಿ ಕ್ರಿಯಾ ಸಮಿತಿ 31-12-2024 ರ ಅನಿರ್ಧಿಷ್ಟಾವಧಿ ಮುಷ್ಕರವನ್ನು ಮುಂದೂಡಲಾಗಿದೆ.

ಈ ಸಮಯದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲಿಸಿದ ವಿಭಾಗದ ಎಲ್ಲಾ ಹಂತದ ಸಿಬ್ಬಂದಿಗಳಿಗೂ ಹಾಗೂ ಅಧಿಕಾರಿ ವರ್ಗವರಿಗೆ ಮತ್ತು ಭದ್ರತಾ ಅಧಿಕಾರಿಗಳು ಸಿಬ್ಬಂದಿ ವರ್ಗದವರಿಗೆ ಹಾಗೂ ಮಾಧ್ಯಮದವರಿಗೂ ಧನ್ಯವಾದಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಜಿಲ್ಲಾ ಸಂಚಾಲಕರುಗಳಾದ ಯು. ಎಸ್.ಸೊಪ್ಪಿಮಠ ವಕೀಲರು,ಎ,ಬಿ, ದಿಂಡೂರ, ಹನುಮಂತಪ್ಪ ಅಂಬಿಗೇರ್, ಎಸ್.ಎ.ಗಫಾರ್, ಮಖಬೂಲ್ ರಾಯಚೂರು ಮುಂತಾದವರು ತಿಳಿಸಿದ್ದಾರೆ.



(ವರದಿ ಪರಮೇಶ ರಾಂಪುರೆ) ಕಮಲನಗರ:ತಾಲೂಕಿನ ಡಿಗ್ಗಿ ಗ್ರಾಮದ ಶಿವರಾಜ ರಾಂಪುರೆ ಅವರ ಹೊಲದಲ್ಲಿ ಎಳ್ಳ ಅಮಾವಾಸ್ಯೆ ನಿಮಿತ್ತ ಭಜ್ಜಿ ರೊಟ್ಟಿ, ಜೋಳದಅನ್ನ, ಅಮಲಿ ಊಟವನ್ನು ಬಂದು ಮಿತ್ರರ ಜೊತೆ ಎಳ್ಳ ಅಮಾವಾಸ್ಯೆ ಹಬ್ಬದ ವಿಶೇಷ ಊಟ ಸವಿಯಲಾಯಿತು. (ಮಲ್ಲಮ್ಮ ನುಡಿ ಚಿತ್ರ).

## ಸಂವಿಧಾನದ ಅರಿವು ಯುವಕರು ಪಡೆಯಲಿ ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಲ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- (ಹುಲಸೂರ) ಸರ್ವಜನರಿಗೂ ಸಮಾನತೆ,ಸ್ವಾತಂತ್ರ್ಯ,ಸರ್ವರಿಗೂ ಸಮಪಾಲು ಸಮಬಾಳು ನೀಡಿದ್ದು ಬಾಬಾಸಾಹೇಬ ಅಂಬೇಡ್ಕರ್.ಈ ದೇಶದ ಹಲವು ಧರ್ಮ,ಜಾತಿ,ಮತ,ಪಂಗಡಗಳು ಇರುವ ದೇಶದಲ್ಲಿ ಸಂವಿಧಾನ ರಚನೆ ಮಾಡುವುದು ಕಷ್ಟ ಇದ್ದಾಗ ಅದನ್ನ ಅರ್ಥಮಾಡಿಕೊಂಡು ಸರ್ವಜನಾಂಗದ ಸಂವಿಧಾನ ಕೊಟ್ಟಿದ್ದು ಡಾ.ಅಂಬೇಡ್ಕರ್ ಯುವಕರು ಸಂವಿಧಾನ ಅರಿವು ಪಡೆದು ನಡೆಯಬೇಕು ಎಂದು ಕಲಬುರಗಿ ಹಿರಿಯ ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಲ ಹೇಳಿದರು.

ತಾಲೂಕಿನ ಮುಚಳಂಬ ಗ್ರಾಮದಲ್ಲಿ ಯುವಕರ ನಡೆ ಸಂವಿಧಾನ ಕಡೆ ವಿಶೇಷ ಉಪನ್ಯಾಸ ಚೇತನ ಸಿರಿ ಪ್ರಶಸ್ತಿ ಪ್ರದಾನ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ಸಂವಿಧಾನ ಸೂರ್ಯ-ಚಂದ್ರ ಇರುವ ತನಕ ಶಾಶ್ವತವಾಗಿ ಉಳಿಯ ಲಿದೆ ಎಂದರು.ಮಹಿಳೆಗೆ,ಶಿಕ್ಷಣ,ಸಮಾನತೆ ಕೊಟ್ಟ ಸಂವಿಧಾನ. ಕಡೆ ಮುಖ ಯುವಕರು ಮಾಡಲಿ ಎಂದರು.

ನಮಗೆ ದೇವರು ಅಂ-ದ್ರೆ ಅಂಬೇಡ್ಕರ್ ಮಾತ್ರ. ಎಪ್ಪತ್ತೈದು ವರ್ಷ ಸಂವಿಧಾನದ ಆಶಯಗಳಿಗೆ ಅಪಾಯವೆಂದು ಅರಿತು ಯುವಕರು ಸಂವಿಧಾನ ಕಡೆ ಮುಖ ಮಾಡಬೇಕು.ಬೌದ್ಧ ಧರ್ಮದ ವೈಜ್ಞಾನಿಕ ಧರ್ಮ ಅಪ್ಪಿದವರು.ಅಂಬೇಡ್ಕರ್ ಒಂದು ಜಾತಿಗೆ ಸೀಮಿತರಲ್ಲ ಅವರೊಬ್ಬ ದೇಶದ ಆಸ್ತಿ ಎಂದರು. ಸರಕಾರಿ ಸ್ವಾಯತ್ತ ಮಹಾವಿದ್ಯಾಲಯ ಕಲಬುರಗಿ ಪ್ರಾಧ್ಯಾಪಕ ಪ್ರೊ.ಶ್ರೀಮಂತ ಹೋಳ್ಕರ್ ಅವರು ವಿಶೇಷ ಉಪನ್ಯಾಸ ನೀಡಿದರು.

ಬೇಲೂರಿನ ಉರಿಲಿಂಗ ಪೆದ್ದಿ ಮಠದ ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮೀಜಿ ಮಾತನಾಡಿದರು.

ದೇವರಗುಡ್ಡದ ಅಮಾತೇಶ್ವರ ಮಠದ ಪೂಜ್ಯ ಶ್ರೀ ಬಸವರಾಜ ಸ್ವಾಮೀಜಿ,ಮುಚಳಂಬ ಉರಿಲಿಂಗಪೆದ್ದಿ ಮಠದ ಶಾಖಾಮಠದ ಪೂಜ್ಯಶ್ರೀ ಚಿದಾನಂದ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಗ್ರಾ.ಪಂ.ಉಪಾಧ್ಯಕ್ಷೆ ಶಾಲಿನ ಅನೀಲ ಸೋನಪುಲೆ, ಪಿ.ಡಿ.ಓ. ಅರ್ಜುನ ಸಿಂಧೆ ವೇದಿಕೆ ಮೇಲಿದ್ದರು. ಗ್ರಾ.ಪಂ.ಅಧ್ಯಕ್ಷೆ ಸೋನಿಯಾ ಸಿದ್ಧಾರೂಢ ಪಾಟೀಲ ಅಧ್ಯಕ್ಷತೆಯನ್ನು ವಹಿಸಿದ್ದರು.

ದಾಸೋಹ ರತ್ನ ಪ್ರಶಸ್ತಿಯನ್ನು ವೈಜನಾಥ ಫುಲೆ ದಂಪತಿಗಳಿಗೆ ಪ್ರದಾನ ಮಾಡಲಾಯಿತು.

ನಿವೃತ್ತಿ ಹೊಂದಿದ ಹಲವರಿಗೆ ಸನ್ಮಾನಿಸಲಾಯಿತು. ಚೇತನ ಸಿರಿ ಪ್ರಶಸ್ತಿ ಪುರಸ್ಕೃತರು: ಶಿವಾನಂದ ಮೇತ್ರೆ,ತಹಸೀಲ್ದಾರರು,ಹುಲಸೂರ ಸಿದ್ಧವೀರಯ್ಯ ರುದ್ನೂರಮಠ ಬಿ.ಇ.ಓ.ದಿಲೀಪಕುಮಾರ ಉತ್ತಮ,ಸಮಾಜ ಕಲ್ಯಾಣಾಧಿಕಾರಿ ಡಾ.ಗೌತಮ ಸಿಂಧೆ,ಮಕ್ಕಳ & ಮಹಿಳಾ ಅಭಿವೃದ್ಧಿ ಅಧಿಕಾರಿಗಳು,ಪಂಡಿತ ಎಂ.ಪಿ.ಎಸ್.ಐ,ಹುಲಸೂರ ಸಂಜೀವಕುಮಾರ ಕಾಂಗೆ ಕ್ಷೇತ್ರ ಸಮನ್ವಯಾಧಿಕಾರಿ ಅವರಿಗೆ ಪ್ರದಾನ ಮಾಡಲಾಯಿತು. ಈ ವೇಳೆ ವಿಜಯಲಕ್ಷ್ಮಿ ಚಂದ್ರಕಾಂತ ರಾದು. ಗುರುನಾಥ ಗಡ್ಡೆ. ಜಿಲ್ಲಾ ಬೀದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ರಾಜಕುಮಾರ ಮೊರೆ. ಯುವ ನಾಯಕ ದತ್ತು ಬೆಂಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಮ್ರಪಾಲಿ ಮಹಿಳಾ ಭಜನಾ ಸಂಘ ಪ್ರಾರ್ಥಿಸಿದರು, ಶಾಖಾಮಠದ ಪೂಜ್ಯ ಮಹಾಲಿಂಗ ದೇವರು ಸ್ವಾಗತಿ ಸಿ ಹಾಗೂ ಪ್ರಾಸ್ತಾವಿಕ ನುಡಿ. ಭೀಮಶಾ ವಾಘಮಾರೆ ಮತ್ತು ನಿತ್ಯಾನಂದ ಮಂಠಾಳಕರ ನಿರೂಪಿಸಿದರು ಗಣೇಶ ಸಾಧು ವಂದಿಸಿದರು.

## ಮಹಿಳೆಯರು ತರಬೇತಿ ಪಡೆದು ಸ್ವಾವಲಂಬಿಗಳಾಗಿ



( ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಮಹಿಳೆಯರು ಪರಿವರ್ತನೆ ಹೆಜ್ಜೆ ತರಬೇತಿ ಪಡೆಯುವದರ ಮೂಲಕ ಸಾವಲಂಬನೆ ಬದುಕು ರೂಪಿಸಿಕೊಳ್ಳಬೇಕು ಎಂದು ಕೊಪ್ಪಳ ತಾಲೂಕ ಪಂಚಾಯತ ಯೋಜನಾ ಅಧಿಕಾರಿ ರಾಜಾಸಾಬ ನದಾಪ ಹೇಳಿದರು .

ಅವರು ಪಟ್ಟಣ ತಾಲೂಕ ಪಂಚಾಯತ ಆವರಣದ ಕೃಷಿ ವಿಸ್ತಾರಣ ಶಿಕ್ಷಣ ಕೇಂದ್ರದಲ್ಲಿ ಜರುಗಿದ ಜಿಲ್ಲಾ ಪಂಚಾಯತ ಕೊಪ್ಪಳ, ಕರ್ನಾಟಕ ಗ್ರಾಮೀಣ ಜೀವನೋಪಾಯ ಸಂವರ್ದಾನಾ ಸಂಸ್ಥೆ ಬೆಂಗಳೂರ,, ಅಬ್ದುಲ್ ನಜೀರು ಸಾಬ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮೈಸೂರು , ಸಂಯುಕ್ತ ಆಶ್ರಯದಲ್ಲಿ ಜರುಗಿದ ಗ್ರಾಮ ಪಂಚಾಯತ ಸಂಜೀವಿನಿ ಒಕ್ಕೂಟದ ಅಧ್ಯಕ್ಷ ರಿಗೆ 3 ದಿನಗಳ ವಸತಿ ಸಹಿತ ತರಬೇತಿ ಚಾಲನೆ ನೀಡಿ ಮಾತನಾಡಿದರು.

ಇಂದಿನ ಸರಕಾರಗಳು ಮಹಿಳೆಯರು ಸಾವಲಂಬನೆ ಬದುಕು ಕಟ್ಟಿಕೊಳ್ಳಲು ಸರಕಾರ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ ಅಧ್ಯಕ್ಷರು ತರಬೆತಿಯಿಂದ ತಮ್ಮ ಒಕ್ಕೂಟದ ವನ್ನು ಸಮುದಾಯದ ಆಧಾರಿತ ಸಂಸ್ಥೆ ಗಳಾಗಿ ಜವಾಬ್ದಾರಿ ತೆಗೆದುಕೊಂಡು ಸಮಾಜ ಸುಧಾರಣೆ ಮಾಡುವಲ್ಲಿ ಒಕ್ಕೂಟವು ಬದಲಾವಣೆ ಮಾಡಬೇಕು ಸಮುದಾಯದ ಬಂಡವಾಳ ನಿಧಿ ಬಹಿಸದೆ ವಿವಿಧ ಇಲಾಖೆಗಳ ಸೌಲಭ್ಯಗಳನ್ನು ಪಡೆದು ಸಾವಲಂಬನೆಯಾಗಬೇಕು ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಸಂಜೀವಿನಿ ಯೊಜನೆಯ ಜಿಲ್ಲಾ ವ್ಯವಸ್ಥಾಪಕ ವೆಂಕೋಬ ಗುರಿಕಾರ, ಅಬ್ದುಲ್ ನಜೀರಸಾಬ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಡಿಟಿಸಿ ಮಲ್ಲಯ್ಯ , ಜಿಲ್ಲಾ ಸಂಪನ್ಮೂಲ ವ್ಯಕ್ತಿ ಶೋಭಾ ಜಿಗಳೂರ, ಸಂಜೀವಿನಿ ವಲಯ ಸಂಯೋಜಕ ಶರಣಪ್ಪ , ವಿದ್ಯಾಶ್ರೀ, ಜಿಲ್ಲಾ ಸಂಪನ್ಮೂಲ ವ್ಯಕ್ತಿ ಬಸವರಾಜ ಮುಂಡರಗಿ ಕಾರ್ಯಕ್ರಮ ನೀರೂಪಿಸಿದರು.

ನಂತರ ಗ್ರಾಮ ಪಂಚಾಯತ ಒಕ್ಕೂಟದ ಅಧ್ಯಕ್ಷರಿಗೆ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಬಸವರಾಜ ಮುಂಡರಗಿ, ಶೋಭಾ ಜಿಗಳೂರ ರವರು ಅದ್ಯಕ್ಷರಿಗೆ ಸಾಮರ್ಥ್ಯ ಅಭಿವೃದ್ಧಿ, ಸಮುದಾಯ ಆದಾರಿತ ಸಂಸ್ಥೆ, ಎಂದರೆ ಯಾವವೂ , ಗುರಿ ಉದ್ದೇಶಗಳು, ಸಂಜೀವಿಯೋಜನೆ ಗುರಿಗಳನ್ನು ಸಂಜೀವಿನಿ ಯೋಜನೆ ನೆಡೆದು ಬಂದ ದಾರಿಯ ಕುರಿತು ತರಬೇತಿ ನೀಡಲಾಯಿತು.


## ಕೃಷಿ ಪತ್ತಿನ ಅಧ್ಯಕ್ಷರಾಗಿ ಗಿರೀಶ್ ಪಟ್ಟಣಶೆಟ್ಟಿ ಆಯ್ಕೆ.

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ತಾಲೂಕಿನ ಇಲ್ಕಲಗಡ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಗಿರೀಶ್ ಪಟ್ಟಣಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಉಪಾಧ್ಯಕ್ಷರಾಗಿ ಸಂಗಮ್ಮ ಬಾಳಪ್ಪ ಕುಂಬಾರ್ ಆಯ್ಕೆಯಾಗಿರುತ್ತಾರೆ ಇತ್ತೀಚಿಗೆ ನಡೆದ ಸಹಕಾರಿ ಸಂಘಕ್ಕೆ 12 ಜನ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದರು ಇವತ್ತು ನಡೆದ ಅಧ್ಯಕ್ಷರ ಆಯ್ಕೆಯಲ್ಲಿ ಅವಿರೋಧವಾಗಿ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯನ್ನು ಮಾಡಲಾಯಿತು ಈ ಸಂದರ್ಭದಲ್ಲಿ ಊರಿನ ಹಿರಿಯರಾದ ಸಂಗಮೇಶ್ ಬಾಗವಾಡಗಿ ಗಂಗಾಧರ ಸ್ವಾಮಿ ಹಿರೇಮಠ ವೆಂಕನಗೌಡ ಮೇಟಿ ರವಿ ದೇಸಾಯಿ ರಾಮಚಂದ್ರಪ್ಪ ದೇಸಾಯಿ ದೊಡ್ಡಬಸಪ್ಪ ತಳಕೇರಿ ನಾಗಪ್ಪ ದೇಸಾಯಿ ಬಸವರಾಜ್ ಪಿನ್ನಿ ಗಂಗಣ್ಣ ಕಾಮ್ನೂರ್ ಗ್ರಾಮ ಪಂಚಾಯತಿಯ ಸರ್ವ ಸದಸ್ಯರು ಊರಿನ ಹಿರಿಯರು ಚುನಾವಣಾ ಅಧಿಕಾರಿಗಳು ಉಪಸ್ಥಿತರಿದ್ದರು

### ಸಂಪಾದಕರ ಸಂಘದ ಕೊಪ್ಪಳ ಘಟಕಕ್ಕೆ ನೂತನ ಸಾರಥಿಗಳು

## ಅಧ್ಯಕ್ಷರಾಗಿ ಶ್ರೀನಿವಾಸ, ಕಾರ್ಯದರ್ಶೀಯಾಗಿ ಖಲೀಲ್ ಉಡೇವು ಆಯ್ಕೆ



( ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ನಗರದ ಪ್ರವಾಸಿ ಮಂದಿರದಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಕೊಪ್ಪಳ ಜಿಲ್ಲಾ ಘಟಕದ ಪುನಾರಚನೆ ಭಾನುವಾರ ನಡೆಯಿತು.

ಕೊಪ್ಪಳ ಜಿಲ್ಲಾ ಘಟಕಕ್ಕೆ ಅಧ್ಯಕ್ಷರಾಗಿ ಶ್ರೀನಿವಾಸ ಎಂ.ಜೆ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಮೊಹಮ್ಮದ್ ಖಲೀಲ್ ಉಡೇವು ಅವರು ಅವಿರೋಧವಾಗಿ ಆಯ್ಕೆಯಾದರು.

ನಂತರ ಈರಣ್ಣ ಕಳ್ಳಿಮನಿ ಹಾಗೂ ಎಸ್.ಎಂ, ಪಟೇಲ್ ಉಪಾಧ್ಯಕ್ಷರಾಗಿ, ವೈ.ಬಿ. ಜೂಡಿ ಜಂಟಿ ಕಾರ್ಯದರ್ಶಿ, ವೈ ನಾಗರಾಜ್ ಖಜಾಂಚಿಯಾಗಿ ಎಂ.ಡಿ. ಅಖೀಲ್ ಉಡೇವು ಸಂಘಟನಾ ಕಾರ್ಯದರ್ಶಿ,ಅಕ್ಷಯ್ ಇರಕಲ್ ಸಹಕಾರ್ಯದರ್ಶಿಯಾಗಿ, ಕಾರ್ಯಕಾರಿಮಂಡಳಿಯ ಸದಸ್ಯರಾಗಿ ದೇವುನಾಗನೂರು, ಎಚ್.ವಿ. ರಾಜಾಭಕ್ಷಿ ಆಯ್ಕೆಯಾದರು.

ಮುಂದಿನ ಜಿಲ್ಲಾ ಘಟಕದ ಸಭೆಯಲ್ಲಿ ಅನುಮೋದಿಸಿ ಹಿರಿಯ ಸದಸ್ಯ ಎನ್.ಎಂ. ದೊಡ್ಮನಿ ಅವರನ್ನು ರಾಜ್ಯ ಕಾರ್ಯಕಾರಣಿಗೆ ಕಳಿಸಿಕೊಡುವಂತೆ ರಾಜ್ಯಾಧ್ಯಕ್ಷ ಸಲಹೆ ನೀಡಿದರು.

ನಂತರ ಮಾತನಾಡಿದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ, ಸ್ಥಳೀಯ ಅಂದರೆ ಜಿಲ್ಲಾಮಟ್ಟದ ದಿನಪತ್ರಿಕೆಗಳು ಸಾಕಷ್ಟು ಸಮಸ್ಯೆ ಎದುರಿಸುತ್ತಿವೆ, ಸರ್ಕಾರದಿಂದ ಸೂಕ್ತವಾಗಿರುವ ಸೌಲಭ್ಯಗಳು ಸಿಗುತ್ತಿಲ್ಲ, ಈ ಹಿಂದೆ ಹೋರಾಟ ಮಾಡುವ ಉದ್ದೇಶಕ್ಕೆ ಅಸ್ತಿತ್ವಕ್ಕೆ ಬಂದಿದ್ದ ಸಾಕಷ್ಟು ಸಂಪಾದಕರ ಸಂಘಗಳು ಸ್ವಾರ್ಥಕ್ಕೆ ನಾಶವಾಗಿವೆ ಎಂದರು.

ನಮ್ಮದು ವಿಭಿನ್ನ ಸಂಘಟನೆಯಾಗಿದ್ದು ಇಡೀ ರಾಜ್ಯದಾದ್ಯಂತ ಹೆಚ್ಚು ಮನ್ನಣೆ ಸಿಗುತ್ತಿದೆ. ಈಗಾಗಲೆ ರಾಜ್ಯದ 630 ಪತ್ರಿಕೆಗಳ ಪೈಕಿ ನಮ್ಮ ಸಂಘದಲ್ಲಿ 280ಕ್ಕೂ ಹೆಚ್ಚು ಪತ್ರಿಕೆಗಳು ಸದಸ್ಯತ್ವ ಪಡೆದುಕೊಂಡಿವೆ. ನಮ್ಮ ಜವಾಬ್ದಾರಿ ಹೆಚ್ಚಾಗಿದ್ದು, ಈ ಹಿನ್ನೆಲೆ ಸಂಘಟಿತರಾಗಿ ಹೋರಾಟ ಮಾಡಬೇಕಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಟಿ.ಎಸ್. ಕೃಷ್ಣಮೂರ್ತಿ ಮಾತನಾಡಿ, ಈಗಾಗಲೆ ಜಿಲ್ಲಾ ಘಟಕದಿಂದ ಎಚ್.ಎಸ್. ಹರೀಶ್ ಮತ್ತು ವಿಶ್ವನಾಥ್ ಬೆಳಗಲ್‌ಮಠ ಅವರನ್ನು ಕೇಂದ್ರ ಸಮಿತಿಗೆ ತೆಗೆದುಕೊಳ್ಳಲಾಗಿದೆ.ನಮ್ಮ ಸಂಘಟನೆ ಗಟ್ಟಿಯಾಗಿದ್ದರೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯಗಳನ್ನು ಪಡೆದು-ಕೊಂಡು ನಮ್ಮ ಪತ್ರಿಕೆಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯ ಎಂದರು.

ಇದೀಗ ಕೊಪ್ಪಳದ ನೂತನ ಜಿಲ್ಲಾ ಘಟಕ ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. ಸದಸ್ಯತ್ವ ಪಡೆಯದೇ ಇರುವವರನ್ನು ಕೈಬಿಡಬೇಕು, ಸದಸ್ಯತ್ವ ಸ್ವೀಕರಿಸಿದ ಬಳಿಕ ಅವರನ್ನು ಜಿಲ್ಲಾ ಘಟಕಕ್ಕೆ ಮರು ಸೇರ್ಪಡೆ ಮಾಡಿಕೊಳ್ಳಿ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯ ಸಮಿತಿಯ ಉಪಾಧ್ಯಕ್ಷ ಎಚ್.ಎಸ್. ಹರೀಶ್, ರಾಜ್ಯ ಸಮಿತಿಯ ಪ್ರತಿನಿಧಿ ವಿಶ್ವನಾಥ್ ಬೆಳಗಲ್‌ಮಠ, ರಾಜ್ಯ ಘಟಕದ ಜಂಟಿ ಕಾರ್ಯದರ್ಶಿಗಳಾದ ಬಿ. ದಿನೇಶ್ ಗೌಡಗೇರೆ, ಸಿ. ರಂಗನಾಥ್, ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಎಲ್ ಶಿವಶಂಕರ್ ಇದ್ದರು.


## ಜ.2 ಕಸಾಪದಿಂದ ಗೊರುಚಗೆ ಅಭಿನಂದನಾ ಸಮಾರಂಭ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.30-ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ವತಿಯಿಂದ ನಾಡೋಜ ಗೊ. ರು.ಚನ್ನಬಸಪ್ಪ ಅವರಿಗೆ ಜ.2 ರಂದು ಅಭಿನಂದನಾ ಸಮಾರಂಭ ಹಾಗೂ ಆರ್.ಸಿ.ಚಿತ್ತವಾಡಗಿ ಅವರ 'ನೆಲಬಣ್ಣದ ಹಕ್ಕಿ' ಕೃತಿ ಲೋಕಾರ್ಪಣೆ ಕಾರ್ಯಕ್ರಮ ಜರುಗಲಿದೆ.

ಗುರುವಾರ ಮುಂಜಾನೆ 10-30 ಗಂಟೆಗೆ ನವನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಭವನದಲ್ಲಿ ನಡೆಯುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಚಿತ್ತರಗಿ ವಿಜಯ ಮಹಾಂತೇಶ ಸಂಸ್ಥಾನಮಠದ ಪೂಜ್ಯ ಡಾ.ಗುರುಮಹಾಂತ ಸ್ವಾಮೀಜಿ ವಹಿಸುವರು.

ಡಾ.ಗೊ.ರು.ಚನ್ನಬಸಪ್ಪ ಕೃತಿ ಲೋಕಾರ್ಪಣೆ ಮಾಡಲಿದ್ದು, ಕಾರ್ಯಕ್ರಮವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಉದ್ಘಾಟಿಸುವರು.ಡಾ.ಬಿ.ಜಿ.ಹಿರೇಮಠ ಅಭಿನಂದನ ನುಡಿ ಹೇಳಲಿದ್ದು, ಮುಖ್ಯ ಅತಿಥಿಗಳಾಗಿ ಜಿ.ಎನ್.ಪಾಟೀಲ,



ಶಾಂತಗೌಡ ಪಾಟೀಲ, ಹನಮಂತ ಮಾವಿನಮರದ, ಎ.ಎಸ್.ಪಾವಟೆ ಆಗಮಿಸುವರು.

ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ ಅವರನ್ನು ಸನ್ಮಾನಿಸಲಾಗುವುದು. ಸಾಹಿತಿ ಡಾ.ಸಿ.ಎಂ.ಜೋಶಿ ಕೃತಿ ಪರಿಚಯಿಸುವರು. ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸಲಿದ್ದು, ಸಾಹಿತಿ ಆರ್.ಸಿ.ಚಿತ್ತವಾಡಗಿ ಉಪಸ್ಥಿತರಿರುವರು ಎಂದು ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ "ವಾತ್ಸಲ್ಯ" ಮನೆ ಹಸ್ತಾಂತರ



ಕಲಬುರಗಿ:ಡಿ.30: ಜಿಲ್ಲೆಯ ಕಮಲಾಪುರ ಯೋಜನಾ ಕಛೇರಿ ವ್ಯಾಪ್ತಿಯ ರಾಮತೀರ್ಥ ವಲಯದ ಕೆರೆ ಬೋಸಗ ಗ್ರಾಮದ ಮಾಶಾಸನ ಫಲಾನುಭವಿಯಾದ ನಾಗಮ್ಮ ತೆಲಗಾಣಿ ಇವರಿಗೆ ಪರಮ ಪೂಜ್ಯ ಡಾ! ಡಿ ವೀರೇಂದ್ರ ಹೆಗ್ಗಡೆಯವರ ಮತ್ತು ಜ್ಞಾನವಿಕಾಸ ಕಾರ್ಯಕ್ರಮದ ಅಧ್ಯಕ್ಷರಾದ ಡಾ! ಹೇಮಾವತಿ ವೀ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ವಾತ್ಸಲ್ಯ ಮನೆಯನ್ನು ಹಸ್ತಾಂತರಿಸಲಾಯಿತು.

ಜ್ಞಾನ ವಿಕಾಸ ಕಾರ್ಯಕ್ರಮ ವಾತ್ಸಲ್ಯ ಕಾರ್ಯಕ್ರಮದಡಿಯಲ್ಲಿ ತಾಲೂಕಿನ 94 ಜನ ಫಲಾನುಭವಿಗಳಿಗೆ ವಾತ್ಸಲ್ಯ ಮಿಕ್ಸ್ ವಿತರಣೆ ಅವರಿಗೆ ತಿಂಗಳಿಗೆ 1000 ರೂ ದಂತೆ ಮಾಶಾಸನ ನೀಡುತ್ತಿದ್ದು 94 ಜನ ಫಲಾನುಭವಿಗಳಿಗೆ ಸೀರೆ ,ಚಾಪೆ , ದಿಂಬು,ಹೊದಿಕೆ, ಪಾತ್ರೆ ವಾತ್ಸಲ್ಯ ಕಿಟ್ಟ ವಿತರಣೆ ಮಾಡಲಾಗಿದೆ ಸೂರು ಇಲ್ಲದವರಿಗೆ ಮಾತೋಶ್ರೀ ಅಮ್ಮನವರ ಆಶಯದಂತೆ ವಾತ್ಸಲ್ಯ ಮನೆ ರಚನೆ ಮಾಡಿ ಕೊಡಲಾಗುತ್ತಿದೆ ಎಂದು ಪ್ರಾಸ್ತಾವಿಕವಾಗಿ ತಾಲೂಕಿನ ಕ್ಷೇತ್ರ ಯೋಜನಾಧಿಕಾರಿ ಕಲ್ಲನಗೌಡ ಪಾಟೀಲ್ ಶಿರಕೋಳ ಅವರು ಮಾತನಾಡಿದರು

ಮನೆ ಹಸ್ತಾಂತರ ಮಾಡಿ ಕಲಬುರಗಿ ಗ್ರಾಮೀಣ ಸರ್ಕಲ್ ಇನ್ಸ್ಪೆಕ್ಟರ ಸಂತೋಷ್ ತಟ್ಟೆಪಳ್ಳಿ ಅವರು ಧರ್ಮಸ್ಥಳ ಕ್ಷೇತ್ರ ಅನೇಕ ಸಾಮಾಜಿಕ ಕಾರ್ಯಕ್ರಮ ಮಾಡುತ್ತಿದೆ. ಸಮಾಜದ ಬಗ್ಗೆ ಅಪಾರ ಕಾಳಜಿ ವಹಿಸಿ ಧರ್ಮಸ್ಥಳದ ಧರ್ಮಾಧಿಕಾರಿಗಳು ಮಾಡುವ ಕಾರ್ಯ ನಮ್ಮೆಲ್ಲರಿಗೂ ಪ್ರೇರಣೆ ಮತ್ತು ಮಾದರಿಯಾಗಿದೆ ಸೂರು ಇಲ್ಲದವರಿಗೆ ಮನೆ ನೀಡುತ್ತಿರುವುದು ಬಹಳ ಸಂತೋಷ. ಇಂತಹ ಕಾರ್ಯಗಳು ನಿರಂತರವಾಗಿ ಸಾಗಲಿ ಎಂದು ಶುಭ ಹಾರೈಸಿದರು.

ಕಲಬುರ್ಗಿ ಪ್ರಾದೇಶಿಕ ಜ್ಞಾನ ವಿಕಾಸ ವಿಭಾಗದ ಯೋಜನಾಧಿಕಾರಿಗಳಾದ ಶ್ರೀಮತಿ ಶಕುಂತಲಾ ಇವರು ಮಾತನಾಡಿ ಮಾತೋಶ್ರೀ ಹೇಮಾವತಿ ವಿ ಹೆಗ್ಗಡೆ ಅಮ್ಮನವರ ಮಾರ್ಗದರ್ಶನದಲ್ಲಿ ಅನೇಕ ಮಹಿಳೆಯರಿಗೆ ಬದುಕಿನಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಲಾಗುತ್ತಿದೆ. ನೊಂದ ಮಹಿಳೆಯವರಿಗೆ ಸಾಂತ್ವನ ನೀಡಲಾಗುತ್ತಿದೆ. ವಾತ್ಸಲ್ಯ ಮನೆ ನಿರ್ಮಿಸಿ ನಾಗಮ್ಮ ಇವರಿಗೆ ಮನೆ ಹಸ್ತಾಂತರ ಮಾಡುತ್ತಿದ್ದು ಇದರ ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷರಾದ ಅನಿಲ ಕುಮಾರ ಡಾಂಗೆ ರವಿ ನಿಲೂರ , ಸ್ಥಳೀಯ ಗಣ್ಯರು, ವಲಯದ ಮೇಲ್ವಿಚಾಕರಾದ ರಾಘವೇಂದ್ರ ಜ್ಞಾನವಿಕಾಸ ಸಮನ್ವಯಾಧಿಕಾರಿ ಗೀತಾಂಜಲಿ, ಒಕ್ಕೂಟದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಗುಂಪಿನ ಸದಸ್ಯರು ಭಾಗವಹಿಸಿದ್ದರು.

# ಬಾವಗಿಯಲ್ಲಿ ಎಳ್ಳಮಾವಾಸ್ಯೆ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಡಿ.30: ತಾಲೂಕಿನ ಬಾವಗಿ ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರಾದ ಸಂಗಮೇಶ ಹಜ್ಜರಗಿ ಜಮೀನಿನಲ್ಲಿ ಸೋಮುವಾರ ಎಳ್ಳಮಾವಾಸ್ಯೆ ಹಬ್ಬ ಆಚರಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಚರಿಸಲಾಗುವ ಎಳ್ಳುಅಮಾವಾಸ್ಯೆ ಹಬ್ಬಕ್ಕೆ ವಿಶೇಷ ಮಹತ್ವವಿದ್ದು, ನೈವೇದ್ಯವನ್ನು ಬೆಳೆಯಲ್ಲಿ ಎರಚಿ ಚರಗ ಭೂಮಿ ತಾಯಿಗೆ ಉಣಬಡಿಸಿ ಸಡಗರಿಂದ ಆಚರಿಸಲಾಯಿತು.

ನಂತರ ಬಂಧು ಬಳಗ ಸ್ನೇಹಿತರು ಸೇರಿ ವಿಶೇಷವಾದ ಅಡುಗೆ ಭಜ್ಜಿ, ಜೋಳದ ರೊಟ್ಟಿ, ಕಡುಬು, ಅಂಬಲಿ, ಸವಿಯುವ ಮೂಲಕ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಗುರು ಭದ್ರೇಶ್ವರ ಸಂಸ್ಥಾನದ ಶಾಂತಕುಮಾರ ಸ್ವಾಮಿ, ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣದ ಅಧ್ಯಕ್ಷರಾದ ಲೋಕೇಶ ಕನಶೆಟ್ಟಿ, ಮಹೆಶ, ವಿಶ್ವ ಸೇರಿ ಅನೇಕರು ಉಪಸ್ಥಿತರಿದ್ದರು.

# ಕೆರೆಯಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ಮಲ್ಲಮ್ಮ ನುಡಿ ವಾರ್ತೆ

ವಿಜಯಪುರ,ಡಿ.28: ಈಜಲು ಹೋದ ವಿದ್ಯಾರ್ಥಿಯೊಬ್ಬ ನೀರು ಪಾಲಾದ ಘಟನೆ ನಗರದ ಬೇಗಂ ತಾಲಾಬ್ ನಲ್ಲಿ ಶುಕ್ರವಾರ ನಡೆದಿದೆ.

ಇಲ್ಲಿನ ಹವೇಲಿ ನಿವಾಸಿ ಅನಿರುದ್ದ ಕಲ್ಯಾಣಕುಮಾರ ಸಾಮ್ರಾಣಿ (20) ಕೆರೆಯಲ್ಲಿ ನಾಪತ್ತೆಯಾದ ಯುವಕ.

ಕಾಲೇಜ್ ರಜೆ ಹಿನ್ನೆಲೆ ಅನಿರುದ್ದ ಸಾಮ್ರಾಣಿ, ತನ್ನ ಸಹೋದರ ಅನಿಕೇತ ಸಾಮ್ರಾಣಿ ಹಾಗೂ ಇನ್ನಿಬ್ಬರು ಗೆಳೆಯರೊಂದಿಗೆ ಬೇಗಂ ತಾಲಾಬ್ ಕಡೆ ಬಂದಿದ್ದಾನೆ. ಈ ವೇಳೆ ಬೇಗಂ ತಾಲಾಬ್ ನಲ್ಲಿ ಈಜಲು ಇಳಿದಿದ್ದಾನೆ. ಗೆಳೆಯರು ಹಾಗೂ ಸಹೋದರ ಬೇಡ ಎಂದರೂ ನೀರಿಗೆ ಇಳಿದಿದ್ದು, ನೀರಿನಲ್ಲಿ ಮುಳುಗಿ ಸಾವನಪ್ಪಿದ್ದಾನೆ.

ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿಗಳು ಆಗಮಿಸಿ, ಬೋಟ್ ಮೂಲಕ ನೀರಿನಲ್ಲಿ ಅನಿರುದ್ದನಿಗಾಗಿ ಹುಡುಕಾಟ ನಡೆಸಿದ್ದಾರೆ. ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು

ಜಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗೆ ಶಿಕ್ಷಣವೆ ಅಸ್ತ್ರ, ಕಾನೂನು ನೆ ಬ್ರಹ್ಮಾಸ್ತ್ರ : ನ್ಯಾಯಾಧೀಶ ಮರಿಯಪ್ಪ.



(ಎಂ.ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಮಹಿಳೆಯರ ಮೇಲೆ ಮೇಲಿಂದ ಮೇಲೆ ನಡೆಯುವ ಅತ್ಯಾಚಾರ, ಕಿರುಕುಳ ಹೀಗೆ ಹಲವಾರು ರೀತಿಯಾಗಿ ಗುಟ್ಟಾಗಿ ಸಮಾಜದಲ್ಲಿ ಅಡೆತಡೆ ಉಂಟಾಗುತ್ತಿದ್ದವೆ, ಆದ್ದರಿಂದ ಶಿಕ್ಷಣದ ಮೂಲಕ ಕಾನೂನು ಪ್ರಜ್ಞಾ, ಶಿಕ್ಷಣ ಪಡೆದುಕೊಂಡು ಸಮಾಜದಲ್ಲಿ ಜೀವಿಸಲು ಮಹಿಳೆಯರಿಗೆ ಶಿಕ್ಷಣವೇ ಅಸ್ತ್ರವನ್ನಾಗಿ ಉಪಯೋಗಿಕೊಳ್ಳಬೇಕು ಎಂದು

ಪಟ್ಟಣದ ಸಮೀಪದಲ್ಲಿರುವ ಬಳಿಚಕ್ರ ಗ್ರಾಮದಲ್ಲಿ ನಡೆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಯಾದಗಿರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ಘಟಕ ಮಕ್ಕಳ ಸಹಾಯವಾಣಿ 1098/112, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸ್ಥಳಿಯ ಸಂಘ ಸಂಸ್ಥೆಗಳ ಮತ್ತು ಸಮನ್ವಯ ಸೇವಾ ಸಂಸ್ಥೆ (ರಿ) ಸಹಯೋಗದೊಂದಿಗೆ ಮಹಿಳೆಯರ ರಕ್ಷಣೆ ಮತ್ತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟನೆ ನೆರವೇರಿಸಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮರಿಯಪ್ಪ ರವರು ಹೇಳಿದರು.

ಮಹಿಳೆಯರಿಗೆ ಜಾಗೃತಿ ಮೂಡಿಸುವ ಮತ್ತು ಹೆಣ್ಣು ತನ್ನನ್ನು ತಾನು ಹೇಗೆ ರಕ್ಷಣೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಕಾಳಜಿಯನ್ನು ವಹಿಸುವ ಸಮನ್ವಯ ಸೇವಾ ಸಂಸ್ಥೆ ಕಾರ್ಯ ಶ್ಲಾಘನೀಯವಾಗಿದೆ.

ಅಲ್ಲದೇ ಅನೇಕ ಖಿ. ಗಿ , ಮಾಧ್ಯಮಗಳಲ್ಲಿ ಪ್ರಸಾರವಾಗುವ ಜಾಹೀರಾತಿಗಾಗಿ ಮಹಿಳೆಯನ್ನು ಉಪಯೋಗಿಸಿಕೊಳ್ಳುವವಸ್ತುವನ್ನಾಗಿ ಮಾರ್ಪಡಿಸಿದ್ದಾರೆ, ದೇಶದಲ್ಲಿ ಬೆಳೆಗೆ ಒಂದು ಉತ್ತಮವಾದ ಘನತೆ ಗೌರವ ಕೇವಲ ನಾಮಕವಾಸ್ತವಾಗಿದೆ, ರಾಷ್ಟ್ರದಲ್ಲಿ ಭಾರತಾಂಬೆ, ಕನ್ನಡಾಂಬೆ ಎಂದು ಮಹಿಳೆರನ್ನು ತಾಯಿಗೆ ಹೋಲಿಸಿ ಮಾಡಿ ಆ ತಾಯಿಯನ್ನೇ ಅತ್ಯಾಚಾರ ಮಾಡುವ ಕಾಮುಕರಿದ್ದಾರೆ, ಕಬ್ಬಿಣ ಕಾನೂನು ಇದ್ದರೂ ತಪ್ಪಿಸಿಕೊಳ್ಳುವ ಬಲವಾದ ಸಾಮರ್ಥ್ಯವನ್ನು ಹೊಂದಿರುವ ಪುರುಷ ಪ್ರಧಾನ ಸಮಾಜವಾಗಿದೆ, ಈ ನಿಟ್ಟಿನಲ್ಲಿ ಮಹಿಳೆಯರ ಪರವಾಗಿ ಕಾನೂನುಗಳು ಬಂದಿವೆ ಬದಲಾವಣೆಗೊಂಡು ಪ್ರತಿಯೊಬ್ಬ ಮಳೆ ಶಿಕ್ಷಣವನ್ನು ಪಡೆದು ಎಲ್ಲಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ, ನಂತರ ಪ್ರೌಢಶಾಲಾ ಮಕ್ಕಳೊಂದಿಗೆ ಬೆರೆತು ಮಾತನಾಡಿ ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಯಾದ ಪ್ರೇಮ ಮೂರ್ತಿ ರವರು ಮಕ್ಕಳಲ್ಲಿ ಮೊಟ್ಟ ಮೊದಲಿಗೆ ಆತ್ಮವಿಶ್ವಾಸ ಬಹಳ ಮುಖ್ಯ, ಏಕೆಂದರೆ ಚಂದಗೆ ಬಂದ ಮಗು ಪಠ್ಯ ಬೋಧನೆ, ತಿಳುವಳಿಕೆ, ಜ್ಞಾನ ಸಂಗ್ರಹವನ್ನು ಒಂದು ದಿನದಲ್ಲಿ ಎಷ್ಟರ ಮಟ್ಟಿಗೆ ಪಡೆದುಕೊಂಡಿದ್ದೇನೆ ಆದ್ದ-ರಿಂದ ನನ್ನ ಜೀವನಕ್ಕೆ ಯಾವ ರೀತಿ ಪರಿಣಾಮ ಬೀರಿದೆ, ಶಿಕ್ಷಣವನ್ನು ಪಡೆಯುವ ದೃಢವಾದ ಸಂಕಲ್ಪ ನಿಮ್ಮದಾಗಲಿ, ಭಾರತದಲ್ಲಿ ಹಲವಾರು ರೀತಿಯ ಆಚಾರ ವಿಚಾರ ಪದ್ಧತಿಗಳು ಸಂಸ್ಕೃತಿಗಳು ಹೊಂದಿದೆ ಅವುಗಳ ವಿಚಾರಿಕತೆಯನ್ನು ತಿಳಿದು ವಿಚಾರವಂತರಾಗಿ ಸಮಾಜದಲ್ಲಿ ಅರಿತು ಬದುಕಬೇಕು, ನಮ್ಮ ಕುಟುಂಬದಲ್ಲಿ ಸಾಂಪ್ರದಾಯ ಪದ್ಧತಿಗಳು ನೆಲೆಯುವುದರಿಂದ ಮಹಿಳೆಯರ ಮೇಲೆ, ಮಕ್ಕಳ ಮೇಲೆ ದೌರ್ಜನ್ಯ ಕ್ಕೆ ಒಳ ಪಡುವಂತದ್ದು, ಇದನ್ನು ತಡೆಗಟ್ಟುಬೇಕು ಅಂದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ, ಶಿಕ್ಷಣವನ್ನು ಪ್ರತಿಯೊಬ್ಬರು ಪಡೆಯಬೇಕು, ಯಾರು ಶಿಕ್ಷಣದಿಂದ ವಂಚಿತರಾಗಬಾರದು, ತಮ್ಮ ಜೀವನವನ್ನು ಶಿಕ್ಷಣದಿಂದ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ವೇದಿಕೆ ಮೇಲೆ ಉಪಸ್ಥಿತರಿದ್ದ ಜಿಲ್ಲಾ ಬಾಲಕಾರ್ಮಿಕ ನಿರ್ದೇಶಕ ರಿಯಾಜ್ ಪಟೇಲ್ ವರ್ಕ್ ನಳ್ಳಿ ಪ್ರಾಸ್ತವಿಕ ನುಡಿದರು, ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಅನ್ನಪೂರ್ಣ ಬಂಡಾರ್ಕರ್ ಮಾತನಾಡಿದರು, ಮಹಿಳೆಯರ ರಕ್ಷಣಾ ಮತ್ತು ಕಾನೂನಿನ ಅರಿವಿನ ಕಾರ್ಯಕ್ರಮದ ಉಪನ್ಯಾಸವನ್ನು ಶ್ರೀಮತಿ ಆಶಾ ಬೇಗಂ ನೀಡಿದರು, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಚಂದ್ರಶೇಖರ್ ಮಾಲಿಪಾಟೀಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು, ವಕೀಲ ಸಂಘದ ಅಧ್ಯಕ್ಷರಾದ ಸಿ ಎಸ್ ಮಾಲಿ ಪಾಟೀಲ್, ಯಾದಗಿರಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಹಾದೇವ ಬಾಬಳಗಿ, ಇಅಔ ಮಲ್ಲಿಕಾರ್ಜುನ ಕಾವಲಿ, ಸೈದಾಪುರ ಛಿ ಅಲ್ಲಾ ಬಾಷಾ, ಮಾನಪ್ಪ ಉಪನ್ಯಾಸಕ, ಬಳಿಚಕ್ರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಶಂಕರ ನಾಯಕ, ಗ್ರಾಮ ಪಂಚಾಯತಿ ಅಧ್ಯಕ್ಷ ವೀರಭದ್ರಪ್ಪ, ಖಆಒಅ ಅಧ್ಯಕ್ಷ ಸಿದ್ರಾಮಪ್ಪ, ಗೋಕುಲ್ ಹುಸೇನ್ ಬಳಿಚಕ್ರ, ಮಾನವ ಹಕ್ಕುಗಳ ಹೋರಾಟ ಸಮಿತಿಯ ಜಿಲ್ಲಾ ಅಧ್ಯಕ್ಷ ಕುಮಾರ ಟಿ.ಎಂ.ಬಿ. , ಸಮನ್ವಯ ಸೇವಾ ಸಂಸ್ಥೆ ಅಧ್ಯಕ್ಷ ದೇವಿಂದ್ರಪ್ಪ ಧೋತ್ರ, ಚಂದ್ರಶೇಖರ್, ಬಸನ ಗೌಡ, ಬನ್ನಪ್ಪ, ಭೀಮಾಶಂಕರ ಗಣಪುರ, ನಾಗೇಶ ಧೋತ್ರ ಮುಂತದವರು ಇದ್ದರು. ಕಾರ್ಯಕ್ರಮವನ್ನು ತಾಯಪ್ಪ ಲಿಂಗೇರಿ ನಿರೂಪಿಸಿದರು ದೇವಿಂದ್ರಪ್ಪ ಧೋತ್ರ ವಂದಿಸಿದರು.

# ಪುತ್ಥಳಿ ಅನಾವರಣ ಕಾರ್ಯಕ್ರಮ ಯಶಸ್ವಿಗೊಳಿಸಿ:ಮಲ್ಲೋರ



ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ:ಡಿ.30: ಭಗವಾನ್ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ವಾಲ್ಮೀಕಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಂದು ಸೈದಾಪುರ ವಾಲ್ಮೀಕಿ ಸಮಾಜದ ವಲಯ ಅಧ್ಯಕ್ಷ ರವೀಂದ್ರನಾಥ ಮಲ್ಲೋರ್ ಕೂಡ್ಲೂರು ತಿಳಿಸಿದರು.

ಪಟ್ಟಣದಲ್ಲಿ ವಾಲ್ಮೀಕಿ ಸಮಾಜದಿಂದ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮದ ಭಿತ್ತಿ ಪತ್ರಗಳನ್ನು ಬಿಡುಗಡೆ ಮಾಡಿ ಮಾತನಾಡಿದರು. ಯಾದಗಿರಿ –ರಾಯಚೂರು ರಾಷ್ಟ್ರೀಯ ಹೆದ್ದಾರಿ 150ರ ಮಾರ್ಗದಲ್ಲಿ ಬರುವ ಸೈದಾಪುರ ಪಟ್ಟಣದ ಕರಿಬೆಟ್ಟ ವೃತ್ತದಲ್ಲಿ ನಿರ್ಮಿಸಿದ ನೂತನ ಭಗವಾನ್ ಶ್ರೀ ಮಹರ್ಷಿ ವಾಲ್ಮೀಕಿಯ ಪುತ್ಥಳಿಯ ಅನಾವರಣವನ್ನು ಜನವರಿ 6 ರಂದು ಬೆಳಗ್ಗೆ 11:30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಸಚಿವ, ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಜಗದ್ಗುರುಗಳಾದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮಿ, ಕರ್ನಾಟಕ ಸರ್ಕಾರ ಸಣ್ಣ ಕೈಗಾರಿಕಾ ಸಚಿವ, ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪುರ, ಮಾಜಿ ಲೋಕಸಭಾ ಸದಸ್ಯ ವಿ ಎಸ್ ಉಗ್ರಪ್ಪ, ಗುರುಮಠಕಲ್ ಶಾಸಕರಾದ ಶರಣಗೌಡ ಕಂದಕೂರ, ಲೋಕಸಭಾ ಸದಸ್ಯ ಜಿ. ಕುಮಾರ್ ನಾಯಕ್, ಲೋಕಸಭಾ ಸದಸ್ಯ

ಮಲ್ಲಮ್ಮ ನುಡಿ ಕನ್ನಡ ದಿನ ಪತ್ರಿಕೆಯಲ್ಲಿ
ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ:
09964206170

# ಪೊಲೀಸ್ ಠಾಣೆಯಲ್ಲೇ, ಕೊರಳಪಟ್ಟಿ ಹಿಡಿದ ಪೇದೆಗೆ ಕಪಾಳ ಮೋಕ್ಷ:



ಮಲ್ಲಮ್ಮ ನುಡಿ ವಾರ್ತೆ

ಮಂಡ್ಯ: ಕೊರಳಪಟ್ಟಿ ಹಿಡಿದು ಹಲ್ಲೆ ಮಾಡಿದ ಪೊಲೀಸ್ ಪೇದೆಗೆ ವ್ಯಕ್ತಿಯೋರ್ವ ಕಾಪಳ ಮೋಕ್ಷ ಮಾಡಿರುವ ಘಟನೆ ಮಂಡ್ಯದಲ್ಲಿ ನಡೆದಿದ್ದು, ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದೆ.

ಮಂಡ್ಯ ಜಿಲ್ಲೆ ಪಾಂಡವಪುರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶನಿವಾರ ನಡೆದಿದ್ದು, ತನ್ನ ಕಪಾಳಕ್ಕೆ ಹೊಡೆದ ಪೊಲೀಸ್ ಕಾನ್ಸ್‌ಟೇಬಲ್‌ಗೆ ವ್ಯಕ್ತಿಯೋರ್ವ ಪೊಲೀಸ್ ಠಾಣೆಯಲ್ಲೇ ಕೊರಳಪಟ್ಟಿ ಹಿಡಿದು ಕಪಾಳಮೋಕ್ಷ ಮಾಡಿದ್ದಾನೆ.

ಪೊಲೀಸ್ ಮೂಲಗಳ ಪ್ರಕಾರ 'ಪಟ್ಟಣದ ಹಿರೋಡೆ ಬೀದಿಯ ಪಿ.ಎಸ್.ಜಗದೀಶ್ ಅವರ ಪುತ್ರ ಸಾಗರ್ (30) ಎಂಬಾತ ಪೊಲೀಸ್ ಕಾನ್ಸ್‌ಟೇಬಲ್ ಮೇಲೆ ಹಲ್ಲೆ ನಡೆಸಿದವ ಎನ್ನಲಾಗಿದೆ. ಪೊಲೀಸ್ ಕಾನ್ಸ್‌ಟೇಬಲ್ ಅಭಿಷೇಕ್ ಮೇಲೆ ಹಲ್ಲೆ ಮಾಡಿದ ಸಾಗರ್‌ನನ್ನು ಬಂಧಿಸಿ ಪ್ರಸ್ತುತ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪೊಲೀಸರ ಮೇಲೆ ಹಲ್ಲೆ ಮಾಡಿದ ಆರೋಪಿ

ಜಮೀನಿನ ವಿಚಾರವಾಗಿ ನಡೆದಿದ್ದ ಜಗಳದ ಸಂಬಂಧ ಲಕ್ಷ್ಮೀನಾರಾಯಣ ಎಂಬುವವರು ಸಾಗರ್ ವಿರುದ್ಧ ದೂರು ದಾಖಲಿಸಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಇಬ್ಬರನ್ನೂ ಶನಿವಾರ ಪೊಲೀಸ್ ಠಾಣೆಗೆ ಕರೆಯಿಸಲಾಗಿತ್ತು. ಠಾಣೆಯಲ್ಲಿ ಮತ್ತೆ ಸಾಗರ್, ಲಕ್ಷ್ಮೀನಾರಾಯಣ್ ನಡುವೆ ಮಾತಿನ ಚಕಮಕಿ ನಡೆದು ಕೈಕೈ ಮಿಲಾಯಿಸುವ ಹಂತಕ್ಕೆ ಹೋಗಿದೆ.

ಈ ವೇಳೆ ಮಧ್ಯ ಪ್ರವೇಶಿಸಿದ ಕಾನ್ಸ್‌ಟೇಬಲ್ ಅಭಿಷೇಕ್, ಸಾಗರ್‌ನನ್ನು ಸಮಾಧಾನಪಡಿಸಲು ಯತ್ನಿಸಿದ್ದಾರೆ. ಈ ವೇಳೆ ಪೇದೆ ಅಭಿಷೇಕ್ ಸಾಗರ್‌ಗೆ ಒಂದೇಟು ಹೊಡೆದಿದ್ದಾರೆ. ಇದರಿಂದ ಕೋಪಗೊಂಡ ಸಾಗರ್, ಪೊಲೀಸ್ ಕಾನ್ಸ್‌ಟೇಬಲ್ ಅಭಿಷೇಕ್ ಅವರ ಕೊರಳಪಟ್ಟಿ ಹಿಡಿದು ಕಪಾಳಮೋಕ್ಷ ಮಾಡಿದ್ದಾನೆ.

ಕರ್ತವ್ಯದಲ್ಲೇ ಇದ್ದ ಪೊಲೀಸರುಗಳಾದ ಲಕ್ಷ್ಮೀ ಮತ್ತು ಆನಂದ್ ಮಧ್ಯ ಪ್ರವೇಶಿಸಿ ಜಗಳ ಬಿಡಿಸಲು ಮುಂದಾಗಿದ್ದಾರೆ. ಆದರೆ ಸಾಗರ್, ನನ್ನ ವಿಚಾರಕ್ಕೆ ಬರಬೇಡಿ ಎಂದು ಲಕ್ಷ್ಮೀ ಮತ್ತು ಆನಂದ ಅವರಿಗೂ ಧಮ್ಕಿ ಹಾಕಿ, ಕುಡಿಯುವ ನೀರಿನ ಕ್ಯಾನ್ ಎತ್ತಿ ಬಿಸಾಡಿ ದಾಂಧಲೆ ಮಾಡಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ಕಾನ್ಸ್‌ಟೇಬಲ್ ಅಭಿಷೇಕ್ ನೀಡಿದ ದೂರಿನ ಮೇಲೆ ಪೊಲೀಸರು ಆರೋಪಿ ಸಾಗರ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

## ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣ:

# ಸಂತ್ರಸ್ತನ ಕುಟುಂಬಕ್ಕೆ 10 ಲಕ್ಷ ರೂ ಪರಿಹಾರ ಘೋಷಿಸಿದ ಸಚಿವ ಈಶ್ವರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರು ವಿರುದ್ಧ ಗಂಭೀರ ಆರೋಪಗಳನ್ನು ಮಾಡಿ ಬೀದರ್‌ನ 26 ವರ್ಷದ ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತನ ನಿವಾಸಕ್ಕೆ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭೇಟಿ ನೀಡಿದರು. ಮೃತನ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ.

ಕುಟುಂಬ ಸದಸ್ಯರೊಂದಿಗೆ ಮಾತುಕತೆ ನಡೆಸಿದ ಸಚಿವರು, ಖಂಡ್ರೆ ಸಾಂತ್ವನ ಹೇಳಿ ಸಾವಿಗೆ ಕಾರಣರಾದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಸರ್ಕಾರವು ನ್ಯಾಯದ ಪರವಾಗಿದೆ ಮತ್ತು ಆರೋಪಿಗಳಿಗೆ ತಕ್ಕ ಶಿಕ್ಷೆಯಾಗುತ್ತದೆ. ಸರ್ಕಾರ ನಿಮ್ಮೊಂದಿಗಿದೆ ಎಂದು ಭರವಸೆ ನೀಡಿದರು. ವೈಯಕ್ತಿಕ ಹಾಗೂ ಸರ್ಕಾರದಿಂದ ಜಂಟಿಯಾಗಿ 10 ಲಕ್ಷ ರೂ. ಪರಿಹಾರ ನೀಡುವುದಾಗಿ ತಿಳಿಸಿದರು. ಅಲ್ಲದೆ, ಮೃತನ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ಕೊಡಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸುವುದಾಗಿ ಹೇಳಿದರು.

ಪೊಲೀಸರು ಪ್ರಕರಣ ದಾಖಲಿಸಲು ನಿರಾಕರಿಸಿದ್ದಾರೆ ಎಂದು ನನಗೆ ದೂರು ನೀಡಿದ ಕುಟುಂಬ ಸದಸ್ಯರೊಂದಿಗೆ ನಾನು ಮಾತನಾಡಿದ್ದೇನೆ. ನಾನು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಕೆಲವು ಪೊಲೀಸರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಸಚಿನ್ ಆತ್ಮಹತ್ಯೆ ಪ್ರಕರಣವನ್ನು ಸರ್ಕಾರಿ ರೈಲ್ವೆ ಪೊಲೀಸರು (ಜಿಆರ್‌ಪಿ) ತನಿಖೆ ನಡೆಸುತ್ತಿದ್ದಾರೆ ಮತ್ತು ತನಿಖೆಯನ್ನು ಅಪರಾಧ ತನಿಖಾ ಇಲಾಖೆಗೆ (ಸಿಐಡಿ) ಹಸ್ತಾಂತರಿಸುವ ಬಗ್ಗೆಯೂ ಸರ್ಕಾರ ಪರಿಗಣಿಸಲಿದೆ ಎಂದು ಹೇಳಿದರು. ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಈ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು. ದುಃಖದಲ್ಲಿರುವ ಕುಟುಂಬಸ್ಥರಿಗೆ ಧೈರ್ಯ, ಸಾಂತ್ವನ ಹೇಳುವ ಅಗತ್ಯವಿದೆ. ನಾವು ಅವರೊಂದಿಗೆ ಇದ್ದೇವೆ ಎಂದರು.

ಅರಣ್ಯ ಸಚಿವ ಈಶ್ವರ್ ಖಂಡ್ರೆ

ಕಾಂಗ್ರೆಸ್ ಪಾಪದ ಕೊಡ ತುಂಬಿದೆ; ಪ್ರಿಯಾಂಕ್ ಖರ್ಗೆಯಿಂದ ರಿಪಬ್ಲಿಕ್ ಆಫ್ ಕಲಬುರಗಿ ಆಗಿದೆ: ಛಲವಾದಿ ನಾರಾಯಣಸ್ವಾಮಿ

ಪೊಲೀಸರ ವಿರುದ್ಧ ಆಕ್ರೋಶ

ಮೃತ ಗುತ್ತಿಗೆದಾರ ಸಚಿನ್ ಮನೆಗೆ ಈಶ್ವರ ಖಂಡ್ರೆ ಭೇಟಿ ನೀಡಿದಾಗ ಅವರ ಜೊತೆಯಲ್ಲಿದ್ದ ಪೊಲೀಸರ ವಿರುದ್ಧ ಸಚಿನ್ ಅವರ ಸಹೋದರಿಯರು ತೀವ್ರ ಆಕ್ರೋಶ ಹೊರಹಾಕಿದರು. ಸಚಿನ್ ಕಾಣೆಯಾಗಿರುವ ಬಗ್ಗೆ ದೂರು ಕೊಡಲು ಠಾಣೆಗೆ ಹೋದಾಗ ಪೊಲೀಸರು ಸ್ಪಂದಿಸಲಿಲ್ಲ. ದೂರು ಸ್ವೀಕರಿಸಿದ್ದರೆ, ಈ ಅನಾಹುತವನ್ನು ತಡೆಯಬಹುದಿತ್ತು. ಸಚಿನ್ ಸಾವಿಗೆ ಪೊಲೀಸರೇ ಕಾರಣ. ಈಗೇಕೆ ಪೊಲೀಸರು ಮನೆಗೆ ಬಂದಿದ್ದಾರೆ. ಅವರನ್ನು ಹೊರಗೆ ಕಳುಹಿಸಿ ಎಂದು ಸಚಿವರ ಸಮ್ಮುಖದಲ್ಲೇ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಡಿವೈಎಸ್‌ಪಿ ಜೆಎಸ್ ನ್ಯಾಮೆಗೌಡ ಸೇರಿದಂತೆ ಇತರ ಪೊಲೀಸರು ಮನೆಯಿಂದ ಹೊರನಡೆದರು. 26 ವರ್ಷದ ಗುತ್ತಿಗೆದಾರ ಸಚಿನ್ ಪಾಂಚಾಳ್ ಡಿಸೆಂಬರ್ 26ರಂದು ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ತಮ್ಮ ಸಾವಿಗೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ರಾಜು ಕಪನೂರ ಸೇರಿದಂತೆ ಇತರೆ 8 ಮಂದಿ ಕಾರಣ ಎಂದು ಡೆತ್‌ನೋಟ್‌ನಲ್ಲಿ ಆರೋಪಿಸಿದ್ದರು. ಈ ಸಂಬಂಧ ಬೀದರ್ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಚಿನ್ ಪಾಂಚಾಲ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಗುತ್ತಿಗೆ ಪಡೆದಿದ್ದರು.

# ಕೃಷಿ ಕಾಯಕ ಪವಿತ್ರವಾದದ್ದು ವೆಂಕಟೇಶ್ ಬೋನೇರ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ಭೂಮಿ ಮೇಲಿರುವ ಸಕಲ ಜೀವರಾಶಿಗಳಿಗೆ ಆಸರೆ ನೀಡಿರುವ ಮತ್ತು ರೈತರ ಆರಾಧ್ಯ ದೇವತೆ ಭೂಮಿ ತಾಯಿಗೆ ಎಳ್ಳ ಅಮಾವಾಸ್ಯೆ ದಿನದಂದು ವಿಶೇಷ ಪೂಜೆ ಸಲ್ಲಿಸಿ ಚೇರಗ ಚೆಲ್ಲುವ ಸಂಪ್ರದಾಯ ಅನಾದಿಕಾಲದಿಂದಲೂ ನಡೆದು ಬಂದಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಶಹಾಪುರ ತಾಲೂಕ ಅಧ್ಯಕ್ಷರಾದ ವೆಂಕಟೇಶ್ ಬೋನೇರ ಹೇಳಿದರು.

ಮಲ್ಲಮ್ಮ ನುಡಿ ವಾರ್ತೆ

ಮಲ್ಲಯ್ಯ ಸ್ವಾಮಿ ಇಟಗಿ ಅವರ ಹೊಲದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡುತಾ. ಇದು ರೈತರ ಪ್ರಮುಖ ಹಬ್ಬವಾಗಿದ್ದು ಒಕ್ಕಲುತನ ಅವಲಂಬಿಸಿರುವ ರೈತರು ಜಾತಿ ಭೇದವಿಲ್ಲದೆ ಹೊಲಗಳಿಗೆ ತೆರಳಿ ಪೂಜೆ ಸಲ್ಲಿಸಿ ಸಾಮೂಹಿಕ ಭೋಜನ ಸವಿಯುವ ಪ್ರತಿತಿಯಿದೆ ಎಂದರು. ಭೂಮಿತಾಯಿ ರೈತರ ಸಂಬಂಧ ತಾಯಿ ಮಕ್ಕಳ ಸಂಬಂಧವಾಗಿದೆ ಕೃಷಿಯ ಕಡೆಗಣನೆ ಮಾಡಬಾರದು ರೈತರಿಲ್ಲದ ಜಗತ್ತು ಇಲ್ಲ ಕೃಷಿ ಕಾಯಕ ಅತ್ಯಂತ ಪವಿತ್ರವಾದದ್ದು ರೈತರಿಲ್ಲದೆ ಜಗತ್ತು ಇಲ್ಲ ದೇಶಕ್ಕೆ ಅನ್ನ ನೀಡುವ ರೈತನನ್ನು ಪ್ರತಿಯೊಬ್ಬರು ಗೌರವಿಸಬೇಕು ಎಂದು ವೆಂಕಟೇಶ್ ಬೋನೇರ ಹೇಳಿದರು.

ಈ ಸಂದರ್ಭದಲ್ಲಿ, ಮೌನೇಶ್ ಹಳಿಸಗರ, ಶರಣು ಕಾಡುಮಗೇರಿ, ಮಲ್ಲಯ್ಯ ಸ್ವಾಮಿ ಇಟಗಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಪಡಿತರ ವಾಹನ ಪಲ್ಟಿ, ಮೃತರ ಕುಟುಂಬಕ್ಕೆ 50ಲಕ್ಷ ಪರಿಹಾರಕ್ಕೆ ಆಗ್ರಹ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಡಿ,30– ಜಿಲ್ಲೆಯ ಕುರುಗೋಡು ತಾಲೂಕಿನ ಮದಿರೆ ಕ್ರಾಸ್ ಬಳಿ ಅಕ್ರಮವಾಗಿ ಪಡಿತರ ಸಾಗಾಣೆ ಮಾಡುತ್ತಿದ್ದ ವಾಹನ ಪಲ್ಟಿಯಾಗಿ ಸಾವನ್ನಪ್ಪಿದವರ ಕುಟುಂಬಕ್ಕೆ ತಲಾ 50 ಲಕ್ಷ ರೂ ಪರಿಹಾರ ನೀಡಬೇಕೆಂದು ಜೆಡಿಎಸ್ ಒತ್ತಾಯಿಸಿದೆ.

ಈ ಕುರಿತು ಇಂದು ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಪಕ್ಷದ ಜಿಲ್ಲಾ ಅಧ್ಯಕ್ಷ ಮೀನಳ್ಳಿ ತಾಯಣ್ಣ ಪಡಿತರವನ್ನು ಅಕ್ರಮವಾಗಿ ಸಾಗಾಟ ಮಾಡುವಾಗ

ಬಾದನಹಟ್ಟಿ ರಂಗಪ್ಪ, ಕಲ್ಲಕಂಬ ಪರಮೇಶ್ ಸಾವನ್ನಪ್ಪಿದ್ದಾರೆ. ಇವರ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಜಿಲ್ಲೆಯಲ್ಲಿ ನಿರಂತರವಾಗಿ ಪಡಿತರ ಅಕ್ಕಿ ದಂಧೆ ನಡೆಸಲಾಗುತ್ತಿದೆ. ಈ ವಿಷಯದಲ್ಲಿ ಕುಂಟು ಮಂಜ ಎಂಬುವವರ ಕೊಲೆಯಾಯ್ತು, ಕೆಲ ದಿನಗಳ ಹಿಂದೆ ಬಳ್ಳಾರಿ ನಗರದ ಶರಬಯ್ಯ ಎಂಬುವವರ ಮೇಲೆ ಕೊಲೆಯತ್ನ ನಡೆದಿತ್ತು. ಕುರುಗೋಡಿನ ಎರ್ರಿಸ್ವಾಮಿ, ಉಮೇಶ್ ಎಂಬುವವರು ಅಕ್ರಮ ಪಡಿತರ ದಂಧೆ ನಡೆಸುವವರು ಇವರ ಮೇಲೆ ಈ ವರೆಗೆ ಪ್ರಕರಣ ದಾಖಲಾಗಿಲ್ಲ.

ಜಿಲ್ಲಾ ಉಸ್ತುವಾರಿ ಸಚಿವರು ಪ್ರಭಾವ ಬೀರಿ ಕೇಸನ್ನು ವಿಳಂಬ ಮಾಡಿಸಿದ್ದಾರೆಂದು ಆರೋಪಿಸಿದರು. ಈ ದಂಧೆ ಮಾಡುವ ಜನರ ಮೇಲೆ ಏಳೆಂಟು ಕೇಸುಗಳಾಗಿವೆ. ಆದರೂ ಅವರನ್ನೇಕೆ ರೌಡಿ ಶೀಟಿಗೆ ಸೇರಿಸಿಲ್ಲ. ಈ ಅಕ್ರಮ ದಂಧೆಗೆ ಆಹಾರ ಇಲಾಖೆಯ ಅಧಿಕಾರಿಗಳು ,ಇಲ್ಲಾ ಪೊಲೀಸರ ಸಹಕಾರವೂ ಇದೆ. ಕುರುಗೋಡಿನಲ್ಲಿ ಆಹಾರ ಇಲಾಖೆಯ ಇನ್ಸ್ಪೆಕ್ಟರ್ ಮಲ್ಲಿಕಾರ್ಜುನ ಸಹಕಾರದಿಂದಲೇ ಅಕ್ರಮ ಪಡಿತರ ಸಾಗಾಟ ನಡೆ–ಯುತ್ತಿದೆ ಅದಕ್ಕಾಗಿ ಈ ಪ್ರಕರಣದ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಬೇಕು ಎಂದರು.

ಪಡಿತರ ಕಾರ್ಡುದಾರ–ರಿಂದ 14 ರೂ ನಂತೆ ಖರೀದಿ ಮಾಡಲಾಗುತ್ತಿದೆ ಅದಕ್ಕಾಗಿ ಸ್ಟೋರ್ ಗಳಿಂದ ಅಕ್ಕಿ ತೆಗೆದುಕೊಂಡು ಮಾರುವವರ ಕಾರ್ಡು ರದ್ದು ಮಾಡಬೇಕು. ಈ ಭಾಗದಲ್ಲಿ ಭತ್ತ ಬೆಳೆಯುವುದರಿಂದ ಪಡಿತರ ಅಕ್ಕಿ ಮಾರಾಟವಾಗುತ್ತಿದೆ. ಅದಕ್ಕಾಗಿ ಅಕ್ಕಿ ಬದಲು, ರಾಗಿ, ಜೋಳ, ಬೇಳೆ, ಅಡುಗೆಎಣ್ಣೆ ಕೊಡಬೇಕು ಎಂದರು.

ಪಡಿತರ ಅಕ್ರಮ ಮಾರಾಟ ವಿಷಯದಲ್ಲಿ ಪಡಿತರ ವಿತರಕರೂ ತಪ್ಪು ಮಾಡಿರುವ ಕಾರಣ ಅಂತಹ 60 ಅಂಗಡಿ ಲೈಸೆನ್ಸ್ ಅಮಾನತು ಆಗಿವೆಂದರು. ಲಕ್ಷ್ಮಿಕಾಂತರೆಡ್ಡಿ ಮಾತನಾಡಿ, ಬೆಂಬಲ ಬೆಲೆಯಲ್ಲಿ ಜೋಳ ಖರೀದಿ ಮಾಡಿ ಕಳೆದ ವರ್ಷ ಆರು ತಿಂಗಳ ನಂತರ ಹಣ ಬಂದಿದೆ. ಈ ವರ್ಷ ಒಬ್ಬ ರೈತನಿಂದ ಕೇವಲ ಹತ್ತು ಕ್ವಿಂಟಲ್ ಖರೀದಿ ಮಾಡಲಿದೆಂದು ಹೇಳುತ್ತಿದ್ದಾರೆ. ಉಳಿದವನ್ನು ಎಲ್ಲಿ ಮಾರಬೇಕು ಎಂದು ಪ್ರಶ್ನಿಸಿದರು.

## ಗ್ರಾ,ಪಂ, ಪಿಡಿಓ ಕಂಪ್ಯೂಟರ್ ಆಪರೇಟರ್ ಕೈಚಳಕ, 8 ಲಕ್ಷ,ದ 67 ಸಾವಿರ ಖಾತ್ರಿ ಹಣ ದುರುಪಯೋಗ ಮರುಪಾವತಿ ಆದೇಶ.



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ, ನರೇಗಾ ಖಾತ್ರಿ ಕಾಮಗಾರಿ ನೆಪದಲ್ಲಿ, ದನದ ಕೊಟ್ಟಿಗೆ,ಕ್ಷೇತ್ರಬದು,ಸಮಪಾತಲಿ ಎಂದು ಖೊಟ್ಟಿ ಭಾವಚಿತ್ರಗಳನ್ನು ಜಿ,ಪಿ,ಎಸ್,ಮಾಡಿ, 9 ಲಕ್ಷದ 67 ಸಾವಿರ 926 ರು,ಗಳನ್ನು ಗ್ರಾ,ಪಂ, ಅಭಿವೃದ್ದಿ ಅಧಿಕಾರಿ, ಇಂಜನಿಯರ್ ಕಂಪ್ಯೂಟರ್ ಆಪರೇಟರ್ ಕೈಚಳಕದಿಂದ ಪಾವತಿಸಿಕೊಂಡಿದ್ದು, ಮರು ಪಾವತಿಸುವಂತೆ ಜಿ,ಪಂ,,ಯಾದಗಿರ ಒಂಬಡ್ಸ್ ಮನ್,ಶಿವಶರಣಪ್ಪ ಬನ್ನಿಕಟ್ಟಿ, ರವರು ಎಪ್ರೀಲ್,23 –2024ರಂದು ಆದೇಶ ಮಾಡಿ, ರಾಜ್ಯಸರ್ಕಾರದ ಮೇಲಾಧಿಕಾರಿಗಳ ಅವಗಾನೆಗೆ ಕಳಿಸಿದ್ದಾರೆ. ತಾಲುಕಿನ ಹರುಸಗುಂಡಗಿ, ಗ್ರಾ,ಪಂ,ಯಲ್ಲಿ ಕಳೆದ 2021–22 ಮತ್ತು 2022–23–ಹಾಗೂ 2023– 24ರವರೆಗೆ ಮನರೆಗಾ ಕಾಮಗಾರಿಗಳ ಸ್ಥಳ ಪರೀಶೀಲನೆ ಜಿಪಿಎಸ್,ಭಾವಚಿತ್ರಗಳ ಪರಿಗಣಿಸಿ ಈ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಹೆಳಲಾಗುತ್ತದೆ, ಗ್ರಾ.ಪಂ, ಅಧ್ಯಕ್ಷರು, 3 ಲಕ್ಷ,ದ 22 ಸಾವಿರ, ಪಿಡಿಓ 3,ಲಕ್ಷದ 22 ಸಾವಿರ, ಇಂಜಿನಿಯರ್ 3 ಲಕ್ಷ,ದ 26 ಸಾವಿರಕ್ಕೂ ಅಧಿಕ ಹಣ ಮರಳಿ ಪಾವತಿಗೆ ಅವರು ಆದೇಶದಲ್ಲಿ ವಿವರಣೆ ನೀಡಿದ್ದಾರೆ. ರೈತರ ಹೊಲದಲ್ಲಿ ಯಾವುದೆ ಕಾಮಗಾರಿ ಇರುವದಿಲ್ಲ. ರೈತರ ಪಾಣಿ ಆನ್ ಲೈನ್ ಪಡೆದು–ಕೊಂಡು ಒಪ್ಪಿಗೆ ಇಲ್ಲದೆ ದಾಖಲಾತಿ ತಯ್ಯಾರಿಸಿ,ನಾಮಫಲಕಗಳನ್ನು ಹಾಕದೆ,ಜಿಪಿಎಸ್,ಪೋಟೊಗಳು ಸಹ ಇಲ್ಲದೆ ಹಣ ಪಾವತಿಸಿದ್ದು ಕಂಡು ಬಂದಿದೆ,34 ಸಮಗ್ರವಾಗಿ ತನಿಖೆ ಮಾಡಿದ್ದು ಇನ್ನೂ 2 ಕಾಮಗಾರಿಗಳು ಇಂಜನಿಯರ್ ಬಾಕಿ ಉಳಿಸಿಕೊಂಡಿದ್ದಾರೆ. ಇನ್ನೂ ಹಣ ಮರುಪಾವತಿ ಬಾಕಿ ಇದೆ ಎಂದು ದೂರುದಾರರಾದ ರಾಚಪ್ಪ ಬಾರಿಗಿಡ.ಶುಭಾಶ ಮೂಲಿಮನಿ, ಮಾನಪ್ಪ ಮುದಕನ್, ಮರೆಪ್ಪ ಮ್ಯಾಗೇರಿ ವಿವರಣೆ ನೀಡಿದ್ದಾರೆ,

> ಸರ್ಕಾರದ ಅನುದಾನ ಕಂಪ್ಯೂಟರ್ ಆಪರೇಟರಗಳ ಸಹಕಾರಗಳಿಂದ ರೈತರಿಗೆ ಕೂಲಿ ಕಾರ್ಮಿಕರಿಗೆ ಮೋಸ ವಂಚನೆ ಮಾಡುವ ಗ್ರಾ,ಪಂ, ಅಭಿವೃದ್ದಿ ಅಧಿಕಾರಿ, ಅಧ್ಯಕ್ಷರು, ಇಂಜನಿಯರ್, ಆಪರೇಟರ್ ರುಗಳ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಿಸಕೊಳ್ಳಬೇಕು. ಇಲ್ಲವಾದಲ್ಲಿ ಪ್ರತಿಯೊಂದು ಗ್ರಾ,ಪಂ, ಕಂಪ್ಯೂಟರ್ ಆಪರೇಟರ್ ಗಳ ಕೈಚಳಕದಲ್ಲಿ ಪ್ರತಿ ವರ್ಷ ಕೊಟ್ಯಾಂತರ ಹಣ ದುರುಪಯೋಗಪಡಿಸಕೊಂಡು ಉಳ್ಳವರ ಪಾಲಾಗುತ್ತದೆ, ಸರ್ಕಾರ ಗಮನ ಹರಿಸಿ ಪ್ರಕರಣ ದಾಖಲಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು
>
> **ಮರೆಪ್ಪ ಮ್ಯಾಗೇರಿ, ಗ್ರಾ,ಪಂ, ಮಾಜಿ ಸದಸ್ಯರು ಹುರುಸಗುಂಡಗಿ, ಶಹಾಪುರ**

## ಕುವೆಂಪು ಕೊಡುಗೆ ಚಿರಸ್ಮರಣೀಯ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.30:ವಿಶ್ವ ಮಾನವ ಸಂದೇಶ ಸಾರಿದ ರಾಷ್ಟ್ರ ಕವಿ ಕುವೆಂಪು ತಮ್ಮ ಯುಗಧರ್ಮ ವಾಣಿಯ ಮೂಲಕ ಚಿರಂಜೀವಿಯಾಗಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಅವರು ನೀಡಿದ ಕೊಡುಗೆ ಚಿರಸ್ಮರಣೀಯ ಎಂದು ಸಿದ್ದಪ್ಪ ಭಗವತಿ ಹೇಳಿದರು.

ನಗರದ ರಾಮ ಮಂದಿರ ಹತ್ತಿರವಿರುವ ವಿವೇಕಾನಂದ ವಿದ್ಯಾ ನಿಕೇತನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ರಾಷ್ಟ್ರ ಕವಿ ಕುವೆಂಪು ಅವರ ಜನ್ಮ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿದ್ದಪ್ಪ ಭಗವತಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತ, ವರ ಕವಿ ಬೇಂದ್ರೆ ಹೇಳಿದಂತೆ ಕುವೆಂಪು ಅವರು ಯುಗದ ಜಗದ ಕವಿ ಎಂದು ಹೇಳಿದರು.

ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯದ ಪರಿಚಯ ಹಾಗೂ ಅದನ್ನು ಓದುವ ಆಸಕ್ತಿ ಕಡಿಮೆಯಾಗುತ್ತಿರುವುದು ಉತ್ತಮ ಬೆಳವಣಿಗೆಯಲ್ಲ. ಶಾಲೆಗಳು ಹಾಗೂ ಪೊಷಕರು ಮಕ್ಕಳಿಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಓದುವ ಅಭಿರುಚಿ ಬೆಳೆಸಬೇಕು, ಇಲ್ಲವಾದಲ್ಲಿ ನಮ್ಮ ಮಾತೃಭಾಷೆ ಕೇವಲ ಪರೀಕ್ಷೆಗೆ ಮಾತ್ರ ಸೀಮಿತವಾಗಿ ಬಿಡುವ ಭಯವಿದೆ ಎಂದು ಹೇಳಿದರು.

ಕನ್ನಡ ವಿಭಾಗದ ಶಿಕ್ಷಕ ರಾಜು ರಾಠೋಡ ಮಾತನಾಡುತ್ತ, ಪುಟ್ಟಪ್ಪನವರು ಬಾಲ್ಯದಿಂದಲೇ ಆಧ್ಯಾತ್ಮದಲ್ಲಿ ತುಂಬಾ ಆಸಕ್ತಿ ಹೊಂದಿದ್ದರು. ತಮ್ಮ ಕೃತಿಗಳ ಮೂಲಕ ಸಾಮಾಜಿಕ ಅನ್ಯಾಯಗಳನ್ನು ಪ್ರತಿಭಟಿಸಿ, ಮನುಜ ಮತ ವಿಶ್ವ ಪಥ ಎಂದು ನಂಬಿ ಜಾತಿ ಮತಗಳ ಬೇದಭಾವವನ್ನು ದೂರ ಮಾಡಲು ಸದಾ ಶ್ರಮಿಸಿದವರು. ಕುವೆಂಪು, ಕನ್ನಡದ ಅಗ್ರಮಾನ್ಯ ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಮತ್ತು ಚಿಂತಕರಾಗಿದ್ದರು. ಇಪ್ಪತ್ತನೆಯ ಶತಮಾನ ಕಂಡ ದೈತ್ಯ ಪ್ರತಿಭೆ. ಕನ್ನಡದ ಎರಡನೆಯ 'ರಾಷ್ಟ್ರಕವಿ. ಜ್ಞಾನಪೀಠ ಪ್ರಶಸ್ತಿಯನ್ನೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು. ಕರ್ನಾಟಕ ಸರ್ಕಾರ ಕೊಡಮಾಡುವ ಕರ್ನಾಟಕ ರತ್ನ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿಗಳನ್ನು ಮೊದಲ ಬಾರಿಗೆ ಪಡೆದವರು. ಇಂಥವರ ಸಾಹಿತ್ಯವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಲೇಬೇಕು ಎಂದು ಅಭಿಪ್ರಾಯ ಪಟ್ಟರು.

ಕುವೆಂಪು ಅವರ ಕುರಿತು ವಿದ್ಯಾರ್ಥಿಗಳಾದ ಸಾಯಿಪ್ರಸಾದ, ವೈಭವ, ರೀತಿಕ್ ಹಾಗೂ ಸೌಮ್ಯ ಬಂಧೇಶ ಮಾತನಾಡಿದರು. ಉತ್ತಮವಾಗಿ ಮಾತನಾಡಿದ ಕುಮಾರಿ ಸೌಮ್ಯ ಬಂಧೇಶಳಿಗೆ ಪ್ರಾಂಶುಪಾಲರು ಚೆಕ್ ನೀಡಿ ಗೌರವಿಸಿದರು. ಕಾರ್ಯಕ್ರಮದ ಬಳಿಕ ಮಕ್ಕಳಿಗೆ ಕುವೆಂಪು ಅವರ ಜೀವನಾಧಾರಿತ ಕಿರುಚಿತ್ರ ತೋರಿಸಲಾಯಿತು.

ಎಲ್ಲ ಕಾರ್ಯಕ್ರಮವನ್ನು ವಿದ್ಯಾರ್ಥಿಗಳೆ ಆಯೋಜಿಸಿದ್ದು ವಿಶೇಷವಾಗಿತ್ತು, ವಿದ್ಯಾರ್ಥಿನಿ ಲಕ್ಷ್ಮೀ ಕಲ್ಲಪ್ಪ ಸ್ವಾಗತಿಸಿದಳು. ಮಹ್ಮದ್ ಆಫಾನ್ ವಂದಿಸಿದನು. ಸಿಂಚನಾ ರಾಘವೇಂದ್ರ ನಿರೂಪಿಸಿದಳು. ಕಾರ್ಯಕ್ರಮದಲ್ಲಿ ಮುಖ್ಯ ಗುರು ಅಂಬಿಕಾ ರೆಡ್ಡಿ, ಶೈಕ್ಷಣಿಕ ಸಂಯೋಜಕಿ ಸುಮಾ ಭಗವತಿ, ರೇಣುಕಾ ಪಾಟೀಲ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬಳ್ಳಾರಿ ಸೊಸೈಟಿ ಚುನಾವಣೆಶೇ 70 ಕ್ಕೂ ಹೆಚ್ಚು ಮತದಾನ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.29: ಇಲ್ಲಿನ ಬಳ್ಳಾ–ರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ಸೊಸೈಟಿ)ಯ ಚುನಾವಣೆಯಲ್ಲಿ. 8 ನಿರ್ದೇಶಕ ಸ್ಥಾನಗಳಿಗೆ ಇಂದು ಸೊಸೈಟಿಯ ಸಭಾಂಗಣದಲ್ಲಿ ಬೆಳಿಗ್ಗೆ 9 ರಿಂದ ಆರಂಭಗೊಂಡಿರುವ ಮತದಾನ ಸಂಜೆ ನಾಲ್ಕರವರೆಗೆ ನಡೆಯಲಿದ್ದು. ಬಿರುಸಿನ ಮತದಾನ ನಡೆದು ಮಧ್ಯಾಹ್ನ ಒಂದುವರೆ ಒಳಗೆ ಸಾಲಗಾರರ ಕ್ಷೇತ್ರದಿಂದ ಶೇ 70 ರಷ್ಟು ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಶೇ 50 ರಷ್ಟು ಮತದಾನವಾಗಿತ್ತು.

ಸಾಲಗಾರರ ಕ್ಷೇತ್ರದಿಂದ 751 ಮತ್ತು ಸಾಲಗಾರರಲ್ಲದ ಕ್ಷೇತ್ರಕ್ಕೆ 106 ಮತದಾರರಿದ್ದಾರೆ. ಚುನಾವಣೆಯಲ್ಲಿ ಗೆಲುವು ಸಾಧಿಸಲು ಹಾಲಿ ಅಧ್ಯಕ್ಷ ಬಿ.ಕೆ. ಕೆರಕೋಡಪ್ಪ ಮತ್ತು ಮಾಜಿ ಅಧ್ಯಕ್ಷ ಎಸ್.ದೊಡ್ಡನಗೌಡ ನೇತೃತ್ವದ ತಂಡ ಹಾಗು ಮಾಜಿ ಅಧ್ಯಕ್ಷ ಎಂ.ಶ್ರೀಧರ್ ಅವರ ನೇತೃತ್ವದ ತಂಡ ಜಿದ್ದಾ ಜಿದ್ದಿಗೆ ಇಳಿದಿವೆ.

ಸೊಸೈಟಿ ಮುಂದೆ ಮತದಾನ ಮಾಡಲು ಬಂದವರ ಬಳಿ ತಮಗೆ ಮತ ನೀಡುವಂತೆ ಅಭ್ಯರ್ಥಿಗಳು ಅಂತಿಮ ಮತಯಾಚನೆ ಮಾಡುತ್ತಿದ್ದರು.

ಬಿಗಿ ಪೊಲೀಸ್ ಬಂದೋಬಸ್ತು ಒದಗಿಸಿತ್ತು. ಮತದಾರರಲ್ಲದವರಿಗೆ ಸೊಸೈಟಿ ಆವರಣದಲ್ಲಿ ಬರದಂತೆ ಮಾಡಲಾಗಿತ್ತು.

ಮತದಾನ ಮುಗಿದ ನಂತರ ಮತಗಳ ಎಣಿಕೆ ಕಾರ್ಯ ನಡೆದು ರಾತ್ರಿ ವೇಳೆಗೆ ಫಲಿತಾಂಶ ಹೊರ ಬೀಳಲಿದೆ. ಅವಿರೋಧ ಆಯ್ಕೆ: ಸೊಸೈಟಿಯಲ್ಲಿ ಒಟ್ಟು 12 ಸ್ಥಾನಗಳಿದ್ದು ಅವುಗಳ ಪೈಕಿ ನಾಲ್ಕು ಸ್ಥಾನಗಳಿಗೆ

ಒಬಿಸಿ ಬಿ) ನ ಒಂದು ಸ್ಥಾನಕ್ಕೆ ಮಾಜಿ ಅಧ್ಯಕ್ಷ ಮಿಂಚೇರಿಯ ಎಸ್. ದೊಡ್ಡನಗೌಡ, ಎಸ್ಸಿ ಮೀಸಲು ಒಂದು ಸ್ಥಾನಕ್ಕೆ ವಿಶ್ವನಾಥಪುರ ಕಾಲೋನಿಯ ಶಾರದಮ್ಮ, ಮಹಿಳೆಯರ ಮೀಸಲಿನ ಎರೆಡು ಸ್ಥಾನಗಳಿಗೆ ಪಟೇಲ್ ನಗರದ ಬಿ.ಚಂದ್ರಿಕಾ ಮತ್ತು ಕೆ.ಶ್ರಿಕಳಾ ಬೊಜ್ಜಪ್ಪ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸ್ಪರ್ಧಾ ಕಣದಲ್ಲಿ

ಸಾಲಗಾರರಲ್ಲದ ಕ್ಷೇತ್ರದಿಂದ ಒಂದು ಸ್ಥಾನಕ್ಕೆ ಜ್ಯೋತಿ ಮತ್ತು ಶಿಲ್ಪ ಅವರು ಕಣದಲ್ಲಿದ್ದರೆ. ಸಾಲಗಾರರ ಸಾಮಾನ್ಯ ಕ್ಷೇತ್ರದ ಐದು ಸ್ಥಾನಗಳಿಗೆ ಹಾಲಿ ಅಧ್ಯಕ್ಷ ಬಿ.ಕೆ.ಕೆರಕೋಡಪ್ಪ,ಜೆ.ಪಂಪಾಪತಿ, ಬೆಳ್ಳಿ ಕಟ್ಟೆಪ್ಪ, ಶ್ರೀನಿವಾಸರೆಡ್ಡಿ, ಬಜ್ಜೆಪ್ಪ,ಎಂ.ದುರ್ಗಾಪ್ರಸಾದ್, ಕೆ.ಫಕ್ಕೀರಪ್ಪ, ಹಂಪವತಿ ಕೆ. ಕಣದಲ್ಲಿದ್ದರು.

ಇನ್ನು ಓಬಿಸಿ (ಎ) ಕ್ಷೇತ್ರದ ಒಂದು ಸ್ಥಾನಕ್ಕೆ ಕಲ್ಪನಾ ಕೆ.ಜೆ,ಯು. ಕೆ.ತಿಮ್ಮಪ್ಪ ಮತ್ತು ಬಂಡಿಹಟ್ಟಿಯ ಕೆ.ಹೊನ್ನೂರಸ್ವಾಮಿ, ಎಸ್ಟಿ ಕ್ಷೇತ್ರದ ಒಂದು ಸ್ಥಾನಕ್ಕೆ ಸುರೇಶ್ ಕಮ್ಮರಚೇಡು, ಆಂಜನೇಯ ಇವರು ಸ್ಪರ್ಧೆ ಮಾಡಿದ್ದರು.

## ಕನ್ನಡ ನಾಡು ಕಂಡ ಶ್ರೇಷ್ಠ ಕವಿ ಕುವೆಂಪು – ಮಡಿವಾಳಪ್ಪ ಹೆಗ್ಗನದೊಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:–ಕನ್ನಡ ಸಾಹಿತ್ಯ ಲೋಕಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕನ್ನಡದ ಶ್ರೇಷ್ಟಕವಿ, ಜಗದ ಕವಿ, ಯುಗದ ಕವಿ ಕುವೆಂಪು ಎಂದು ಕೆಂಭಾವಿ ವಲಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಡಿವಾಳಪ್ಪ ಪಾಟೀಲ್ ಹೆಗ್ಗಣದೊಡ್ಡಿ ಹೇಳಿದರು

ಶಹಾಪುರನಗರದ ಹೃದಯಭಾಗದಲ್ಲಿರುವ ಮಾತೃಛಾಯ ಶಿಕ್ಷಣ ಸಂಸ್ಥೆ ವತಿಯಿಂದ ಆಯೋಜಿಸಿದ್ದ ರಾಷ್ಟಕವಿ ಕುವೆಂಪು ಅವರ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ 'ಮಾತನಾಡಿದ ಸಾಹಿತಿ ಶಿಕ್ಷಕ ಮಡಿವಾಳಪ್ಪರವರು ಶ್ರೀ. ರಾಮಾಯಣ ದರ್ಶನಂ ಎಂಬ ಮಹಾಕಾವ್ಯವನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿ ಕನ್ನಡದ ಹಿರಿಮೆಯನ್ನು ವಿಶ್ವ–ಕ್ಕೆ ಪರಿಚಯಿಸಿದ ವಿಶ್ವಮಾನವ ಸಂದೇಶದ ಮೂಲಕ ಸರ್ವರ ಗಮನ ಸೇಳೆದ ಸಮಾನತೆಯ ಕವಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಛಾಪು ಮೂಡಿಸಿದ ಅತ್ಯಂತ ಶ್ರೇಷ್ಠ ಎರಡನೇ ರಾಷ್ಟ್ರ ಕವಿ ಆಡು ಮುಟ್ಟದ ತಪ್ಪಲು ಇಲ್ಲ ಕುವೆಂಪು ಅವರು ಬರೆ–ಯದ ಸಾಹಿತ್ಯವಿಲ್ಲ ಅವರು ಕಥೆ ಕಾದಂಬರಿ ನಾಟಕಗಳು ವಿಮರ್ಶೆಗಳು ಬರೆದು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ ಕವಿ ಕುವೆಂಪುರವರು ಎಂದರು.

ಕೆಂಭಾವಿ ವಲಯ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಮಡಿವಾಳಪ್ಪ ಪಾಟೀಲ್ ಹೆಗ್ಗಣದೊಡ್ಡಿ ಮಾತನಾಡಿದರು

ಕುವೆಂಪು ಅವರು ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ, ಕನ್ನಡದ ಶ್ರೇಷ್ಟಕವಿ, ಕಾದಂಬರಿಕಾರ, ಲೇಖಕ, ಬರಹಗಾರರಾಗಿ ಅವರು ಮಾಡಿದ ಸೇವೆ ಅಮೋಘ ಮತ್ತು ಅಪಾರ. ಕುವೆಂಪು ಅವರ ಕವಿ ಶೈಲ ಕನ್ನಡದ ಪ್ರಸಿದ್ಧ ಸಾಹಿತಿಕ ತಾಣವಾಗಿ ನಮ್ಮ ಮುಂದೆ ಇದೆ, ಕಾರಣ ಕುವೆಂಪು ಅವರ ಸಾಹಿತ್ಯ ಪ್ರೇಮ ಸರ್ವರಿಗೂ ಪ್ರೇರಣೆಯಾಗಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತೃಛಾಯ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ತಿಪ್ಪಣ್ಣ ಕ್ಯಾತ್ನಾಳ, ಮೌನೇಶ್ ಹಳಿಸಗರ,ಮಲ್ಲಿಕಾರ್ಜುನ ಮಳಿಕೇರಿ, ಹೀನಾ ಬೇಗಂ, ರೇಣುಕಾ ಭಿ ಗುಡಿ, ಭಾವನಾ ಮೇಘ,ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಮಕ್ಕಳ ಹಾಜರಿದ್ದರು.

## ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸಿದಾಗ ಯಶಸ್ಸು ಸಾಧ್ಯ; ನಿಷ್ಠಿ ರುದ್ರಪ್ಪ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ, ಡಿ.30: ನಗರದ ಕನ್ನಡ ಚೈತನ್ಯ ವೇದಿಕೆಯಿಂದ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿ ಜಿಲ್ಲೆಗೆ ತರುವಲ್ಲಿ ಯಶಸ್ವಿಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ ಅವರಿಗೆ ಅಭಿನಂದನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ನಿಷ್ಠಿ ರುದ್ರಪ್ಪ ಮುಂದಿನ ಸಾಹಿತ್ಯ ಸಮ್ಮೇಳನವನ್ನು ಜಿಲ್ಲೆಯಲ್ಲಿ ನಡೆಸಲು ಎಲ್ಲಾ ರೀತಿಯ ಸಹಕಾರ ಅಗತ್ಯ. ವಿಶೇಷವಾಗಿ ಬಳ್ಳಾರಿಯ ಕನ್ನಡಿಗರು ಸ್ವಯಂಸೇವಕರಾಗಿ ಸೇವೆ ಮಾಡಿದಾಗ ಮಾತ್ರ ಸಮ್ಮೇಳನ ಯಶಸ್ವಿಯಾಗಲು ಸಾಧ್ಯ. ಇಲ್ಲಿ ಯಾವುದೇ ಜಾತಿ. ಧರ್ಮ. ಪಕ್ಷ .ಭೇದ ಮರೆತು ಕನ್ನಡ ತಾಯಿ ಭುವನೇಶ್ವರಿ ಜಾತ್ರೆಯನ್ನು ಮಾಡಬೇಕಾಗಿದೆ ಎಂದರು.

ವೇದಿಕೆ ಮಹಿಳಾ ಅಧ್ಯ–ಕ್ಷೆ ಜ್ಯೋತಿ ಪ್ರಕಾಶ್ ಅಧ್ಯಕ್ಷ ಬಿ.ಎಸ್. ಪ್ರಭುಕುಮಾರ್ .ಕನ್ನಡ ಸಾಹಿತ್ಯ ಪರಿಷತ್ತಿನ .ಅಜಯ್ ಬಣಕಾರ್ .ತಿಪ್ಪೇರುದ್ರಪ್ಪ, ಡಾ.ಶಿವಲಿಂಗಪ್ಪ ಅಂದ್ಯಾಳ. ಹನುಮಂತಪ್ಪ.ಮಲ್ಲಿಕಾರ್ಜುನ್ ಮೊದಲಾದವರು ಇದ್ದರು.

## ಶಿಕ್ಷಣದಿಂದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ: ನ್ಯಾ.ರಾಜೇಶ್ ಎನ್.ಹೊಸಮನೆ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.30–ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡಲು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಶಿಕ್ಷಣದಿಂದ ಮಾತ್ರ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.

ಕಾರ್ಮಿಕ ಇಲಾಖೆ ಮತ್ತು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಹಯೋಗದಲ್ಲಿ ಸಂಸ್ಥೆಯ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ವ್ಯಾಪಾರಿ–ವಾಣಿಜ್ಯೋದ್ಯಮಿಗಳ ಸೌಹಾರ್ದ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿಯು ಸಮಾಜದಲ್ಲಿ ದೊಡ್ಡಪಿಡುಗಾಗಿದ್ದು, ಶಿಕ್ಷಣದ ಮೂಲಕವೇ ಈ ಸಮಸ್ಯೆಗೆ ಪರಿಹಾರ ಸಾಧ್ಯ. ಅಧಿಕಾರಿಗಳು ಮತ್ತು ವ್ಯಾಪಾರಿ–ಉದ್ಯಮಿಗಳು ಪರಸ್ಪರ ಮಾನವೀಯತೆಯ ಆಧಾರದಲ್ಲಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕು ಎಂದು ತಿಳಿಸಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾರ್ಮಿಕ ಇಲಾಖೆ ಮತ್ತು ವ್ಯಾಪಾರ–ವಾಣಿಜ್ಯೋದ್ಯಮಿಗಳು ಪರಸ್ಪರ ಸಹಕಾರದಿಂದ ಇದ್ದಲ್ಲಿ ಮಾತ್ರ ಬಾಲಕಾರ್ಮಿಕ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಸಾಧ್ಯ ಎಂದು ಅವರು ತಿಳಿಸಿದರು.

ಪ್ರತಿ ಮೂರು ಅಥವಾ ಆರು ತಿಂಗಳಿಗೆ ವ್ಯಾಪಾರಿ ಮತ್ತು ಉದ್ಯಮಿಗಳಿಗೆ ಅರಿವು ಕಾರ್ಯಾಗಾರ ಏರ್ಪಡಿಸಬೇಕು. ಕಾರ್ಮಿಕ ಇಲಾಖೆಯು ಕಾಲ ಕಾಲಕ್ಕೆ ಸಭೆ ನಡೆಸಬೇಕು ಎಂದರು.

ಕಾರ್ಮಿಕ ಅಧಿಕಾರಿ ಸಿದ್ದಪ್ಪ ಖೈನೂರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ನಿವಾರಣೆ ಮಾಡಲು ವ್ಯಾಪಾರಿಗಳು ಮತ್ತು ಉದ್ಯಮಿಗಳು ಪರಸ್ಪರ ಸಹಕಾರ ನೀಡಬೇಕು ಎಂದರು.

ಬಾಲಕಾರ್ಮಿಕ ಯೋಜನೆಯ ಯೋಜನಾಧಿಕಾರಿ ಮೌನೇಶ್ ಅವರು ಮಾತನಾಡಿ, ಮಕ್ಕಳು ಶಿಕ್ಷಣ ಹೊಂದುವಲ್ಲಿ ಮೂಲಭೂತ ಹಕ್ಕು ಹೊಂದಿದ್ದು, ಮಕ್ಕಳನ್ನು ಸಾಕಲಾಗದ ಪೋಷಕರು – ಪಾಲಕರು ಇದ್ದಲ್ಲಿ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ)ಗೆ ತಿಳಿಸಿದಲ್ಲಿ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದರು.

ಈ ವೇಳೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ ಡಾ.ಮರ್ಚೆಡ್ ಮಲ್ಲಿಕಾರ್ಜುನಗೌಡ, ವಿ.ರಾಮಚಂದ್ರ,ಗೌರವಕಾರ್ಯದರ್ಶಿ ಕೆ.ಸಿ.ಸುರೇಶಬಾಬು, ಹೋಟಲ್ ಮಾಲೀಕರ ಸಂಘದ ಪೋಲಾ ವಿಕ್ರಮ, ವ್ಯಾಪಾರಿಗಳ ಪರವಾಗಿ ಜೆ.ರಾಜೇಶ್, ಲಕ್ಷ್ಮೀನಾರಾಯಣ, ಎಸ್.ಎಂ.ವೇಣುಗೋಪಾಲ್ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು–ಸದಸ್ಯರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ನಾಳಿನ ಶಹಾಪುರ ಬಂದ್ ಯಶಸ್ವಿಗೆ ಮುಖಂಡರ ಕರೆ!



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ,ಕೇಂದ್ರಗ್ರಹ ಮಂತ್ರಿ ಅಮೀತ ಶಾ,ರವರು ಸಂವಿಧಾನ ಶಿಲ್ಪಿ ಡಾ,ಬಿ,ಆರ್,ಅಂಬೇಡ್ಕರವರ ವಿರುದ್ದ ಅವಹೇಳನಕಾರಿ ಮಾತನಾಡಿದ್ದನ್ನು ಖಂಡಿಸಿ,ನಾಳೆ ಹಮ್ಮಿಕೊಂಡ ಬಂದ್ ಕರೆ ಹಿನ್ನಲೆಯಲ್ಲಿ. ಶಹಾಪುರ ಶೋಷಿತ ಸಮುದಾಯಗಳು ರವಿವಾರ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸಭೆ ಸೇರಿ ಬಂದ್ ಯಶಸ್ವಿಗೆ ಸರ್ವರು ಸಹಕಾರ ನೀಡಿ, ಯಶಸ್ವಿಗೆ ಶ್ರಮಿಸಿಬೇಕು ಎಂದು ಒಕ್ಕೊರಿಲಿನ ನಿರ್ಣಾಯ ಕೈಗೊಂಡರು, ಅಂದಿನ ಶಹಾಪುರ ಸಂಪೂರ್ಣ ಬಂದ್ ಗೆ ಮಾದಿಗ ಮತ್ತು ಹೊಲೆಯ ಸಮುದಾಯಗಳಲ್ಲದೆ ಸರ್ವ ಸಮಾಜದ ಅಧ್ಯಕ್ಷರು ಅಭಿಮಾನಿಗಳು ಬಂದ್ ಕಾರ್ಯಕ್ರಮದಲ್ಲಿ ಭಾಗವಹಿಸಲ್ಲಿದ್ದು ಶೋಷಿತ ಸಮುದಾಯಗಳ ಎರಡು ಸಮಾಜದ ಮುಖಂಡರು ಹೆಚ್ಚಿನ ಕಾಳಜಿಯಿಂದ ಬಂದ್ ನೇತೃತ್ವದಲ್ಲಿ ಪಾಲ್ಗೊಳ್ಳಬೇಕು, ಎಂದು ಅವರು ಸಭೆಯಲ್ಲಿ ಮನವರಿಕೆ ಮಾಡಿದರು,ಈ ಬಂದ್ ಕಾರ್ಯಕ್ರಮದಲ್ಲಿ ಹೊಲಯ ಮತ್ತು ಮಾದಿಗ ಸಮಾಜದ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಈ ಸಭೆಯ ವಿಷಯ ಪ್ರಾಸ್ತಾಪ ಮಾಡಲಾಯಿತು, ಸಭೆಯಲ್ಲಿ ದಲಿತ ಮುಖಂಡರಾದ ಮಲ್ಲಿಕಾರ್ಜುನ ಪೂಜಾರಿ, ಶ್ರೀಶೈಲ್ ಹೋಸಮನಿ, ಶಾಂತಪ್ಪ ಗುತ್ತೆದಾರ, ವೆಂಕಟೇಶ ಆಲೂರ, ಚಂದಪ್ಪ ಹಲಗಿ, ಮಲ್ಲಪ್ಪ ಗೋಗಿ, ವಾಸುದೇವ ವಕೀಲರು, ಪಿ.ಎಲ್,ಡಿ, ಬ್ಯಾಂಕ್ ಅಧ್ಯಕ್ಷರಾದ ಗುರುನಾಥ ಬಾಣತಿಹಾಳ, ಶಾಂತಪ್ಪ ಸಾಲಿಮನಿ, ಗೌಡಪ್ಪಗೌಡ ಉಮರದೊಡ್ಡಿ, ಶಿವುಕುಮಾರ ದೊಡ್ಡಮನಿ, ಮಲ್ಲಿಕಾರ್ಜುನ ಕಟ್ಟಿಮನಿ, ಭೀಮಾಶಂಕರ್ ಕಟ್ಟಿಮನಿ, ಶೇಖಪ್ಪ ಕತ್ತಿ, ಮರೆಪ್ಪ ಜಾಲಿಮೆಂಚಿ, ಪರಶುರಾಮ ರೋಜಾ, ಮಾನಪ್ಪ ವಠಾರ್, ಭೀಮರಾಯ ಕನ್ಯಾಕೊಳೂರ, ಭೀಮರಾಯ ಬೊಮನಳ್ಳಿ, ಜೆಟ್ಟಪ್ಪ ಇಟಗಿ, ಚಂದಪ್ಪ ಕಂಚಲಕಾಯಿ, ಧರ್ಮಣ್ಣ ನಾಟೇಕಾರ, ಶಿವು ಗುತ್ತಿಪೇಟ, ರಡ್ಡಿ ಸಗರಕರ್, ಮಾನಪ್ಪ ಮದ್ದರ್ಕಿ, ಅಯ್ಯಣ್ಣ ಕದರಾಪುರ, ಭೀಮರಾಯ ಕರಕಳ್ಳಿ, ಖಂಡಪ್ಪ ಖಂಚಲಕಾಯಿ, ಸರಣಪ್ಪ ಹತ್ತಿಗೂಡೂರ, ಹೊನ್ನಪ್ಪ ಹೋಪೇಟ, ಪ್ರದೀಪ ಅಣಿಬಿ, ಚಂದ್ರಶೆಖರ ಸಗರಕರ್, ಮಲ್ಲಿಖಾರ್ಜುನ ಗುಡ್ಡೆನೋರ್, ಮೌನೇಶ ಕನ್ಯಾಕೋಳೂರ, ಭೀಮಾಶಂಕರ ಬೆನಕನಳ್ಳಿ ಹಾಜರಿದ್ದರು,

# ಶಿರೂರಿನಲ್ಲಿ ಸಂಭ್ರಮದ ಅಯ್ಯಪ್ಪಸ್ವಾಮಿ ಮಹಾಪೂಜೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.30–ತಾಲೂಕಿನ ಶಿರೂರಪಟ್ಟಣದಲ್ಲಿಕರುಣಾಮೂರ್ತಿ ಅಯ್ಯಪ್ಪಸ್ವಾಮಿ ಸೇವಾ ಸಮಿತಿಯ ಮಾಲಾಧಾರಿಗಳಿಂದಅಯ್ಯಪ್ಪಸ್ವಾಮಿ ಅಗ್ನಿ ಹಾಗೂ ಮಹಾಪೂಜೆ ವೈಭವದಿಂದ ಜರುಗಿತು.

ಸ್ಥಳೀಯ ಸಿದ್ದೇಶ್ವರ ಪ್ರೌಢಶಾಲಾ ಮೈದಾನದಲ್ಲಿ ನಿರ್ಮಿಸಲಾದ ಅಲಂಕೃತ ಸನ್ನಿಧಾನದಲ್ಲಿ ಜರುಗಿದ ಮಹಾಪೂಜೆಯಲ್ಲಿ ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಹಾಗೂ ಪಟ್ಟಣದ ಭಕ್ತ ಸಮೂಹ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಕೇರಳ–ಹುಬ್ಬಳ್ಳಿಯ ಆರ್.ಕೃಷ್ಣಮೂರ್ತಿ ಗುರುಸ್ವಾಮಿ, ಮಾಲಾಧಾರಿಗಳು ನಿಷ್ಠೆಯಿಂದ ಅಯ್ಯಪ್ಪಸ್ವಾಮಿಯನ್ನು ಆರಾಧಿಸಿ, ವೃತವನ್ನು ಕಾಯಾ, ವಾಚಾ, ಶುದ್ಧ ಮನಸ್ಸಿನಿಂದ ಗೈದು ಶಬರಿಗಿರಿಯ ಯಾತ್ರೆ ಕೈಗೊಂಡು ಗುರುವಿನ ಕೃಪೆಗೆ ಪಾತ್ರರಾಗಬೇಕು ಎಂದು ಹೇಳಿದರು.

ನಂತರ ಪುರವಂತರ ನೇತೃತ್ವದಲ್ಲಿ ಅಗ್ನಿ ಪೂಜೆ ನೆರವೇರಿತು. 70 ಕ್ಕೂ ಹೆಚ್ಚು ಮಾಲಾಧಾರಿಗಳು ಅಗ್ನಿ ಪ್ರವೇಶ ಮಾಡಿ ಭಕ್ತಿಯನ್ನು ಸಮರ್ಪಿಸಿದರು. ಮಹಾಪೂಜೆಗೂ ಮೊದಲು ಅಯ್ಯಪ್ಪಸ್ವಾಮಿ ಭಾವಚಿತ್ರದ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಾಲಾಧಾರಿಗಳ ಭಜನೆಯೊಂದಿಗೆ ವಿಜೃಂಭಣೆಯಿಂದ ಜರುಗಿತು.

ರಾಜು ಆನವೇಕರ, ಕಳಸಾ ಗುರುಸ್ವಾಮಿ, ಈರಪ್ಪ ಕಲಬುರ್ಗಿ, ಸಂಗಪ್ಪ ಎಣ್ಣಿ, ದ್ಯಾಮಣ್ಣ ಜಲಗೇರಿ, ಮಲ್ಲಪ್ಪ ಏಳೆಮ್ಮಿ, ಮಲ್ಲಯ್ಯ ನಿಡಗುಂದಿ, ರವಿಶಂಕರ ಪ್ಯಾಟಿಶೆಟ್ಟರ, ಕಂಬಾರ ಗುರುಸ್ವಾಮಿ, ಸಂಗಪ್ಪ ಅಳ್ಳಿ, ಶಿವು ಕಾಮರಡ್ಡಿ ಸೇರಿದಂತೆ ಬಾಗಲಕೋಟ, ವಿದ್ಯಾಗಿರಿ, ಹೊನ್ನಾಕಟ್ಟಿ ಗುಳೇದಗುಡ್ಡ, ಕಮತಗಿ, ಸಂಗಮ ಕ್ರಾಸ್, ಶಿರೂರಿನ ಮಾಲಾಧಾರಿಗಳು ಹಾಗೂ ಗುರುಸ್ವಾಮಿಗಳು ಮೆರವಣಿಗೆ ಹಾಗೂ ಮಹಾಪೂಜೆಯಲ್ಲಿ ಪಾಲ್ಗೊಂಡಿದ್ದರು.

# ಕೊಟಕ್ ಮಹೀಂದ್ರಾ ಬ್ಯಾಂಕಿನ ಕೊಡುಗೆ ಕುಮಾರೇಶ್ವರ ಆಸ್ಪತ್ರೆಗೆ ಅಂಬ್ಯುಲೆನ್ಸ್ ಹಸ್ತಾಂತರ



ಮಲ್ಲಮ್ಮ ನುಡಿ ವಾರ್ತೆ


ಬಾಗಲಕೋಟೆ,ಡಿ.30–ನಗರದ ಬಿ.ವಿ.ವಿ.ಸಂಘದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಗೆ ಕೊಟಕ್ ಮಹೀಂದ್ರಾ ಬ್ಯಾಂಕ್ ವತಿಯಿಂದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯಡಿ (ಸಿ.ಎಸ್.ಆರ್) 45 ಲಕ್ಷ ರೂಪಾಯಿಗಳ ಮೌಲ್ಯದ ಅತ್ಯಾಧುನಿಕ ಅಂಬ್ಯುಲೆನ್ಸ್‌ನ್ನು ಕೊಡುಗೆಯಾಗಿ ನೀಡಲಾಯಿತು.

ಬಿ.ವಿ.ವಿ.ಸಂಘದ ಆಯುರ್ವೇದ ಕಾಲೇಜಿನ ನೂತನ ಆವರಣದಲ್ಲಿ ಕೊಟಕ್ ಮಹೀಂದ್ರಾ ಬ್ಯಾಂಕಿನ ರಿಜಿನಲ್ ಮುಖ್ಯಸ್ಥ ಕಾರ್ತಿಕ್.ಸಿ, ಏರಿಯಾ ಮ್ಯಾನೇಜರ್ ಲಕ್ಷ್ಮಿಕಾಂತ ಖೋಡೆ, ವಿಭಾಗೀಯ ಮ್ಯಾನೇಜರ್ ರವೀಂದ್ರ ಪಂಡಿತ, ರಿಜಿನಲ್ ಮಾರ್ಕೇಟಿಂಗ್ ಮ್ಯಾನೇಜರ್ ರಂಗನಾಥ ರಾಂಪೂರೆ ಮತ್ತು ಬಾಗಲಕೋಟ ಶಾಖಾ ಮ್ಯಾನೇಜರ್ ಪ್ರದೀಪ ಖಟಾವಕರ್ ಅವರು ಅಂಬ್ಯುಲೆನ್ಸ್ ಕೀಯನ್ನು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಅವರಿಗೆ ಹಸ್ತಾಂತರಿಸಿದರು.

ಅಂಬ್ಯುಲೆನ್ಸ್ ಕೀ ಸ್ವೀಕರಿಸಿ ಸಾರ್ವಜನಿಕರ ಸೇವೆಗಾಗಿ ಅಂಬ್ಯುಲನ್ಸ್ ವಾಹನ ಅಣಿಗೊಳಿಸಿದ ಡಾ.ವೀರಣ್ಣ ಚರಂತಿಮಠ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯಡಿ ಈ ಅಂಬ್ಯುಲೆನ್ಸ್‌ನ್ನು ಕುಮಾರೇಶ್ವರ ಆಸ್ಪತ್ರೆಗೆ ನೀಡುವುದರ ಮೂಲಕ ಕೊಟಕ್ ಬ್ಯಾಂಕ್ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ಅತ್ಯಂತ ಅರ್ಥಪೂರ್ಣವಾಗಿ ನಿರ್ವಹಿಸಿದೆ. ಸಾರ್ವಜನಿಕರ ಆರೋಗ್ಯ ಕುರಿತಾದ ಅವರ ಪ್ರಾಮಾಣಿಕ ಕಾಳಜಿ ಶ್ಲಾಘನೀಯ. ಕುಮಾರೇಶ್ವರ ಆಸ್ಪತ್ರೆಯು ಈ ಉನ್ನತ ಕೊಡುಗೆಯನ್ನು ಸಾರ್ವಜನಿಕರ ಆರೋಗ್ಯ ಸುಧಾರಣೆಗಾಗಿ ಸದ್ಬಳಕೆ ಮಾಡಿಕೊಳ್ಳುತ್ತದೆ ಎಂದು ಹೇಳಿ, ಕೊಟಕ್ ಬ್ಯಾಂಕ್‌ನ ವ್ಯವಸ್ಥಾಪಕರ ಈ ಅಭಿಮಾನದ ನೆರವಿಗೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಬಿ.ವಿ.ವಿ.ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ. ಎಮ್.ಸಜ್ಜನ (ಬೇವೂರ), ವೆಹಿಕಲ್ ಕಮಿಟಿ ಕಾರ್ಯಾಧ್ಯಕ್ಷ ಅಶೋಕ ಕರಡಿ (ರೇಣುಕೊಪ್ಪ), ಬಿ.ವಿ.ವಿ ಸಂಘದ ವಿವಿಧ ಸಮಿತಿಗಳ ಕಾರ್ಯಾಧ್ಯಕ್ಷರು ಮತ್ತು ಗೌರವಾನ್ವಿತ ಸದಸ್ಯರು, ಪ್ರೊ.ಎನ್.ಜಿ.ಕರೂರ, ಮೆಡಿಕಲ್ ಕಾಲೇಜ್ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಮತ್ತು ವಿವಿಧ ಸಂಸ್ಥೆಗಳ ಪ್ರಾಚಾರ್ಯರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ವೃದ್ಧಾಪ್ಯ ಜೀವನಕ್ಕೆ ನೆಮ್ಮದಿಯ ಬದುಕು ಅವಶ್ಯ–ಪ್ರದೀಪ ಗುರೂಜಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,30–ವೃದ್ಧಾಪ್ಯ ಜೀವನಕ್ಕೆ ನೆಮ್ಮದಿಯ ಬದುಕು ಅವಶ್ಯವಾಗಿದ್ದು, ಅದು ಸತ್ಸಂಗದಲ್ಲಿ ಪಾಲ್ಗೊಳ್ಳುವುದು, ಪ್ರವಚನ ಆಲಿಸುವುದರಿಂದ ದೊರೆಯುತ್ತದೆ ಎಂದು ಆಧ್ಯಾತ್ಮಿಕ ಚಿಂತಕ ಪ್ರದೀಪ ಗುರೂಜಿ ಹೇಳಿದ್ದಾರೆ.

ನಗರದ ಜಮಖಾನಾ ಕ್ಲಬ್ ಆವರಣದಲ್ಲಿ ಹಿರಿಯ ನಾಗರಿಕರ ಸೇವಾ ಸಂಸ್ಥೆ ಭಾನುವಾರ ಆಯೋಜಿಸಿದ್ದ ಮಾಸಿಕ ವೈಚಾರಿಕ ಚಿಂತನಗೋಷ್ಠಿಯಲ್ಲಿ ಮಾತನಾಡಿದ ಅವರು, ವೃದ್ಧಾಪ್ಯ ಶಾರೀರಿಕ ಮುಪ್ಪು ಅಷ್ಟೇ, ಈ ಸಮಯದಲ್ಲಿ ಜ್ಞಾನವೃದ್ಧಿ ಸ್ಥಿತಿಯನ್ನು ತಲುಪಿ ಪ್ರಬುದ್ಧತೆಯನ್ನು ಪಡೆದು ವೃದ್ಧನಾಗಬೇಕು ಎಂದರು.

ಮುಪ್ಪಾವಸ್ಥೆಯಲ್ಲಿ ಮನುಷ್ಯ ಚಿಂತೆಗಳ ಸಂತೆಯಲ್ಲಿ ಮುಳುಗದೇ ಭಗವಂತನ ನಾಮಸ್ಮರಣೆಗಾಗಿ ಕಾಲಹರಣ ಮಾಡಬೇಕು. ಆಧ್ಯಾತ್ಮದ ಕಡೆಗೆ ಒಲುವು ಬೆಳೆಸಿಕೊಳ್ಳಬೇಕು. ಮನೋಬಲ, ಆತ್ಮಸ್ಥೈರ್ಯ ಬೆಳೆಸಿಕೊಂಡು ನೆಮ್ಮದಿಯ ಬದುಕನ್ನು ಕಾಣಬೇಕು ಎಂದ ಪ್ರದೀಪ ಗುರೂಜಿ, ಇಳಿ ವಯಸ್ಸಿನಲ್ಲಿ ಸಂದಿಗ್ದತೆಯ ಜೀವನದಿಂದ ಹೊರಬಂದು ನೆಮ್ಮದಿಯಿಂದ ಬದುಕುವ ಕಲೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಹಿರಿಯ ನಾಗರಿಕರ ಸೇವಾ ಸಂಸ್ಥೆಯ ಉಪಾಧ್ಯಕ್ಷ, ನಿವೃತ್ತ ಕೃಷಿ ಉಪನಿರ್ದೇಶಕ ಆರ್. ಎಲ್.ಕಟಗೇರಿ ಮಾತನಾಡಿ, ವೃದ್ಧಾಪ್ಯದಲ್ಲಿ ಆಧ್ಯಾತ್ಮಿಕ ಚಿಂತನೆ ಒಂದು ದಿವ್ಯ ಔಷಧಿಯಾಗಿದೆ. ಚಿಂತೆ, ಕಂತೆಗಳನ್ನು ಬಿಟ್ಟು ನೆಮ್ಮದಿಯಿಂದ ಬದುಕುವುದನ್ನು ರೂಢಿಸಿಕೊಳ್ಳೋಣ ಎಂದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ನಾಗರಿಕರ ಸೇವಾ ಸಂಸ್ಥೆಯ ಅಧ್ಯಕ್ಷ ಮುರುಗೆಪ್ಪ ಹುಲಗಬಾಳಿ ಮಾತನಾಡಿ, ವೃದ್ಧಾಪ್ಯವನ್ನು ಸಂತೋಷ ಹಾಗೂ ಸಮರ್ಪಣಾ ಭಾವದಿಂದ ಕಳೆದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದು ಹೇಳಿದರು. ಸೇವಾ ಸಂಸ್ಥೆಯ ಕಾರ್ಯದರ್ಶಿ ಎಂ.ಟಿ.ಹರಗದ ಹಾಗೂ ಖಜಾಂಚಿ ಇಂಗಳಗಿ ಇದ್ದರು.

# ರೈತರ ಹಬ್ಬ ಎಳ್ಳು ಅಮಾವಾಸ್ಯೆ! ಭಜ್ಜಿ–ರೊಟ್ಟಿ ಊಟ ಸವಿದು ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ
(ಪರಮೇಶ ರಾಂಪುರೆ)

ಕಮಲನಗರ:ಕಮಲನಗರ ತಾಲೂಕಿನ ರೈತರು ಎಳ್ಳ ಅಮಾವಾಸ್ಯೆ ಹಬ್ಬವನ್ನು ಬಹಳ ಸಂಭ್ರಮ ಸಡಗರದಿಂದ ಆಚರಣೆ ಮಾಡಿದರು. ರವಿವಾರ ಬೆಳಗಿನ ಜಾವಾ ಹೊಲಕ್ಕೆ ಊಟ ಮತ್ತು ಪೂಜೆ ಸಾಮಗ್ರಿಗಳನ್ನು ತೆಗೆದು–ಕೊಂಡು ಹೋಗಿ ಲಕ್ಷ್ಮಿದೇವಿ ಪೂಜೆ ನೆರವೇರಿಸಿ ಹಬ್ಬಕ್ಕೆ ಚಾಲನೆ ನೀಡಿದರು.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚು ಆಚರಣೆಗೆ ಬರುವ ಈ ಹಬ್ಬ ರೈತರ ಹಬ್ಬವಾಗಿದೆ. ವರ್ಷವಿಡಿ ಬೆಳೆದ ಬೇಳೆಗೆ ವಿಶೇಷ ಪೂಜೆ ಮಾಡಿ ಭೂಮಿ ತಾಯಿಗೆ ಕೃತಜ್ಞಸಲ್ಲಿಸಿದರು. ಮೊದಲು ರೈತ ಪರಿವಾರದರು ಈ ದಿನ ಪರಿವಾರ ಸಮೇತ ಎತ್ತಿನ ಬಂಡಿಯಲ್ಲಿ ಹೋಗುತ್ತಿದರು. ಇತ್ತೀಚಿಗೆ ಕಾರು ಬೈಕ ಟೆಂಪೂ ಮೂಲಕ ದೂರದ ಹೊಲಗಳಿಗೆ ಹೋಗಿ ದಿನ ಪೂರ್ತಿ ಹೊಲದಲ್ಲಿ ಸಂಭ್ರಮದಿಂದ ಕಳೆದರು.

ಈ ಹಬ್ಬಕ್ಕೆ ಬಂದು ಬಳಗದವರು, ಸ್ನೇಹಿತರು ಹೀಗೆ ಎಲ್ಲರಿಗೆ ಪ್ರೀತಿಯಿಂದ ಬರಮಾಡಿಕೊಳ್ಳುವರು. ತಮ್ಮ ಹೊಲದಲ್ಲಿ ವನ ಕಳಕೆ ಯಿಂದ ಮಾಡಿದ ಗುಡಿಸಲು (ಕೊಂಪೆ) ಪೂಜೆಕ್ಕೆ ಸಾಕ್ಷಿಯಾಗುವರು. ಎಳ್ಳ ಅಮಾವಾಸ್ಯೆ ಹಬ್ಬಕ್ಕೆ ಮಾಡಿದ ವಿಶೇಷ ಊಟವಾದ ಭಜ್ಜಿ, ರೊಟ್ಟಿ, ಹುಗ್ಗಿ, ಜೋಳಅನ್ನ, ಅಮಲು ಭರಿಸುವ ಅಮಲಿ, ಕಾಣೋಲಿ, ಚಿತ್ರಾನ್ನ, ಹೀಗೆ ಬಗ್ಗೆ ಬಗ್ಗೆಯ ಅಡುಗೆಯನ್ನು ಸವಿದರು.

ನಂತರ ಮಕ್ಕಳು, ಯುವಕರು, ಹಿರಿಯರು ಎಲ್ಲರೂ ಜೋಕಾಲಿ ಆಡುವರು ಮಕ್ಕಳು ಗಾಳಿಪಟವನ್ನು ಬಾನೆತ್ತರಕ್ಕೆ ಹಾರಿಸುವರು.

ಸಂಜೆ ಮತ್ತೆ ಕೊಂಪೆ ಪೂಜೆ ಮಾಡಿ ಹಬ್ಬಕ್ಕೆ ಶುಭ ಮಂಗಲ ಮಾಡಿದರು. ರಾತ್ರಿ ಅಗ್ಗಿ ಸುಡುಲಾಯಿತು. ಎಲ್ಲರೂ ವಣ ಕಳಿಕೆ ಸುಡುಗಳನ್ನು ತಂದು ಊರಿನ ಹನುಮಾನ ಹತ್ತಿರ ಸುಡುವರು. ನಂತರ ಕೆಂಡದ ಬುದಿಯನ್ನು ಹಣೆಗೆ ಹಚ್ಚಿಕೊಂಡಿ ಅಗ್ಗಿ ತುಳಿಯುವರು.

ಹೀಗೆ ತಾಲೂಕಿನ ಕಮಲನಗರ, ಡಿಗ್ಗಿ, ತೋರಣ, ಡೋಣಗಾಂವ, ಸೋನಾಳ, ಹೊಳಸಮುದ್ರ, ಖೇಡ, ಬಾಲೂರ, ರಾಂಪುರ, ದಾಬಕಾ, ಚಿಮ್ಮಗಾಂವ, ಠಾಣಾ ಕುಶನೂರ ಸೇರಿದಂತೆ ಎಲ್ಲಾ ಹಳ್ಳಿಗಳಲ್ಲಿ ಎಳ್ಳ ಅಮಾವಾಸ್ಯೆ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಣೆ ಮಾಡಿದರು.

# ರಾಮಲಿಂಗಯ್ಯ ಶ್ರೀಗಳಿಂದ ಸಿ.ಎನ್.ಹಿರೇಮಠಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ರಾಷ್ಟ್ರೀಯ ಬೇಡ ಜಂಗಮ ಸಮಾಜದ ಕಾರ್ಯದರ್ಶಿಗಳಾದ ಸಿ.ಎನ್. ಹಿರೇಮಠ(ಬ್ಯಾಕೋಡ) ಇವರನ್ನು ಮಾನವಹಕ್ಕುಗಳ ಸಂರಕ್ಷಣೆ ಹಾಗೂ ಭಷ್ಟಾಚಾರ ನಿರ್ಮೂಲನೆ ಸಂಸ್ಥೆ ಬೆಂಗಳೂರು ಇದರ ವಿಜಯಪುರ ಜಿಲ್ಲಾ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದಕ್ಕಾಗಿ ಜ್ಯೋತಿಷ್ಯರತ್ನ ಪರಮ ಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳು ಅವರನ್ನು ಸನ್ಮಾನಿಸಿ ಆಶೀರ್ವಾದ ನೀಡಿದರು. ಸೋಮವಾರ ಬ್ಯಾಕೋಡ ಗ್ರಾಮದ ಹಿರೇಮಠರ ಜಮೀನನಲ್ಲಿ ಎಳ್ಳು ಅಮವಾಸ್ಯೆ ಹಬ್ಬದ ಅಂಗವಾಗಿ ಹಮ್ಮಿಕೊಂಡ ಚರಗಾ ಚೆಲ್ಲುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಮಲಿಂಗಯ್ಯ ಶ್ರೀಗಳು ಸಿ.ಎನ್.ಹಿರೇಮಠ ಅವರು ನಮ್ಮ ಸಮಾಜದ ಕಾರ್ಯದರ್ಶಿಯಾಗಿ ಅತ್ಯುತ್ತಮವಾಗಿ ಕಾರ್ಯ ಮಾಡಿದ್ದಾರೆ ಅವರಿಗೆ ಸಮಾಜದ ಕುರಿತು ಸಾಕಷ್ಟು ಕಾಳಜಿ ಇದೆ ಇದೀಗ ಅವರಿಗೆ ಬೆಂಗಳೂರಿನ ಈ ಸಂಸ್ಥೆಯವರು ಜಿಲ್ಲಾ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಸಂತೋಷದ ವಿಷಯವಾಗಿದೆ. ನಮ್ಮ ಆಶೀರ್ವಾದ ಸದಾ ಅವರಿಗೆ ಇದೆ ಎಂದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಹಿರೇಮಠರು ಶ್ರೀಗಳು ನನ್ನ ಮೇಲೆ ವಿಶ್ವಾಸ ವಿಟ್ಟು ಸಮಾಜದ ಜವಾಬ್ದಾರಿಯನ್ನು ಕೊಟ್ಟಿದ್ದಾರೆ ಇದನ್ನು ನಾನು ಪ್ರಮಾಣಿಕತೆಯಿಂದ ನಿರ್ವಹಿಸುತ್ತಿದ್ದೇನೆ. ಇದೀಗ ನನಗೆ ಬೆಂಗಳೂರಿನ ಈ ಸಂಸ್ಥೆಯ ಜಿಲ್ಲಾ ಉಪಾಧ್ಯಕ್ಷನನ್ನಾಗಿ ನೇಮಕ ಮಾಡಲಾಗಿದೆ ನಾನು ಶ್ರೀಗಳ ಆಶೀರ್ವಾದದೊಂದಿಗೆ ಈ ಕೆಲಸವನ್ನು ಪ್ರಾಮಾಣಿಕತೆಯೊಂದಿಗೆ ನಿರ್ವಹಿಸಲು ಪ್ರಯತ್ನಿಸುತ್ತೇನೆ ಎಂದರು. ಕಲಕೇರಿಯ ಸಿದ್ದರಾಮ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು. ಕೋಲಾರದ ಷ.ಬ್ರ. ಪ್ರಭುಕುಮಾರ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು, ಈ ವೇಳೆ ಭಾಜಪ ಪ್ರಧಾನ ಕಾರ್ಯದರ್ಶಿ ಅಮರಯ್ಯ ಹಿರೇಮಠ, ಶ್ರೀಕಾಂತ ಶಾಸ್ತ್ರಿಗಳು, ರುದ್ರಯ್ಯ ಹಿರೇಮಠ, ಶಿವಯ್ಯ ಹಿರೇಮಠ ಇದ್ದರು.

# ಖೆಲೋ ಇಂಡಿಯಾ ಯುನಿವರ್ಸಿಟಿ ಗೇಮ್ಸ್ಗೆ ಸಚಿನ್ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.30 –ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಚಿನ್ (ಜಿ.ಬಿ.ಆರ್. ಕಾಲೇಜು, ಹೂವಿನಹಡಗಲಿ) ಅವರು ಒಡಿಸ್ಸಾದ ಕಳಿಂಗ ವಿಶ್ವವಿದ್ಯಾಲಯ ಭುವನೇಶ್ವರದಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷ ಮತ್ತು ಮಹಿಳೆಯರ ಅಥ್ಲೆಟಿಕ್ ಪಂದ್ಯಾವಳಿಯಲ್ಲಿ ಹ್ಯಾಮರ್ ಥ್ರೊದಲ್ಲಿ ಖೆಲೋ ಇಂಡಿಯಾ ಯುನಿವರ್ಸಿಟಿ ಗೇಮ್ಸ್ 2025 ಕ್ಕೆ ಅರ್ಹತೆ ಪಡೆದಿದ್ದಾರೆ.

ಕ್ರೀಡಾಪಟುವಿನ ಸಾಧನೆಗೆ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು(ಆಡಳಿತ), ಕುಲಸಚಿವರು ಮೌಲ್ಯಮಾಪನ, ಹಣಕಾಸು ಅಧಿಕಾರಿಗಳು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ ಹಾಗೂ ಅಥ್ಲೆಟಿಕ್ಸ್ ತಂಡದ ವ್ಯವಸ್ಥಾಪಕರು ಮತ್ತು ತರಬೇತುದಾರರಾದ ಡಾ.ಶಶಿಧರ ಕೆಲ್ಲೂರ ಮತ್ತು ಬಡೇಸಾಬ ಸೇರಿದಂತೆ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗದವರು ಶುಭ ಕೋರಿದ್ದಾರೆ.

# ಜಿಲ್ಲಾ ಕಸಾಪ ವತಿಯಿಂದ ವಿಶ್ವಮಾನವ ದಿನಾಚರಣೆ
# ಕುವೆಂಪು ಸಾಹಿತ್ಯ ವಿಶ್ವಮಾನವ ಸಂದೇಶದ ಪ್ರತೀಕ :ಶೆಲ್ಲಿಕೇರಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.30–ರಾಷ್ಟ್ರಕವಿ ಕುವೆಂಪು ಸಾಹಿತ್ಯ ವಿಶ್ವಮಾನವ ಸಂದೇಶದ ಪ್ರತೀಕವಾಗಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು.

ಬಾಗಲಕೋಟೆ ನವನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಭವನದಲ್ಲಿ ರವಿವಾರ ರಸಋಷಿ ಕವಿ ಕುವೆಂಪು ಅವರ ಜನ್ಮ ದಿನದ ಅಂಗವಾಗಿ ವಿಶ್ವಮಾನವ ದಿನಾಚಾರಣೆಯಲ್ಲಿ ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಅವರು ಮಾತನಾಡಿದರು.

ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು ಬುದ್ಧನನ್ನಾಗಿ, ಅಂದರೆ ವಿಶ್ವಮಾನವನನ್ನಾಗಿ, ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆಯ ಆದ್ಯ ಕರ್ತವ್ಯವಾಗಬೇಕು ಎಂದು ಹೇಳಿದ ಶಿವಾನಂದ ಶೆಲ್ಲಿಕೇರಿ, ಲೋಕ ಉಳಿದು, ಬಾಳಿ ಬದುಕಬೇಕಾದರೆ ಪ್ರಪಂಚದ ಮಕ್ಕಳೆಲ್ಲ ಅನಿಕೇತನರಾಗಬೇಕು ಎಂಬ ಕುವೆಂಪು ಅವರ ಸಂದೇಶಗಳನ್ನು ಯುವ ಸಮೂಹಕ್ಕೆ ಮನವರಿಕೆ ಮಾಡಬೇಕಾಗಿದೆ ಎಂದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಉಪನ್ಯಾಸಕ ಸಂಗಮೇಶ ಬ್ಯಾಳಿ ಕುವೆಂಪುರವರ ಸಾಹಿತ್ಯಿಕ ಕೊಡುಗೆಗಳ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಕುವೆಂಪು ಅವರ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಯಾಗಿದೆ. ಅವರ ಈ ಪಂಚಮಂತ್ರ ನಮ್ಮೆಲ್ಲರ ದೃಷ್ಟಿಯಾಗಬೇಕಾಗಿದೆ. ನಮಗೆ ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ, ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ ಅದುವೇ ಸರ್ವೋದಯ ಎಂಬ ಕುವೆಂಪುರವರ ವಿಚಾರಗಳನ್ನು ನಮ್ಮ ನದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ ಪ್ರಾಸ್ತಾವಿಕವಾಗಿ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರು ತಿಳಿಸಿದಂತೆ ಮತ ತೊಲಗಿಸಿ, ಅಧ್ಯಾತ್ಮವು ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು ಮತ್ತು ಮತ ಮನುಜಮತವಾಗಬೇಕು, ಪಥ ವಿಶ್ವಪಥವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಪದಾಧಿಕಾರಿಗಳಾದ ಸಿ.ಎಸ್.ನಾಗನೂರ, ಶಂಕರ ಹೂಲಿ, ವಿಜಯಶ್ರೀ ಮುರನಾಳ, ಬಾದಾಮಿ ತಾಲೂಕ ಅಧ್ಯಕ್ಷ ಬಿ.ಎಫ್.ಹೊರಕೇರಿ, ಬೀಳಗಿ ತಾಲೂಕ ಅಧ್ಯಕ್ಷ ಗುರುರಾಜ ಲೂತಿ, ಹುನಗುಂದ ತಾಲೂಕ ಅಧ್ಯಕ್ಷ ಮಲ್ಲಿಕಾರ್ಜುನ ಸಜ್ಜನ, ಕವಿ ಯೋಗೇಶ ಲಮಾಣಿ, ದಾ–ಕ್ಷಾಯಣಿ ಮಂಡಿ, ಈಶ್ವರಯ್ಯ ವಜ್ರಮಟ್ಟಿ ಉಪಸ್ಥಿತರಿದ್ದರು.

# ಉಸ್ತಾದ ಜಾಕೀರ್ ಹುಸೇನಗೆ ಸ್ವರ ಶ್ರದ್ಧಾಂಜಲಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.30–ನಟರಾಜ ಸಂಗೀತ ವಿದ್ಯಾಲಯ ಮತ್ತು ಕಲಾಸಂಘ ಹಾಗೂ ನಟರಾಜ ನೃತ್ಯ ನಿಕೇತನಗಳ ವತಿಯಿಂದ ತಬಲಾ ಮಾಂತ್ರಿಕ ಉಸ್ತಾದ್ ಜಾಕೀರ್ ಹುಸೇನ್ ಅವರ ನಿಧನಕ್ಕೆ ಸ್ವರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿದ್ಯಾಗಿರಿಯ 15ನೇ ಕ್ರಾಸಿನಲ್ಲಿರುವ ನಟರಾಜ ನೃತ್ಯನಿಕೇತನದ ಆವರಣದಲ್ಲಿ ಹಿರಿಯ ತಬಲಾ ವಾದಕ ಪಂ.ಆರ್.ಎಚ್.ಮೋರೆ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿತು. ಜಾಕೀರ್ ಹುಸೇನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ತಬಲಾ ವಾದಕ ಕೇಶವ ಜೋಶಿ, ಉಸ್ತಾದ್ ಜಾಕೀರ್ ಹುಸೇನ್ ಅವರು ತಬಲಾ ಕ್ಷೇತ್ರದ ರಾಯಬಾರಿ ಇದ್ದಂತೆ. ಅವರ ಅಗಲಿಕೆಯಿಂದ ಸಂಗೀತ ಕ್ಷೇತ್ರ ಬಡವಾಗಿದೆ. ಈ ಕ್ಷೇತ್ರದಲ್ಲಿ ನಾನಾ ಸಾಧಕರು ಇದ್ದಾರಾದರೂ ಜಾಕೀರ್ ಹುಸೇನ್ ಮೂಡಿಸಿದ ಛಾಪು ಬೇರೆಯದ್ದೆ ಆಗಿತ್ತು ಎಂದು ಹೇಳಿದರು.

ವಿದುಷಿ ಶುಭದಾ ದೇಶಪಾಂಡೆ, ಕಲಾವಿದರಾದ ವಿಷ್ಣು ಜೋಶಿ ಫಂಡರಿ, ಶ್ರೀನಿವಾಸ ಕುಲಕರ್ಣಿ, ಪ್ರವೀಣ ಮಂಕಣಿ, ವಿನಯ ಕುಲಕರ್ಣಿ, ಪ್ರಸಾದ ಬದಾಮಿ, ವಿದ್ಯಾರ್ಥಿಗಳು ಇದ್ದರು.

# ಗುರುಕುಲದಲ್ಲಿ ಸಂಭ್ರಮದ ಎಳ್ಳಮವಾಸ್ಯೆ ಆಚರಣೆ



(ಮಲ್ಲಪ್ಪಾ ಟಿ ಹಾಸಗೊಂಡ)
ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ತಾಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಛಯದಲ್ಲಿ ಸೋಮವಾರ ಎಳ್ಳಮವಾಸ್ಯೆ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ನೇತೃತ್ವದಲ್ಲಿ ವಿಶ್ವಗುರು ಬಸವಣ್ಣನವರ, ಚನ್ನಬಸವ ಪಟ್ಟದ್ದೇವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ನಂತರ ಮಾತನಾಡಿದ ಗುರುಬಸವ ಪಟ್ಟದ್ದೇವರು, ಎಳ್ಳಮವಾಸ್ಯೆ ರೈತರ ಹಬ್ಬ. ರೈತರು ವರ್ಷವಿಡೀ ವಿವಿಧ ಬೆಳೆಗಳನ್ನು ಬೆಳೆದು ಅನ್ನದಾತರನ್ನು ಕಾಪಾಡುವ ಭೂಮಿ ತಾಯಿಗೆ ಈ ದಿನ ಗೌರವ ಸಲ್ಲಿಸುವ ಸಂದರ್ಭ. ರೈತ ದೇಶದ ಬೆನ್ನೆಲುಬು. ಹಾಗಾಗಿ, ಸರ್ವರೂ ಅನ್ನದಾತರನ್ನು ತುಂಬಾ ಗೌರವದಿಂದ ಕಾಣಬೇಕು ಎಂದು ತಿಳಿಸಿದರು.

ಚಟ್ನಿ, ಕಾಳು, ಎಣ್ಣೆಗಾಯಿ, ಎಳ್ಳು ಹಾಗೂ ಶೇಂಗಾ ಹೋಳಿಗೆ, ಎಳ್ಳು ಹಚ್ಚಿದ ಸಜ್ಜೆ, ಜೋಳದ ರೊಟ್ಟಿ, ಚಿಕ್ಕಿ, ಬರ್ತಾ, ಪಾಲಕ್ ಮೆಂತ್ಯೆ ಉಪಯೋಗಿಸಿ ತಯಾರಿಸುವ &ಟಿಥಿ; ಭಜ್ಜಿ ಪದಾರ್ಥವನ್ನು ಅಧಿಕಾರಿಗಳು, ವಿದ್ಯಾರ್ಥಿಗಳು ಸಹಭೋಜನ ಮಾಡಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಉಪ ಪ್ರಾಚಾರ್ಯ ಸಿದ್ರಾಮ ಗೊಗ್ಗಾ, ಜಯಕ್ಕಾ ಗಾಂವ್ಕರ್, ಅನಿಲ್ ಪಾಟೀಲ ಸೇರಿದಂತೆ ಇತರರು ಇದ್ದರು.

# ವ್ಯಕ್ತಿ ಕಾಣೆ: ಪ್ರಕರಣ ದಾಖಲು

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.30–ಸಿರುಗುಪ್ಪ ಪಟ್ಟಣದ ಬಸವೇಶ್ವರ ನಗರದ ನಿವಾಸಿ ಹಾಗೂ ಸಿಮೆಂಟ್ ವ್ಯಾಪಾರ ನಡೆತ್ತಿದ್ದ ಎಂ.ಸೋಮಪ್ಪ ಎನ್ನುವ 38 ವರ್ಷದ ವ್ಯಕ್ತಿ ನ.26 ರಂದು ಕಾಣೆಯಾಗಿರುವ ಕುರಿತು ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ. **ಕಾಣೆಯಾದ ವ್ಯಕ್ತಿಯ ಚಹರೆ:**

ಎತ್ತರ 5.6 ಅಡಿ, ದುಂಡು ಮುಖ, ಕಪ್ಪನೇ ಮೈಬಣ್ಣ, ದೃಢವಾದ ಮೈಕಟ್ಟು ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಬಿಳಿ ಬಣ್ಣದ ಅರ್ಧ ತೋಳಿನ ಅಂಗಿ, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ ಹಾಗೂ ಕನ್ನಡ ಭಾಷೆ ಮಾತನಾಡುತ್ತಾನೆ.

ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಸಿರುಗುಪ್ಪ ಪೊಲೀಸ್ ಠಾಣೆ–ಯ ಪಿಎಸ್‌ಐ ದೂ.08396–220333, ಸಿರುಗುಪ್ಪ ವೃತ್ತದ ಸಿಪಿಐ ದೂ.08396–220003, ಸಿರುಗುಪ್ಪ ಉಪ ವಿಭಾಗದ ಡಿಎಸ್‌ಪಿ ದೂ.08392–276000 ಅಥವಾ ಬಳ್ಳಾರಿ ಎಸ್‌ಪಿ ಕಚೇರಿ ದೂ.08392–25400 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತ ಕುಟುಂಬಗಳಿಂದ ಎಳ್ಳು ಅಮಾವಾಸ್ಯೆ ಸಂಭ್ರಮ ಆಚರಣೆ



(ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಎತ್ತುಗಳನ್ನು ಶೃಂಗರಿಸಿಕೊಂಡು ಹೋಲಕ್ಕೆ ತೆರಳಿದ ರೈತರು

ಇನ್ನೊಂದುಕಡೆಭೂಮಿತಾಯಿಯ ಪೂಜೆಯಲ್ಲಿ ತೊಡಗಿರುವ ಮಹಿಳೆಯರು

ಮತ್ತೊಂದುಕಡೆಕುಟುಂಬಸ್ಥರು ಸ್ನೇಹಿತರು ಸೇರಿ ಜಮೀನಿನಲ್ಲಿ ರೈತರು ಊಟ ಮಾಡುತ್ತಿದ್ದಾರೆ

ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷಅಂದಪ್ಪಕೋಳೂರು ತಿಳಿಸಿದರು.

ಎಸ್ ಈ ದೃಶ್ಯಗಳು ಕಂಡ ಬಂದಿದ್ದು ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಯರೇಹಂಚಿನಾಳ ಮಂಡಲಗೇರಿ ಸೋಂಪುರ ಸಿದ್ನೆಕೊಪ್ಪ ಇಟಗಿ ರಾಜೂರ ಆಡೂರು ಸೇರಿದಂತೆ ಗ್ರಾಮದಲ್ಲಿ ರೈತ ಕುಟುಂಬದ ಕೃಷಿಕರಿಗೆ ಬಹು ದೊಡ್ಡ ಹಬ್ಬ ಎಂದರೆ ಎಳ್ಳು ಅಮಾವಾಸ್ಯೆ ಎಲ್ಲೆಲ್ಲಿಯೂ ಸಮೃದ್ಧಿಯು ವೃದ್ಧಿಸಲಿ ಎಂದು ಅನ್ನ ನೀಡುವ ಭೂಮಾತಗೆ ಪೂಜೆ ಸಲ್ಲಿಸಿನೈವೇದ್ಯರೂಪದಲ್ಲಿ ಚರಗ ಚೆಲ್ಲುವ ಹಬ್ಬ ಆಧುನಿಕತೆಯ ಭರಾಟೆಯಲ್ಲಿಯು ಗ್ರಾಮೀಣ ಸೊಗಡಿನ ಹಬ್ಬ ಗಳೆಂದರೆ ಅನ್ನದಾತರುಮರತಿಲ್ಲಪ್ರತಿವರ್ಷಕ್ಕೆ ಒಮ್ಮೆಬರುವ ಎಳ್ಳುಅಮಾವಾಸ್ಯೆ ದಿನದಂದು ಚರಗ ಚೆಲ್ಲುವ ಹಬ್ಬಕ್ಕೆ ಮಹಿಳೆಯರು ತಮ್ಮ ಹೋಲದಲ್ಲಿ ಮೈದುಂಬಿದ ಬೆಳೆಗಳಿಗೆ ಮತ್ತು ಬನ್ನಿ ಮರಕ್ಕೆ ಪಾಂಡವರಿಗೆ ಪೂಜೆ ಸಲ್ಲಿಸುತ್ತಾರೆ ಬೆಳಿಗ್ಗೆ ಕುಟುಂಬಸ್ಥರು ಸ್ನೇಹಿತರೊಂದಿಗೆ ಚಕ್ಕಡಿಯಲ್ಲಿ ಟ್ಯಾಕ್ಟರ್ ಯಲ್ಲಿ ಹೊಲಗಳಿಗೆ ತೆರಳಿ ಭೂಮಾತೆಗೆ ಸೀರೆ ಅರ್ಪಿಸಿ ತಾವು ತಂದಿದ್ದ ವಿವಿಧ ಸಿಹಿ ಪದಾರ್ಥದ ಬಾನದ ನೈವೇದ್ಯವನ್ನ ಬೆಳೆಗಳಿಗೆ ಚರಗ ಚಲ್ಲುವ ಮೂಲಕ ಚರಗದ ಎಳ್ಳು ಅಮಾವಾಸ್ಯೆ ಹಬ್ಬವನ್ನು ಸಂಭ್ರಮದಿಂದ ಆಚರಿಸಿದ್ದಾರೆ

ಬಂದು ಬಳಗದವರು ಒಟ್ಟಿಗೆ ಸೇರಿ ಉತ್ತರ ಕರ್ನಾಟಕದ ವಿಶಿಷ್ಟ ಮತ್ತು ಸ್ವಾದಿಷ್ಟ ಬಾರಿ ಭೋಜನ ಸವಿದು ಸಂಭ್ರಮಿಸಿದರು.

ಇನ್ನೂ ಎಳ್ಳುಅಮಾವಾಸ್ಯೆಯಲ್ಲಿ ಉತ್ತರ ಕರ್ನಾಟಕದ ಅಡುಗೆಯ ವಿವಿಧ ಸಿಹಿ ಪದಾರ್ಥಗಳು ಸೇರಿದಂತೆ ಬಗೆ ಬಗೆಯ ಚರಗದ ಹಬ್ಬಕ್ಕಾಗಿಯೇ ವಿಶೇಷ ಸಜ್ಜೆಗಡು ಬಜಿ ಮಿರ್ಚಿ ಪುಂಡಿ ಪಲ್ಯೆ ಮಡಿಕಿ ಕಾಳು ಪಲ್ಯೆ ಹೆಸರು ಕಾಳು ಪಲ್ಯೆ ಬದನೆಕಾಯಿ ಪಲ್ಯೆ ಹುರಣದ ಹೋಳಿಗೆ ಶೇಂಗಾ ಹೋಳಿಗೆ ಎಳ್ಳು ಹೋಳಿಗೆ ಕರಿಗಡಬು ಕಡಕ್ ಜೋಳದ ರೊಟ್ಟಿ ಕಡಕ್ ಸಜ್ಜೆ ರೊಟ್ಟಿ ಕರದಿರುವ ಕಡಕ್ ಜೋಳದ ರೊಟ್ಟಿ ಶೀಂಗಾ ಹಿಂಡಿ ಕಡಲೆ ಹಿಂಡಿ ಗುರಳ್ಳು ಹಿಂಡಿ ಮೊಸರು ವಿವಿಧ ಚಟ್ನಿ ಚಿತ್ರಅನ್ನ ಬಿಳೆಅನ್ನ ಸಾಂಬಾರು ಮತ್ತು ಮಜ್ಜಿಗೆ ಸಾಂಬಾರು ಹಪ್ಪಳ ಸೊಂಡಿಗೆ ಹಿಗೆ ಬಾಯಿಲ್ಲಿ ನೀರುಳ್ಳಿಸುವ ಬಾರಿ ಭೋಜನವನ್ನು ಮನೆಯವರು ಸಂಬಂಧಿಗಳು ಬಿಗರು ಬಿಜ್ಜರು ಆತ್ಮೀಯ ಸ್ನೇಹಿತರೊಂದಿಗೆ ಸೇರಿ–ಕೊಂಡು ಹೋಲದಲ್ಲಿ ಇರುವ ಬನ್ನಿ ಮರದ ನೆರಳಲ್ಲಿ ಕುಳಿತು ಬಗೆಬಗೆಯ ಸಿಹಿ ಭೋಜನ ಸವಿದು ತೃಪ್ತಿ ಪಡುತ್ತಾರೆ ಇನ್ನು ಈ ಹಬ್ಬ ಸುಖ ಶಾಂತಿ ಮತ್ತು ಸಮೃದ್ಧಿಯ ಸಂಕೇತವಾಗಿ ಆಚರಿಸಲಾಗುತ್ತೇನೆಗಿಲಯೋಗಿಗಳು ಅಂತು ಖುಷಿ ಖುಷಿಯಿಂದ ಭೂಮಾತೆಗೆ ಪೂಜಿಸಿ ಸಂಭ್ರಮ ಪಡುತ್ತಾರೆ ಎಂದು ಕೊಟ್ರಯ್ಯ ಹಿರೇಮಠ ಸಿದ್ನೆಕೊಪ್ಪ ಗ್ರಾಮದ ರೈತ ಮುಖಂಡರು ತಿಳಿಸಿದರು.

ಆಧುನಿಕತೆಯ ಬರಟೆಯಿಂದ ಹಬ್ಬ ಹರಿದಿನಗಳು ಕಡಿಮೆ ಆಗುತ್ತಿರುವ ದಿನಗಳಲ್ಲಿ ವಿಶಿಷ್ಟದಿಂದ ಚರಗ ಚೆಲುವ ಎಳ್ಳು ಅಮಾವಾಸ್ಯೆ ಕೃಷಿಕರ ಹಬ್ಬ ಎಲ್ಲರನ್ನು ಹಿಡಿದಿಟ್ಟಿದೆ

ಆದರು ಏನೇ ಇರಲಿ ವರ್ಷಕ್ಕೊಮ್ಮೆ ಎಲ್ಲವನ್ನು ಮರೆತು ಹಿಗೆ ಮನೆಯವರು ಬಂಧು ಬಾಂಧವರು ಬಿಗರು ಬಿಜ್ಜರು ಆತ್ಮೀಯ ಸ್ನೇಹಿತರು ಮತ್ತು ಗೆಳೆಯರೊಂದಿಗೆ ಹೊಲದಲ್ಲಿ ಕುಳಿತು ರುಚಿ ರುಚಿ ಭೋಜನ ಸವಿಯುವುದು ನಮಗೆ ಖುಷಿ ವಿಚಾರವೇ ವಾಗಿದೆ ಸರಿ ಎಂದೆನಿಸುತ್ತದೆ ಎಂದರು

ಈ ಸಂದರ್ಭದಲ್ಲಿ ರೈತರಾದ ಮಾಂತೇಶ ಕೋಳೂರ, ಶರಬಣ್ಣ ಕೋಳೂರ, ಬಸವರಾಜ ಕೋಳೂರ, ಮಂಜುನಾಥ್ ಲಲಿತಾ ಕೋಳೂರ, ಸರಸ್ವತಿ ಕೋಳೂರ, ಸವಿತಾ ಕೋಳೂರ, ಬಸವರಾಜ,.ಜೋತೆವ್ವ ಮಣಿವ್ವ, ಯಂಕಪ್ಪ, ಸಂಬಂಧಿಕರು ಸ್ನೇಹಿತರು ಇತರರು. ಪಾಲ್ಗೊಂಡಿದ್ದರು.

# ರೈತರೊಂದಿಗೆ ಎಳ್ಳಮವಾಸ್ಯೆ ಆಚರಿಸಿದ ಶಾಸಕ ಪ್ರಭು ಚವ್ಹಾಣ



(ಶಿವಕುಮಾರ ಬಿರಾದಾರ)

ಮಲ್ಲಮ್ಮ ನುಡಿ ವಾರ್ತೆ

ಬೀದರ, ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು.ಬಿ ಚವ್ಹಾಣ ಅವರು ಡಿ.30ರಂದು ರೈತರೊಂದಿಗೆ ಎಳ್ಳಮವಾಸ್ಯೆ ಹಬ್ಬವನ್ನು ಆಚರಿಸಿದರು.

ಸ್ವ-ಗ್ರಾಮ ಬೋಂತಿ ತಾಂಡಾದಲ್ಲಿನ ಕೃಷಿ ಜಮೀನಿಗೆ ತೆರಳಿ ಪೂಜೆ ನೆರವೇರಿಸಿ, ಚರಗ ಚಲ್ಲುವ ಮೂಲಕ ಭೂತಾಯಿಗೆ ನಮನ ಸಲ್ಲಿಸಿದರು. ಎಳ್ಳಮವಾಸ್ಯೆ ಹಬ್ಬ ರೈತರಿಗೆ ಸುಖಃ ಶಾಂತಿ, ನೆಮ್ಮದಿ ಕಲ್ಪಿಸಲಿ ರೈತರ ಜೀವನ ಸಮೃದ್ಧವಾಗಲಿ ಎಂದು ದೇವರಲ್ಲಿ ಬೇಡಿಕೊಂಡರು.

ನಂತರ ಕುಟುಂಬಸ್ಥರು, ಗ್ರಾಮಸ್ಥರು, ಮುಖಂಡರು ಹಾಗೂ ಆತ್ಮೀಯರೊಂದಿಗೆ ಕುಳಿತು ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಭಜ್ಜಿಪಲ್ಯೆ, ಶೇಂಗಾ-ಎಳ್ಳಿನ ಹೋಳಿಗೆಯನ್ನು ಸೇವಿಸಿದರು. ಇದೇ ವೇಳೆ ಶಾಸಕರು ಹೊಲದಲ್ಲಿನ ಮರದಲ್ಲಿ ಜೋಕಾಲಿಯಾಡಿ ಖುಷಿ ಪಟ್ಟರು.

ನಂತರ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಸಂಚರಿಸಿ ರೈತರೊಂದಿಗೆ ಹಬ್ಬ ಆಚರಿಸಿದರು. ಔರಾದನಲ್ಲಿ ಶಿವರಾಜ ಅಲ್ಮಾಜೆ, ಲಾಧಾ ಗ್ರಾಮದಲ್ಲಿ ಶರಣಪ್ಪ ಮಿಠಾರೆ, ಚಾಂದೋರಿ ಸಂದೀಪ ಜಾಧವ್, ಹಕ್ಯಾಳದಲ್ಲಿ ಕಿರಣ ಪಾಟೀಲ ಅವರ ಹೊಲಗಳಿಗೆ ಭೇಟಿ ನೀಡಿದರು.

ಬಳಿಕ ಮಾತನಾಡಿ, ನಮ್ಮ ಭಾಗದಲ್ಲಿ ರೈತರು ಆಚರಿಸುವ ದೊಡ್ಡ ಹಬ್ಬಗಳಲ್ಲಿ ಎಳ್ಳಮವಾಸ್ಯೆ ಪ್ರಮುಖ ಹಬ್ಬವಾಗಿದೆ. ಎಲ್ಲ ರೈತರು ತಮ್ಮ ಹೊಲಗಳಿಗೆ ತೆರಳಿ ಭೂತಾಯಿಗೆ ಪೂಜೆ ಸಲ್ಲಿಸಿ ಕುಟುಂಬಸ್ಥರೊಂದಿಗೆ ಸಹಭೋಜನ ಮಾಡುವ ಅಪರೂಪದ ಹಬ್ಬ ಎಂದು ಬಣ್ಣಿಸಿದರು.

ಪ್ರತಿ ವರ್ಷ ನಾನು ರೈತರ ಜೊತೆಗೆ ಹಬ್ಬ ಆಚರಿಸುತ್ತಾ ಬಂದಿದ್ದೇನೆ. ಈ ವರ್ಷ ಕೂಡ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿನ ರೈತರ ಹೊಲಗಳಿಗೆ ಭೇಟಿ ನೀಡಿ ಹಬ್ಬ ಆಚರಿಸಿದ್ದೇನೆ. ಇದು ಭೂಮಾತೆ ಹಾಗೂ ರೈತರ ಮಹತ್ವವನ್ನು ಸಾರುವ ಹಬ್ಬವಾಗಿದೆ ಎಂದು ಹೇಳಿದರು. ನಾನು ಸದಾ ರೈತರ ಪರವಾಗಿ ಕೆಲಸ ಮಾಡುತ್ತಿದ್ದು, ಅವರ ಶ್ರೇಯಸ್ಸಿಗಾಗಿ ಮಾಡಬೇಕಾದ ಎಲ್ಲ ಕೆಲಸ ಕಾರ್ಯಗಳನ್ನು ಮಾಡುತ್ತಾ ಬಂದಿದ್ದೇನೆ. ಕೃಷಿ, ತೋಟಗಾರಿಕೆ ಹಾಗೂ ಮತ್ತಿತರೆ ಇಲಾಖೆಗಳಿಂದ ರೈತರಿಗಾಗಿ ಇರುವ ಎಲ್ಲ ಯೋಜನೆಗಳನ್ನು ರೈತರು ಸದುಪಯೋಗ ಪಡೆಯುವಂತೆ ಪ್ರೇರಣೆ ನೀಡಲಾಗುತ್ತಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮುಖಂಡರಾದ ಧೊಂಡಿಬಾ ನರೋಟೆ, ಮಾರುತಿ ಚವ್ಹಾಣ, ರಾಮಶೆಟ್ಟಿ ಪನ್ನಾಳೆ, ಬಾಲಾಜಿ ಠಾಕೂರ್, ಮಂಜು ಸ್ವಾಮಿ, ಮಾದಪ್ಪ ಮಿಠಾರೆ, ಕೇರಬಾ ಪವಾರ್ ಸೇರಿದಂತೆ ಸೇರಿದಂತೆ ಇತರರಿದ್ದರು.

# ಯುವತಿ ಕಾಣೆ: ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.30-ಸಿರುಗುಪ್ಪ ಪಟ್ಟಣದ ನಿವಾಸಿ ಗಾಯತ್ರಿ ಎನ್ನುವ 22 ವರ್ಷದ ಯುವತಿ ನ.18 ರಂದು ಕಾಣೆಯಾಗಿರುವ ಕುರಿತು ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ. ಯುವತಿಯ ಚಹರೆ:ಎತ್ತರ 5.5 ಅಡಿ, ದುಂಡು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಹಣೆಗೆ ಹಚ್ಚೆಗುರುತು ಇರುತ್ತದೆ. ಯುವತಿ ಕಾಣೆಯಾದ ಸಂದರ್ಭದಲ್ಲಿ ಕೆಂಪು ಬಣ್ಣದ ಚುಕ್ಕೆ ಇರುವ ನೈಟಿ ತೊಟ್ಟಿದ್ದು, ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾಳೆ. ಮೇಲ್ಕಂಡ ಚಹರೆ ಗುರುತುಗಳುಳ್ಳ ಯುವತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಸಿರುಗುಪ್ಪ ಪೊಲೀಸ್ ಠಾಣೆಯ ಪಿಎಸ್ಐ ದೂ.08396-220333, ಸಿರುಗುಪ್ಪ ವೃತ್ತದ ಸಿಪಿಐ ದೂ.08396-220003, ಸಿರುಗುಪ್ಪ ಉಪವಿಭಾಗದ ಡಿಎಸ್‌ಪಿ ದೂ.08392-276000 ಅಥವಾ ಬಳ್ಳಾರಿ ಎಸ್‌ಪಿ ಅವರ ಕಚೇರಿ ದೂ.08392-25400 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತೃಪ್ತಿ ಬಜಾಜ್‌ಗೆ ಅಂತರಾಷ್ಟ್ರೀಯ ಶ್ಲೋಕರತ್ನ ಪ್ರಶಸ್ತಿ ಪ್ರದಾನ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 30 :– ಇತ್ತಿಚೀಗೆ ಇಲ್ಲಿಯ ನಿವಾಸಿ ತೃಪ್ತಿ ವಿಶಾಲ ಬಜಾಜ್ ಅವರಿಗೆ ಅಂತರಾಷ್ಟ್ರೀಯ ಶ್ಲೋಕರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಬ್ರಹ್ಮಪುರ ಬಡಾವಣೆಯ ನಿವಾಸಿಯಾಗಿರುವ ತೃಪ್ತಿ ಬಜಾಜ್ ಅವರು ಗೀತಾ ಪರಿವಾರ ಸಂಸ್ಥೆಯ ಕಾರ್ಯದರ್ಶಿಯಾಗಿದ್ದು, ಜಿಲ್ಲೆಯಲ್ಲಿ ನಡೆಯುವ ಕುಕಿಂಗ್ ತರಬೇತಿ, ಅಬೆಕಸ್ ತರಬೇತಿ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ತರಗತಿಗಳನ್ನು ನಡೆಸುವರು.

ಮಹಾರಾಷ್ಟ್ರ ರಾಜ್ಯ ರಾಜ್ಯಧಾನಿ ಮುಂಬಯಿಯಲ್ಲಿರುವ ದೇವವಾಣಿ ಒಲಂಪಿಯಡ್ ಪ್ರಾವೆಟ್ ಲಿಮಿಟೆಡ್ ಸಂಸ್ಥೆಯು ದೇಶಾದ್ಯಂತ ನಡೆಯುತ್ತಿದ್ದು, ದೇಶದ ಎಲ್ಲ ವಯಸ್ಸಿನ ಸ್ತ್ರೀ-ಪುರುಷರಿಗಾಗಿ ಸಂಸ್ಕೃತ ಶ್ಲೋಕಗಳ ಮೇಲೆ ಅಧ್ಯಯನ ಮಾಡಿ ವಿಡಿಯೊ ರೆಕಾರ್ಡ್ ಮಾಡುವ ಸ್ಪರ್ಧೆ ನಿರಂತರವಾಗಿ ನಡೆಯುತ್ತಿದೆ. ಈ ವರ್ಷದ ಆಗಸ್ಟ್ ತಿಂಗಳ 11ರಂದು ಈ ಸ್ಪರ್ಧೆ ಜರುಗಿತು. ಅದಕ್ಕೆ ಸಮಯ ನಿಗದಿ ಮಾಡದಿದ್ದರೂ ತೃಪ್ತಿ ಬಜಾಜ್ ಅವರು ಆಗಸ್ಟ್ 11ರಿಂದ 17ರ ವರೆಗೆ ಅಂದರೆ ಕೇವಲ 7 ದಿನಗಳೊಳಗೆ 155 ಶ್ಲೋಕಗಳ ಮೇಲೆ ಅಧ್ಯಯನ ಮಾಡಿ ವಿಡಿಯೊ ರೆಕಾರ್ಡ್ ಮಾಡಿ ಶ್ಲೋಕಗಳ ಅರ್ಥವನ್ನು ಸಹ ತಿಳಿಸುವ ಕಾರ್ಯ ಇಲ್ಲಿ ನಡೆದಿರುತ್ತದೆ. ಮೂಲಕ ಒಟ್ಟು 15 ಲೇವಲ್‌ನಲ್ಲಿ ತನ್ನ ಗುರಿ ತಲುಪಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಈಗಾಗಲೇ ತೃಪ್ತಿ ಅವರಿಗೆ ಶ್ಲೋಕ ಆಚಾರ್ಯ ಪ್ರಶಸ್ತಿ ಲಭಿಸಿರುವುದು ಗಮನಾರ್ಹ. ಅದೇ ರೀತಿ ಬೀದರ್ ನಗರದ ವಿವಿಧ ಕಡೆಯಿಂದ ಸುಮಾರು 8 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿ ಕು.ತಪಶ್ಯಾ ಗಜರೆ 10 ಲೆವಲ್‌ನಲ್ಲಿ ನೊಂದಣಿ ಮಾಡಿ ಮೂರರಲ್ಲಿ ತೃತಿಯ ರ‍್ಯಾಂಕ್‌ನಲ್ಲಿ ಪಾಸಾಗಿರುವಳು. ಹಾಗೇ ಗ್ಲೋಬಲ್ ಸೈನಿಕ ಅಕಾಡೆಮಿ ಶಾಲೆಯಲ್ಲಿ ಈ ಸ್ಪರ್ಧೆಯಲ್ಲಿ 23 ವಿದ್ಯಾರ್ಥಿಗಳು ಭಾಗವಹಿಸಿದ್ದು, ಅದರಲ್ಲಿ ಇಬ್ಬರು ವಿದ್ಯಾರ್ಥಿಗಳಾದ ಸಾರ್ಥಕ ವಿನೋದಕುಮಾರ ಹಾಗೂ ಸಾನ್ವಿ ಮಜಕುರೆ ಇವರು ಅಗ್ರ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಇತ್ತಿಚೀಗೆ ಮಹಾರಾಷ್ಟ್ರದ ನಾಗಪುರದ ಜೈನ್ ಇಂಟರ್‌ನ್ಯಾಶ್ನಲ್ ಸ್ಕೂಲ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಈ ಸಂದರ್ಭದಲ್ಲಿ ದೇವವಾಣಿ ಒಲಂಪಿಯಡ್ ಪ್ರಾವೆಟ್ ಲಿಮಿಟೆಡ್‌ನ ಅಧ್ಯಕ್ಷರಾದ ಸ್ವಾತಿ ಚುಟೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರೀಶ ನಾಗಪಾಲ, ವ್ಯವಸ್ಥಾಪಕ ನಿರ್ದೇಶಕಿ ಡಾ.ನಿಲಮ್ ಖುಂಠಿಂ-ಯಾ, ನಿರ್ದೇಶಕಿ ಡಾ.ನೇಹಾ ಮಖ್ವಾನಾ ಹಾಗೂ ಇತರರು ಇದ್ದರು.

# ಸಚಿನ್ ಪ್ರಕರಣ ನಿಷ್ಪಕ್ಷಪಾತ ತನಿಖೆ ನಡೆಯಲಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರ ಸಚಿನ್ ಪಂಚಾಳ ಸಾವಿನ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಸುಲೇಪೇಟ್ ಏಕದಂಡಗಿ ಮಠದ ದೊಡ್ಡೇಂದ್ರಸ್ವಾಮೀಜಿ ಹೇಳಿದ್ದಾರೆ.

ತಾಲೂಕಿನ ಕಟ್ಟಿ ತೂಗಾಂವ ಗ್ರಾಮದ ಸಚಿನ ಪಂಚಾಳ ನಿವಾಸಕ್ಕೆ ಶನಿವಾರ ಭೇಟಿ ನೀಡಿದ ಅವರು ಸಚಿನ್ ಸಾವು ನೋವು ತರಿಸಿದೆ. ಕುಟುಂಬದ ಸದಸ್ಯರು ಧೈರ್ಯದಿಂದ ಇರಬೇಕು. ಇಡಿ ಸಮಾಜ ನಿಮ್ಮೊಂದಿಗಿದೆ ಎಂದು ತಿಳಿಸಿದರು.

ವಿಶ್ವಕರ್ಮ ಮಹಾಸಭಾದ ಅಧ್ಯಕ್ಷ ದತ್ತಾತ್ರಿ ವಿಶ್ವಕರ್ಮ ಮಾತನಾಡಿ, ಸಚಿನ್ ಪ್ರಕರಣದಲ್ಲಿ ಕುಟುಂಬಸ್ಥರಿಗೆ ನ್ಯಾಯ ಸಿಗಬೇಕು ಇಲ್ಲದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಮಹಾಸಭಾದ ಯುವಘಟಕದ ಅಧ್ಯಕ್ಷ ಪ್ರಶಾಂತ ವಿಶ್ವಕರ್ಮ ಮಾತಾನಾಡಿ, ಸಚಿನ್ ಸಾವಿನಿಂದ ಕುಟುಂಬದ ಆಧಾರ ಸ್ತಂಭ ಕಳಚಿದಂತಾಗಿದೆ. ಕೂಡಲೇ ಸರಕಾರ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಬೇಕು. ಜತೆಗೆ&ಟಿಥಿ; ಸಚಿನ್ ಸಾವಿಗೆ ಕಾರಣರಾದವರನ್ನು ಬಂಧಿಸಿ ಕಠಿಣ ಶಿಕ್ಷೆ ಒದಗಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಶಾಂತ ವಿಶ್ವಕರ್ಮ, ಅಶೋಕ ಪೊದ್ದಾರ, ಸೋಮನಾಥ ಪಂಚಾಳ, ಪಾಂಡುರಂಗ ಪಂಚಾಳ, ಮಹಾದೇವ ಮೌನೇಶ, ಮಂಜುನಾಥ ಇದ್ದರು.

# ದಯಾನಂದ ಪೂಜಾರಿ ಕಜಾಪ ವಲಯ ಅಧ್ಯಕ್ಷ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.30-ಕನ್ನಡ ಜಾನಪದ ಪರಿಷತ್ತಿನ ಬೀಳಗಿ ತಾಲೂಕಿನ ಬಾಡಗಿ ವಲಯ ಘಟಕದ ಅಧ್ಯಕ್ಷರಾಗಿ ದಯಾನಂದ ಪೂಜಾರಿ ಅವರನ್ನು ನೇಮಕ ಮಾಡಲಾಗಿದೆ. ಕಜಾಪ ಜಿಲ್ಲಾ ಅಧ್ಯಕ್ಷ ಡಿ.ಎಂ.ಸಾವಕಾರ ಅವರು ದಯಾನಂದ ಪೂಜಾರಿ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಜಾನಪದ ಕಲೆಗಳು, ಕ್ಷೇತ್ರ ಕಾರ್ಯ, ದಾಖಲೀಕರಣ, ತರಬೇತಿ ಮೂಲಕ ಜಾನಪದ ಕಲೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ತಾವು ಕ್ರಿಯಾಶೀಲರಾಗಿ ಮತ್ತು ಪ್ರಾಮಾಣಿಕರಾಗಿ



ಕಾರ್ಯನಿರ್ವಹಿಸಬೇಕೆಂದು ನೂತನ ಅಧ್ಯಕ್ಷ ಪೂಜಾರಿ ಅವರಿಗೆ ಕಜಾಪ ಬೀಳಗಿ ತಾಲೂಕಾ ಅಧ್ಯಕ್ಷ ಬಸವರಾಜ ಡಾವಣಗೇರಿ ತಿಳಿಸಿದ್ದಾರೆ.

# ಇಟಗಾ; ಪಿಕೆಪಿಎಸ್ 12 ಸ್ಥಾನಗಳಿಗೆ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ತಾಲೂಕಿನ ಇಟಗಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ 12 ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ನಡೆದಿದೆ. ಒಟ್ಟು 12 ನಿರ್ದೇಶಕರ ಸ್ಥಾನಗಳ ಪೈಕಿ 12 ಸ್ಥಾನಗಳಿಗೆ ಅವಿರೋಧವಾಗಿ ಆನಂದಸಾಗರ ಸಂಗಪ್ಪ, ಸಂತೋಷ ಬಸವಣ್ಣಪ್ಪ, ಬಸಪ್ಪ ನಿಂಗಪ್ಪ, ಶಂಕರ ಯಂಕಪ್ಪ, ಅಣ್ಣೆಪ್ಪ ಶಂಕ್ರಪ್ಪ, ಕಸ್ತೂರಬಾಯಿ ಸಂಗಪ್ಪ, ಕಲಾವತಿ ವೆಂಕಟರೆಡ್ಡಿ, ಪ್ರಭು ಭೀಮಶಾ, ಜೈಭೀಮ ಪುಂಡಲೀಕ, ಮಂಜುನಾಥ ಅಂಬಣ್ಣ, ಎಂಡಿ ಇಸ್ಮಾಯಿಲ್ ರುಕ್ಕಮೋದ್ದಿನ ಮತ್ತು ಸಾಲಗಾರರಲ್ಲದ ಮತಕ್ಷೇತ್ರದಿಂದ ಮಾಣಿಕಪ್ಪ ರಾಮಶೇಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಭೀಮಪ್ರಕಾಶ ಸೊನಕಾಂಬಳೆ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪಿಕೆಪಿಎಸ್ ಮುಖ್ಯ ಕಾರ್ಯನಿರ್ವಾಹಕ ದೀಪಿಕಾ ಇದ್ದರು.

# ಅಂಗನವಾಡಿ ಹುದ್ದೆಗಳ ನೇಮಕ: ಅಪೂರ್ಣ ಅರ್ಜಿಗಳನ್ನು ಪೂರ್ಣಗೊಳಿಸಲು ಜನವರಿ.5 ರವರೆಗೆ ಅವಕಾಶ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಡಿ.30 :– ಬೀದರ ಜಿಲ್ಲೆಯ ಬೀದರ, ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿನ ವಿವಿಧ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 30 ಅಂಗನವಾಡಿ ಕಾರ್ಯಕರ್ತೆ ಹಾಗೂ 65 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾದಿಕಾರಿಗಳು ಹಾಗೂ ಅಧ್ಯಕ್ಷರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿ ಬಈದರ ಇವರ ಅನುಮತಿ ಪಡೆದುಕೊಂಡು ಸರಕಾರದ ಆದೇಶದಂತೆ, ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿತ್ತು.

ಅದರಂತೆ ಮಂಗ ಆನ್‌ಲೈನ್ ನಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸುವಾಗ ವೈಬ್‌ಸೈಟ್‌ನಲ್ಲಿ ಒಟ್ಟು 04 ಹಂತಗಳಿದ್ದು, ಇದರಲ್ಲಿ ಕೆಲವು ಅರ್ಜಿದಾರರಿಗೆ 01ನೇ ಹಂತದಲ್ಲಿಯೇ "Application SuccessfullyUploaded" ಎಂಬ ಸಂದೇಶಗಳು ಅರ್ಜಿದಾರರ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಅರ್ಜಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಶಿಶು ಅಭಿವೃದ್ಧಿ ಯೋಜನೆ ಬೀದರ ವ್ಯಾಪ್ತಿಯಲ್ಲಿ 901 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 478 ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಅಪೂರ್ಣ ಅರ್ಜಿಗಳು ಸ್ವೀಕೃತವಾಗಿರುತ್ತದೆ.

ದಿನಾಂಕ: 20-12-2024ರ ಸರಕಾರದ ಆದೇಶದಲ್ಲಿ ಅರ್ಜಿ ಸಲ್ಲಿಸುವ 04 ಹಂತಗಳನ್ನು ಪೂರ್ಣಗೊಳಿಸಿದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ದಿನಾಂಕ: 26-12-2024 ರಿಂದ 05-01-2025 ರವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೈಬ್‌ಸೈಟ್‌ನಲಿ ಇಲಾಖಾ ವತಿಯಿಂದಲೇ ಅವಕಾಶ ನೀಡಿ ಆದೇಶಿಸಲಾಗಿರುತ್ತದೆ. ಆದ್ದರಿಂದ ದಿನಾಂಕ: 26-12-2024 ರಿಂದ 05-01-2025ರವರೆಗೆ ಕಾಲಾವಕಾಶ ನಿಗದಿಪಡಿಸಿಸಲಾಗಿದೆ.

ಅಭ್ಯರ್ಥಿಗಳು 04 ಹಂತಗಳಲ್ಲಿ ಪೂರ್ಣಗೊಳಿಸಿದಬೇಕಾಗಿರುವ ವಿವರ: ಒಂದನೇ ಹಂತದಲ್ಲಿ ಆನ್‌ಲೈನ್ ತಂತ್ರಾಂಶದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ಭರ್ತಿ ಮಾಡುವುದು, ಎರಡನೇ ಹಂತದಲ್ಲಿ ತಮ್ಮ ಭಾವಚಿತ್ರ ಹಾಗೂ ಸಹಿಯನ್ನು ಅಪ್‌ಲೋಡ್ ಮಾಡುವುದು. ಮೂರನೇ ಹಂತದಲ್ಲಿ ತಮ್ಮ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು. ನಾಲ್ಕನೇ ಹಂತದಲ್ಲಿ ತಮ್ಮ ಆಧಾರ್ ಸಂಖ್ಯೆ ನಮೂದಿಸಿ, ಇ-ಹಸ್ತಾಕ್ಷರದೊಂದಿಗೆ ಅರ್ಜಿಯನ್ನು ಪೂರ್ಣಗೊಳಿಸುವುದು.

ಅಪೂರ್ಣವಾದ ಅರ್ಜಿಗಳ ಅರ್ಜಿ ಸಂಖ್ಯೆ ಹಾಗೂ ಇತ-ರೆ ವಿವರಗಳನ್ನೊಳಗೊಂಡ ಮಾಹಿತಿಯು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಬೀದರ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಬೀದರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಹೊಸ ವರ್ಷಾಚರಣೆ ವೇಳೆ ಸ್ವಯಂ ನಿಯಂತ್ರಣವಿರಲಿ : ಗೃಹಸಚಿವ ಪರಮೇಶ್ವರ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಡಿ.30- ಹೊಸ ವರ್ಷದ ಸಂದರ್ಭದಲ್ಲಿ ಸುರಕ್ಷತಾ ಕ್ರಮಗಳು ಹಾಗೂ ಸ್ವಯಂ ನಿಯಂತ್ರಣದ ಮೂಲಕ ಸಂಭ್ರಮಾಚರಣೆ ಮಾಡುವಂತೆ ಗೃಹಸಚಿವ ಡಾ.ಜಿ.ಪರಮೇಶ್ವರ್‌ವರು ಸಾರ್ವಜನಿಕರಿಗೆ ಸೂಚನೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸ ವರ್ಷದ ಆಚರಣೆ ಯಲ್ಲಿ ಎಚ್ಚರಿಕೆಯಿಂದ ನಿಮ ಸಂತೋಷವನ್ನು ಹಂಚಿಕೊಳ್ಳಿ. ಹಿಂದೆಲ್ಲಾ ಆಚರಣೆಯ ವೇಳೆ ಬಹಳಷ್ಟು ಮಂದಿ ಪ್ರಾಣ ಕಳೆದುಕೊಂಡಿರುವುದನ್ನು ಬೆಂಗಳೂರು ಹಾಗೂ ಹೊರಭಾಗದ ಅನೇಕ ಜಿಲ್ಲೆಗಳಲ್ಲಿ ನೋಡಿದ್ದೇವೆ ಎಂದು ಹೇಳಿದರು.

ಈಗಾಗಲೇ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ ಅಗತ್ಯ ಸೂಚನೆಗಳನ್ನು ನೀಡಿದ್ದೇನೆ.



ಪ್ರತಿವರ್ಷವೂ 7 ರಿಂದ 8 ಲಕ್ಷ ಮಂದಿ ಬೆಂಗಳೂರಿನಲ್ಲಿ ಸೇರುವುದನ್ನು ನೋಡುತ್ತಿದ್ದೇವೆ. ಈ ವರ್ಷ ಇನ್ನೂ ಸ್ವಲ್ಪ ಹೆಚ್ಚು ಜನ ಸೇರುವ ಸಾಧ್ಯತೆಯಿದೆ. ಅದಕ್ಕಾಗಿ ಅಗತ್ಯ ತಯಾರಿಗಳನ್ನು ಮಾಡಿಕೊಂಡಿದ್ದೇವೆ ಎಂದರು.

ಹೆಚ್ಚಿನ ಪೊಲೀಸರನ್ನು ಭದ್ರತಾ ಕಾರ್ಯಗಳಿಗೆ ನಿಯೋಜಿಸಲಾಗಿದೆ. ಹಿರಿಯ ಅಧಿಕಾರಿಗಳಿಗೂ ಜವಾಬ್ದಾರಿ ವಹಿಸಲಾಗಿದೆ. ಹೊಸ ವರ್ಷದ ಆಚರಣೆ ಸಂದರ್ಭದಲ್ಲಿ ಪ್ರತಿಯೊಬ್ಬರೂ ಎಚ್ಚರಿಕೆಯಿಂದಿರಬೇಕು. ಯಾರಿಗೂ ತೊಂದರೆಯಾಗದಂತೆ ನಡೆದುಕೊಳ್ಳಬೇಕು ಹಾಗೂ ಸ್ವಯಂ ರಕ್ಷಣೆ ಕೂಡ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಹೋಟೆಲ್ ಹಾಗೂ ರೆಸ್ಟೋರೆಂಟ್ ವ್ಯಾಪಾರ ವಹಿವಾಟುಗಳಿಗೂ ರಾತ್ರಿ 1 ಗಂಟೆಯವರೆಗೂ ನಿಯಮಾನುಸಾರ ಕಾಲಾವಕಾಶವಿದೆ. ಅದರ ನಂತರ ವ್ಯಾಪಾರಕ್ಕೆ ಅವಕಾಶ ನೀಡುವುದು ಕಷ್ಟವಾಗಿದೆ ಎಂದು ಹೇಳಿದರು.

ಕರ್ನಾಟಕ ಸರ್ಕಾರ

**ನಗರಸಭೆ ರಾಯಚೂರು**

Website:-www.raichurcity.gov.in E-mail:itstaff_ulb_raichura@yahoo.com
Phone No: 08532-226768 Fax No: 08532-226316

ಸಂ.ನಸರಾ/ತಾಂತ್ರಿಕ/ಕಾ/ನ.ನಿ/202,203/2024-25 ದಿನಾಂಕ: 26-12-2024

**ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ).**

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸ ತಕ್ಕದ್ದು, ಹಾಗೂ ಹೆಚ್ಚಿನ ವಿವಳಿಗಾಗಿ ನಗರಸಭೆಯ ವೆಬ್‌ಸೈಟ್ WWW.raichurcity.mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

**1) ಅನುದಾನದ ವಿವರ:** ನಗರಸಭೆ ಅನುದಾನದಲ್ಲಿ **ಕಾಮಗಾರಿಗಳ ವಿವರ:** Providing and Laying of UGD Line from H.No-2-5-163 to 2-5-167 and Praveen Kumar H.No.2-5-157 to Towads Nawarang Darwaza Main Road and H.No.2-5-120 Yousuf Arts to H.No:2-5-117 Naseer House and Ar-Raheman Masjid to Towards Main Road at Ward No-08 In Raichur City. Estimate Amount Rs.14,40,000/- **ಇಂಡೆಂಟ್ ನಂಬರ:** DMA/2024-25/WS/ WORK_INDENT34141 **2) ಅನುದಾನದ ವಿವರ:** ನಗರಸಭೆ ಅನುದಾನದಲ್ಲಿ **ಕಾಮಗಾರಿಗಳ ವಿವರ:** Detailed Estimate for Extension of the Shoulders Both Side for the Existing to BT Road from Moti Masjid to Navarang Darwaza at Ward No-08 In Raichur City. Estimate Amount Rs. 16,40,000/- **ಇಂಡೆಂಟ್ ನಂಬರ:** DMA/2024-25/RD/ WORK_INDENT34132

ಸಹಿ/- ಪೌರಾಯುಕ್ತರು,
ನಗರಸಭೆ, ರಾಯಚೂರು.

DIPR/RCR/623/KSMCA/624/2024-25

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy. Office Ph. No: +91 9449732000.